ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸೆಪ್ಟೆಂಬರ್ 2019. ಬೆಲೆ ರೂ.5/-



04-10-2019
ಶುಕ್ರವಾರ
ರಾತ್ರಿ
ಗರುಡ ವಾಹನ

ತಿರುಮಲೆ

ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವ

30-09-2019 ರಿಂದ 08-10-2019 ರ ವರೆಗೆ

ತಿರುಮಲೆ ತಿರುಪತಿ ದೇವಸ್ಥಾನಗಳು

## 2019 ಜುಲೈ 13, 14 ದಿನಾಂಕದಲ್ಲಿ
## ಭಾರತದ ರಾಷ್ಟ್ರಪತಿ ಗೌ॥ ಶ್ರೀ ರಾಮ್‌ನಾಥ್ ಕೋವಿಂಧ್ ರವರು
## ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ,
## ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ,
## ತಿರುಮಲೆ ಶ್ರೀ ವರಾಹ ಸ್ವಾಮಿಯವರ ಮತ್ತು
## ಶ್ರೀ ವೆಂಕಟೇಶ್ವರ ಸ್ವಾಮಿಯವರ ದರ್ಶನವನ್ನು
## ಕುಟುಂಬ ಸಮೇತವಾಗಿ ಪಡೆದ ದೃಶ್ಯಗಳು

















# ಭಗವದ್ಗೀತೆ

ದೃಷ್ಟ್ವಾತು ಪಾಂಡವಾನೀಕಂ ವ್ಯೂಢಾಂ ದುರ್ಯೋಧನಸ್ತದಾ
ಆಚಾರ್ಯ ಮುಪಸಂಗಮ್ಯ ರಾಜಾ ವಚನಮಬ್ರವೀತ್

(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 2)

**ಪಾಂಡವರ ದಂಡು ಸಜ್ಜಾಗಿ ನಿಂತಿದ್ದುದನ್ನು ನೋಡಿದ ಅರಸನಾದ ದುರ್ಯೋಧನನು ಗುರುಗಳಾದ ದ್ರೋಣರ ಬಳಿಗೆ ಬಂದು ಹೀಗೆ ಹೇಳಿದನು.**


ವಂದಿಸುವುದಾದಿಯಲಿ ಗಣನಾಥನ
ಸಂದೇಹ ಸಲ್ಲ ಶ್ರೀ ಹರಿಯಾಜ್ಞೆ ಇದಕುಂಟು
ಹಿಂದೆ ರಾವಣ ತಾನು ವಂದಿಸದೆ ಗಜಮುಖನ
ನಿಂದು ತಪವನು ಗೈದುವರ ಪಡೆಯಲು
ಒಂದು ನಿಮಿಷದಿ ಬಂದು ವಿಘ್ನವನು ಆಚರಿಸಿ
ತಂದ ವರಗಳನೆಲ್ಲಾ ಧರೆಗೆ ಇಳಿಸಿದನು
ಅಂದಿನಾ ಬಗೆಯರಿತು ಮುಂದೆ ಗಣಪನ ಪೂಜಿಸೆಂದು ಪೇಳೆ
ಒಂದೇ ಮನದಲಿ ಬಂದು ಪೂಜಿಸಲು ಗಣನಾಥ
ಹೊಂದಿಸಿದ ನಿರ್ವಿಘ್ನದಿಂದ ರಾಜ್ಯವನು
ಇಂದು ಜಗವೆಲ್ಲ ಉಮೆನಂದನನ ಪೂಜಿಸಲು
ಚಂದದಿಂದಲಿ ಸಕಲ ಸಿದ್ಧಿಗಳನಿತ್ತು
ತಂದೆ ಸಿರಿಪುರಂದರ ವಿಠಲನ ಸೇವೆಯೊಳು
ಬಂದ ವಿಘ್ನವ ಕಳೆದು ಆನಂದವನು ಕೊಡುವ

\- ಶ್ರೀ ಪುರಂದರ ದಾಸರು



(ನಾಲ್ಕನೆಯ ದಶಕವು)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಪರಹಿತಮನುಕಂಪೇ ಭಾವಯಂತ್ಯಾಂ ಭವತ್ಯಾಂ ಸ್ಥಿರಮನುಪಧಿ ಹಾರ್ದಂ ಶ್ರೀನಿವಾಸೋ ದಧಾನಃ।**

**ಲಲಿತರುಚಿಷು ಲಕ್ಷ್ಮೀಭೂಮಿನೀಳಾಸು ನೂನಂ ಪ್ರಥಯತಿ ಬಹುಮಾನಂ ತ್ವತ್ಪ್ರತಿಚ್ಛಂದಬುದ್ಧ್ಯಾ ॥೩೬॥**

ಹಿಂದಿನ ಪದ್ಯದಲ್ಲಿ ದಯಾದೇವಿಯ ನಿಯಮನದಿಂದ ಸರ್ವೇಶ್ವರನು ಪಡುವ ಪಾಡುಗಳನ್ನು ವರ್ಣಿಸಿದರು. ಹೀಗೆ ತನ್ನನ್ನು ಅನೇಕ ವಿಧವಾದ ಶ್ರಮಗಳಿಗೆ ಒಳಪಡಿಸುವ ದಯಾದೇವಿಯ ವಿಷಯದಲ್ಲಿ ಸರ್ವೇಶ್ವರನಿಗೆ ಸ್ವಲ್ಪವಾದರೂ ಮನಃಕಾಲುಷ್ಯವುಂಟೋ? ಎಂದರೆ, ಅದೇ ಒಂದು ಆಶ್ಚರ್ಯಕರವಾದ ಸಂಗತಿಯೆಂದು ಕವಿಯು ನಿರೂಪಿಸುತ್ತಾರೆ. ದಯಾದೇವಿಯ ವಿಷಯದಲ್ಲಿ ಮನಃಕಾಲುಷ್ಯವಿಲ್ಲದಂತೆ ವಿಶೇಷವಾದ ಪ್ರೇಮವನ್ನೇ ಇಟ್ಟಿರುವನೆಂಬುದು ಮಾತ್ರವಲ್ಲ - ತನ್ನ ವಕ್ಷಃ ಸ್ಥಲದಲ್ಲಿ ಸರ್ವದಾ ವಾಸಿಸುತ್ತಿರುವ ಶ್ರೀದೇವಿ, ಭೂದೇವಿ, ನೀಳಾದೇವಿಗಳಲ್ಲಿಯೂ, ದಯೆಯು ಪ್ರತಿಬಿಂಬಗಳೇ ಅವರೆಂಬ ಭಾವನೆಯಿಂದ ವಿಶೇಷವಾದ ಗೌರವನ್ನಿಟ್ಟುರುತ್ತಾನೆ. ಇದು ನಿಶ್ಚಯ. ಆದರಿಂದಲೇ ದಯಾದೇವಿಯ ಮಹಿಮೆಯು ಅದ್ಭುತವಾದುದೆಂದು ಒಂದು ಉತ್ಪ್ರೇಕ್ಷೆಯಿಂದ ಹಿಂದೆ ಬಂದ ಸಂದೇಹಕ್ಕೆ (ದಯಾದೇವಿಯ ವಿಷಯದಲ್ಲಿ ಮನಃ ಕಾಲುಷ್ಯವುಂಟೋ ಎಂಬ ಸಂದೇಹಕ್ಕೆ) ಸಮಾಧಾನವನ್ನು ಹೇಳುತ್ತಾ ಈ ಪದ್ಯದಲ್ಲಿ ದಯಾದೇವಿಯನ್ನು ಹೊಗಳುತ್ತಾರೆ. ದಯಾದೇವಿಯು ಎಲ್ಲ ಕಾಲದಲ್ಲಿಯೂ ಪ್ರತಿಕೂಲಾಚರಣೆಯುಳ್ಳ ಸಂಸಾರಿಗಳಾದ ಚೇತನರ ವಿಷಯದಲ್ಲಿ ಹಿತವನ್ನೇ ಚಿಂತಿಸುತ್ತಲೂ ಮಾಡುತ್ತಲೂ ಇರುವಳು. ಆದ್ದರಿಂದಲೇ ಅವರ ವಿಷಯವಾಗಿ ಭಗವಂತನಿಗೆ ಸ್ಥಿರವಾದುದೂ, ಅವ್ಯಾಜವಾದುದೂ ಆದ ಒಂದು ಪ್ರೇಮ. ಹೀಗಿರುವಾಗ, ಭಗವಂತನು ದಯಾದೇವಿಯಲ್ಲಿರುವ ಪರಹಿತ ಚಿಂತನವೆಂಬ ಗುಣವನ್ನು ಶ್ರೀ ಭೂ ನೀಳಾದೇವಿಗಳಲ್ಲಿಯೂ ವಿಶೇಷವಾಗಿ ಕಂಡಾಗ - 'ಇವರು ದಯಾದೇವಿಯ ಪ್ರತಿಬಿಂಬಗಳೇ ಸರಿ; ಏಕೆಂದರೆ ಬಿಂಬದಲ್ಲಿರುವ ಗುಣಗಳೇ ಅಲ್ಲವೇ ಪ್ರತಿಬಿಂಬಗಳಲ್ಲಿಯೂ ತೋರುವುದು ನಾನು ಇದುವರೆಗೂ ದಯಾದೇವಿಯಲ್ಲಿ ಅನುಭವಿಸಿಕೊಂಡು ಬರುತ್ತಿರುವ ಗುಣವು ಇವರಲ್ಲಿಯೂ ಕಂಡು ಬರುವುದರಿಂದ ಇವರು ದಯಾದೇವಿಯ ಪ್ರತಿಬಿಂಬಗಳೆ' ಎಂದು ನಿಶ್ಚಯಿಸಿ, ಅವಳಲ್ಲಿರುವಂತೆ ಅವರಲ್ಲಿಯೂ ವಿಶೇಷವಾದ ಗೌರವವನ್ನಿಟ್ಟು ತನ್ನ ಎದೆಯಲ್ಲಿಯೂ ಸಮೀಪದಲ್ಲಿಯೂ ಅವರನ್ನು ಇಟ್ಟುಕೊಂಡಿರುವನು. ಇದೇ ಸರ್ವೇಶ್ವರನು ದಯೆಯನ್ನು ಕೊಂಡಾಡುವ ರೀತಿ ಎಂಬುದು ಕವಿಯ ಚತುರೋಕ್ತಿ. ಸರ್ವೇಶ್ವರನ ದೇವಿಯರೆಲ್ಲರೂ ಚೇತನ ಸಂರಕ್ಷಣದಲ್ಲಿ ಒಂದೇ ಅಭಿಪ್ರಾಯವುಳ್ಳವರಾಗಿ ಪರಮ ದಯೆಯಿಂದ ಪರಮ ಪುರುಷನಿಗೆ ಪುರುಷಕಾರವನ್ನು ಮಾಡಿ ಚೇತನನನ್ನು ರಕ್ಷಿಸುವರೆಂಬ ಶಾಸ್ತ್ರಾರ್ಥವು ಇಲ್ಲಿ ವಿವಕ್ಷಿತವಾದುದು.

ಈ ಪದ್ಯದಲ್ಲಿರುವ "ಪರಹಿತಮನುಕಂಪೇ ಭಾವಯಂತ್ಯಾಂ ಭವತ್ಯಾಂ" ಎಂಬುದು ತಾತ್ಪರ್ಯ ಚಂದ್ರಿಕೆಯಲ್ಲಿರುವ "ಪರಹಿತಪ್ರಾವಣ್ಯಂ ದಯಾ" - ಎಂದರೆ, ಪರಹಿತದಲ್ಲಿ ಆಸಕ್ತವಾಗಿರುವಿಕೆಯೇ ದಯೆಯೆಂದು ನಿಷ್ಕರ್ಷಿಸಿರುವ ಅರ್ಥವನ್ನು ಸ್ಮರಣೆಗೆ ತರುತ್ತದೆ. "ಸ್ಥಿರಮನುಪಧಿ ಹಾರ್ದಂ" ಎನ್ನುವುದರಿಂದ "ಜಲಧೇರಿವ ಶೀತತಾ" - ಎಂಬ ಪದ್ಯದಲ್ಲಿ ಹೇಳಿರುವಂತೆ ಸರ್ವೇಶ್ವರನಿಗೆ ದಯೆಯು ಸ್ವಾಭಾವಿಕವಾದ ಗುಣವೆಂಬುದು ವ್ಯಕ್ತವಾಗುವುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸಂಪುಟ - 50 ಸಂಚಿಕೆ - 4

ಶ್ರೀ ವಿಕಾರಿನಾಮ ಸಂವತ್ಸರ
ಭಾದ್ರಪದ- ಆಶ್ವಯುಜ ಮಾಸ
ಸಂಚಿಕೆ

## ಸೆಪ್ಟೆಂಬರ್ 2019




## ವಿಷಯಸೂಚಿಕೆ


ಸಂಪಾದಕೀಯ 6

ಹಸಿರುತೋರಣ

ತಿರುಮಲೆಯ ಬೆಟ್ಟದೊಡೆಯನೆ ನಮ್ಮ ಪರದೈವ 7
- ಕೆ.ನರಸಿಂಹಮೂರ್ತಿ

ತಿರುಪತಿ ಶ್ರೀ ವೆಂಕಟೇಶ್ವರ 12
- ದಿ॥ಬಿ.ಎನ್. ಶ್ರೀನಿವಾಸನ್

ಗಣೇಶ ಚತುರ್ಥಿ ತನ್ನ ನಿಮಿತ್ತ ಸಕಾಲಿಕ ನುಡಿನಮನ 14
- ಶ್ರೀಮತಿ. ಕೆ.ವಿ.ಪದ್ಮಾವತಿ

ಅನಂತ ಚತುರ್ಥಿ 16
- ಡಾ॥ ಪಿ. ಗುರುರಾಜ್

ಶಕ್ತ್ಯಾಮೇಶ ಅವತಾರವಾದ ಪೃಥು ಮಹಾರಾಜನ ಚರಿತ್ರೆ 20
- ಡಿ. ಎಸ್. ಬದ್ರಿನಾಥ್

ಶ್ರೀ ಭೂವರಾಹ ಸ್ವಾಮಿ 23
- ಶ್ರೀಮತಿ. ಎಸ್. ಸುರೇಖ

ಸಂಸ್ಕಾರ ಸಮನ್ವಿತ ಜೀವನವೃತ್ತಿ 24
- ಆರ್.ಎನ್.ಎನ್.ಮೂರ್ತಿ

ಜಯ ಜಗದ್ಗುರು ಶಂಕರಾಚಾರ್ಯ 31
- ಡಾ॥ಮಲ್ಲೇಶಪ್ಪ ಸಿದ್ರಾಂಪುರ

ಛಾಂದೋಗ್ಯೋಪನಿಷತ್ 35
-ಶ್ರೀಮತಿ.ಎ.ಗೀತ ವೀರರಾಘವನ್

ಪಿತೃಪಕ್ಷ ಮಹಾಲಯ ಅಮಾವಾಸ್ಯೆ 39
- ಶ್ರೀಮತಿ. ಸುಮಚಂದ್ರಶೇಖರ್

ಮನೋ ಬಲವನ್ನು ತಿಳಿದುಕೊಳ್ಳಿ 43
- ಡಿ.ಎಸ್.ಭೂಮಿಕ

ಆರೋಗ್ಯಕ್ಕೆ ಪ್ರಕೃತಿಯ ದೇಣಿಗೆ ಹುಣಸೇಹಣ್ಣು 45
- ಶ್ರೀಮತಿ

ಶ್ರೀ ಆದಿವರಾಹ ಗೋವಿಂದ 47
- ಶ್ರೀಮತಿ. ಗೀತಾ

ದಿವ್ಯಕ್ಷೇತ್ರ ತಿರುಮಲೆ 49
- ಶ್ರೀಮತಿ. ಜಿ. ಪದ್ಮಜ

ಶರಣು ಶರಣು ಗಣನಾಥ 52
- ಎಸ್. ವೆಂಕಟರಾಘವನ್


ಮುಖಚಿತ್ರ - ಸ್ವಾಮಿಯವರ ಗರುಡೋತ್ಸವ, ತಿರುಮಲೆ
ಹಿಂಬದಿಚಿತ್ರ - ಸ್ವಾಮಿಯವರ ರಥೋತ್ಸವ, ತಿರುಮಲೆ




**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಜಿ.ಎ.ಜಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.
ಶ್ರೀ ಪಿ.ಶಿವಪ್ರಸಾದ್ ತಿ.ತಿ.ದೇ., ತಿರುಪತಿ.

**ವಿಶ್ರಾಂತಿ ಚಿತ್ರಕಾರರು**

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ: 0877 - 2264359
ಸಂಪಾದಕರು : 0877 - 2264360

**24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ**
0877 - 2277777,
2233333

ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800 - 425 - 4141

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org** ಮೂಲಕ
ವೀಕ್ಷಿಸಬಹುದು.


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ


ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org

## ಸಂಪಾದಕೀಯ

# ಬ್ರಹ್ಮೋತ್ಸವದ ಕೀರ್ತಿಬಾವುಟದಲ್ಲಿ ---ಎಷ್ಟೋ ಅದೆಷ್ಟೋ ಮಹಾನುಭಾವರು!!

ತಿರುಮಲೆಯ ಬೆಟ್ಟದ ಮೇಲೆ ಸ್ವಯಂವ್ಯಕ್ತನಾಗಿ ನೆಲೆಸಿರುವ ಶ್ರೀ ವೇಂಕಟೇಶ್ವರಸ್ವಾಮಿಯ ಬ್ರಹ್ಮೋತ್ಸವವು ಎಲ್ಲಾ ಉತ್ಸವಗಳಿಗಿಂತಲೂ ವಿಶೇಷವಾದುದು. ಶ್ರೇಷ್ಟವಾದುದು, ವೈಭವದಿಂದ ಕೂಡಿರುವಂತದು.ಇದು ಒಂದು ರೀತಿಯ ಪ್ರತ್ಯೇಕತೆಯನ್ನು ಹೊಂದಿರುವಂತದು.

ಉತ್+ಸವಂ=ಉತ್ಸವಂ."ಉತ್" ಎಂದರೆ ಅತ್ಯಂತ ಶ್ರೇಷ್ಠವೆಂದೂ, "ಸವಂ" ಎಂದರೆ "ಯಜ್ಞ" ಎಂದರ್ಥ. ವಿಶೇಷವಾಗಿ ಈ ಪವಿತ್ರವಾದ ಹೋಮವನ್ನು ಹತ್ತು ದಿನಗಳ ಕಾಲ ಹಗಲೂ ರಾತ್ರಿ ವಿರಾಮವಿಲ್ಲದಂತೆ ಚತುರ್ಮುಖ ಬ್ರಹ್ಮದೇವನು ನೆರವೇರಿಸಿದ್ದರಿಂದ ಇದಕ್ಕೆ ಬ್ರಹ್ಮೋತ್ಸವವೆಂದು ಹೆಸರು ಬಂದಿದೆ.

ಈ ಬ್ರಹ್ಮೋತ್ಸವ ಲೋಕಕಲ್ಯಾಣಕ್ಕಾಗಿ , ನಿತ್ಯಪೂಜಾಹೀನ ಪ್ರಾಯಶ್ಚಿತ್ತಾರ್ಥವಾಗಿ, ನಿತ್ಯಪೂಜಾದೋಷ ಪ್ರಾಯಶ್ಚಿತ್ತಾರ್ಥವಾಗಿ, ಎಲ್ಲಾ ಅಶುಭಗಳ ನಿವಾರಣೆಗಾಗಿ ನಡೆಸುತ್ತಾರೆ. ಅಷ್ಟೇ ಅಲ್ಲದೇ ಭಗವಂತನ ಮೂಲಮೂರ್ತಿಯಲ್ಲಿ ಇರುವ ಶಕ್ತಿಯನ್ನು ಇಮ್ಮಡಿಗೊಳಿಸುವ ಉದ್ದೇಶದಿಂದಲೂ ಈ ಬ್ರಹ್ಮೋತ್ಸವವನ್ನು ನಡೆಸುತ್ತಾರೆ. ಇದಕ್ಕೆ ಮಹೋತ್ಸವ ತಿರುನಾಳ್ಳು, ಕಲ್ಯಾಣೋತ್ಸವ ಎಂದೂ ಹೆಸರು.

ಒಂದು ಆಲಯದ ಘನತೆಯಾಗಲೀ, ಪ್ರಾಮುಖ್ಯತೆಯಾಗಲಿ, ಆ ಆಲಯದ ಉತ್ಸವಗಳ ಆರಂಭ.ಅದು ಆಕರ್ಷಿಸುವ ಯಾಂತ್ರಿಕ ಸಂಖ್ಯಾ ಸಮುದಾಯ, ಅವುಗಳ ರೀತಿಗಳ ಬಗೆಗೆ ಆಧಾರಗೊಂಡಿರುತ್ತದೆ. ಇದು ಸರ್ವೇಸಾಧಾರಣವಾದ ವಿಷಯ. ಆ ದೃಷ್ಟಿಯಿಂದ ನೋಡಿದರೆ ತಿರುಮಲೆಯ ಶ್ರೀವೇಂಕಟೇಶ್ವರಸ್ವಾಮಿಯ ಬ್ರಹ್ಮೋತ್ಸವಗಳು ಆ ಸ್ವಾಮಿಯ ಪ್ರಸಿದ್ಧಿಗೆ ತಕ್ಕಂತೆ ಅನೇಕ ತಲೆಮಾರುಗಳಿಂದ ನೆರವೇರಿಸಲ್ಪಡುತ್ತಿದೆ ಎಂದೇ ಹೇಳಬಹುದು.

ಬ್ರಹ್ಮೋತ್ಸವವು ಪ್ರತೀ ವರ್ಷವೂ ನಡೆಯುತ್ತದೆ. ಊರೆಲ್ಲಾ ಉತ್ಸಾಹದಿಂದ ಕಳೆಕಳೆಯಾಗಿರುತ್ತದೆ. ಆ ಸಂತೋಷ ಸಂಭ್ರಮದಲ್ಲಿ ಹಳೆಯ ವಿಷಯವನ್ನೆಲ್ಲಾ ಮರೆಯುವುದು ಮನುಷ್ಯನ ಸ್ವಭಾವ. ಎಲ್ಲದರಲ್ಲೂ ಅಂದಿಗೂ ಇಂದಿಗೂ ಎಷ್ಟು ವ್ಯತ್ಯಾಸವೋ! ಎಷ್ಟು ಬದಲಾವಣೆಗಳೋ! ಅನಾದಿಕಾಲದಿಂದಲೂ ಅನೇಕ ರಾಜರುಗಳು, ರಾಣಿಯರು, ಬ್ರಹ್ಮೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಿ ಚರಿತ್ರೆಯಲ್ಲಿ ನಿಂತುಹೋಗಿದ್ದಾರೆ. ಹಿಂದಿನಕಾಲದಲ್ಲಿ ತಿಂಗಳು, ತಿಂಗಳಿಗೂ ಬ್ರಹ್ಮೋತ್ಸವಗಳು ನಡೆಯುತ್ತಿದ್ದುವಂತೆ. ಆ ರೀತಿ ವರ್ಷಕ್ಕೆ ಹನ್ನೊಂದು ಬಾರಿ ಈ ಉತ್ಸವಗಳು ನಡೆಯುತ್ತಿದ್ದುವಂತೆ. ಅವು ಇಂದಿಗೂ ನಡೆಯುತ್ತಿವೆ ಎಂದರೆ ಅವರುಗಳ ಅಕುಂಠಿತ ದೀಕ್ಷೆಯೇ ಇದಕ್ಕೆ ಪ್ರಧಾನ ಕಾರಣವೆಂದರೆ ತಪ್ಪಾಗಲಾರದು.ಅಂದಿನಿಂದಲೂ ಅನೇಕ ಮಹಾನುಭಾವರು, ಶ್ರೀ ವೇಂಕಟೇಶ್ವರನ ಪರಮ ಭಕ್ತರುಗಳು ಎಷ್ಟೋ ವ್ಯಯಪ್ರಯಾಸಗಳಿಂದ ಸ್ವಾಮಿಯವರಿಗೆ ಬ್ರಹ್ಮೋತ್ಸವಗಳನ್ನು ನಡೆಸಿದರು. ಬ್ರಹ್ಮೋತ್ಸವ ಕೀರ್ತಿಪತಾಕೆಯನ್ನು ಪ್ರಪಂಚದಲ್ಲೆಲ್ಲಾ ವೈಭವದಿಂದ ಹಾರಾಡುವಂತೆ ಮಾಡಿದರು.

ಆ ರೀತಿ ಆ ಕಾಲದಲ್ಲಿ ಪ್ರತಿ ತಿಂಗಳು ನಡೆಯುತ್ತಿದ್ದ ಈ ಉತ್ಸವಗಳು ಈಗ ಪ್ರಸ್ತುತ ಕಾಲದಲ್ಲಿ ಶ್ರೀನಿವಾಸನಿಗೆ ಒಂದೇ ಒಂದು ಬ್ರಹ್ಮೋತ್ಸವವಾಗಿ ಅದೂ ತಮಿಳಿನ ಪೆರಟಾಸಿ ನೆಲ ಅಂದರೆ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ಸಾಕ್ಷಾತ್ತು ಬ್ರಹ್ಮದೇವನಿಂದ ಪ್ರಾರಂಭಿಸಲ್ಪಟ್ಟಿತೆಂದು ಹೇಳುತ್ತಿರುವ ಈ ಬ್ರಹ್ಮೋತ್ಸವದಲ್ಲಿ, ಶಾಶ್ವತವಾಗಿ ನಿಂತಿರುವ ಶ್ರೀ ವೇಂಕಟೇಶ್ವರನು ಇಂದಿಗೂ ಅಷ್ಟೇ ವೈಭವದಿಂದ ಈ ಉತ್ಸವಗಳನ್ನು ನಡೆಸಿಕೊಳ್ಳುತ್ತಿದ್ದಾನೆಂದರೆ ಅದು ಅತ್ಯಂತ ಅಪುರೂಪವೂ, ವಿಶೇಷವು, ವಿಶಿಷ್ಟವೂ ಆಗಿದೆ. ಆ ರೀತಿ ಅಂದಿನಿಂದ ಇಂದಿನವರೆಗೂ ಶ್ರೀನಿವಾಸನ ಎಲ್ಲಾ ಉತ್ಸವಗಳಿಗಿಂತಲೂ ಈ ಬ್ರಹ್ಮೋತ್ಸವಗಳಿಗೆ ಅತ್ಯಂತ ಪ್ರಾಮುಖ್ಯತೆ ಇದೆ. ಅಂತಹಾ ಬ್ರಹ್ಮೋತ್ಸವಗಳನ್ನು ದರ್ಶಿಸಿ, ಸ್ವಾಮಿಯನ್ನು ಸೇವಿಸಿದವರಿಗೆ ಪುನರ್ಜನ್ಮ ಇರುವುದಿಲ್ಲ. ಹಾಗೆಯೇ ವಾಹನಸೇವೆಗಳ ದರ್ಶನವೂ ಮುಕ್ತಿಪ್ರದಾಯಕವೆಂದು ಹೇಳುತ್ತಾರೆ.

ಶೇಷವಾಹನ - ಕುಟುಂಬದ ಒಳಿತಿಗಾಗಿ: ಹಂಸವಾಹನ- ಬ್ರಹ್ಮಪದ ಪ್ರಾಪ್ತಿಗಾಗಿ: ಸಿಂಹವಾಹನ -ಧೈರ್ಯಸಿದ್ಧಿಗಾಗಿ: ಮುತ್ತಿನಚಪ್ಪರದ ವಾಹನ - ಸಕಲ ಸೌಭಾಗ್ಯ ಸಿದ್ಧಿಗಾಗಿ: ಕಲ್ಪವೃಕ್ಷವಾಹನ - ಐಹಿಕ ಆಮುಷ್ಮಿಕ ಫಲಪ್ರಾಪ್ತಿಗಾಗಿ: ಸರ್ವಭೂಪಾಲ ವಾಹನ - ಯಶೋಪ್ರಾಪ್ತಿಗಾಗಿ: ಮೋಹಿನೀ ಅವತಾರ - ಮಾಯಾಮೋಹದ ನಾಶಕ್ಕಾಗಿ ಗರುಡವಾಹನ - ಸರ್ವಪಾಪ ಪ್ರಾಯಶ್ಚಿತ್ತಕ್ಕಾಗಿ: ಹನುಮಂತವಾಹನ - ಭಗವದ್ಭಕ್ತಿ ಪ್ರಾಪ್ತಿಗಾಗಿ: ಗಜವಾಹನ - ಕರ್ಮಮುಕ್ತಿಗಾಗಿ: ಸೂರ್ಯಪ್ರಭ ವಾಹನ - ಆಯುರಾರೋಗ್ಯಪ್ರಾಪ್ತಿಗಾಗಿ: ಚಂದ್ರಪ್ರಭವಾಹನ - ಮಾನಸಿಕಶಾಮತಿಗಾಗಿ: ರಥೋತ್ಸವ - ಮನೋವಾಂಛಫಲ ಸಿದ್ಧಿಗಾಗಿ: ಅಶ್ವವಾಹನ - ಕಲಿಕಲ್ಮಷನಾಶನಕ್ಕಾಗಿ : ಚಕ್ರಸ್ನಾನ - ಸಕಲಪಾಪವಿಮೋಚನೆಗಾಗಿ: ಎಂದು ಪುರಾಣಗಳು ಸಾರುತ್ತಿವೆ. ಆದ್ದರಿಂದ ಈ ಸೇವೆಗಳಲ್ಲಿ ಎಲ್ಲರೂ ಪಾಲ್ಗೊಂಡು ಆ ದೇವದೇವನ ಕೃಪೆಗೆ ಪಾತ್ರರಾಗಬೇಕೆಂದು "ಸಪ್ತಗಿರಿ" ಪ್ರಾರ್ಥಿಸುತ್ತಿದೆ.

**ಬ್ರಹ್ಮೋತ್ಸವವನ್ನು ದರ್ಶಿಸಿ!!! ಧನ್ಯರಾಗಿ!!**

**ಓಂ ನಮೋ ವೇಂಕಟೇಶಾಯ**

## ಹಸಿರು ತೋರಣ

# ತಿರುಮಲೆಯ ಬೆಟ್ಟದೊಡೆಯನೆ ನಮ್ಮ ಪರಮದೈವ


- ಮೂಲ.ಶ್ರೀ ಮಹಾಭಾರತಂ ಗುರುಸ್ವಾಮಿ ನಾಯುಡು

- ಅನುವಾದ ಕೆ. ನರಸಿಂಹಮೂರ್ತಿ


ಆಳ್ವಾರರ ತಮಿಳು ಪ್ರಬಂಧಗಳಲ್ಲಿ ಸ್ಪಷ್ಟವಾಗಿ ಮೊಟ್ಟ ಮೊದಲು 'ವೇಂಗಡಂ' ಅಂದರೆ ಬೆಟ್ಟ ಎಂದೂ 'ವೇಂಗಡ ಮುಡ್ತೈಯಾನ್' ಅಂದರೆ ಗಿರಿನಾಥ, ಪರ್ವತರಾಜ, ಎಂದು ಪ್ರಸ್ತಾಪಿಸಲಾಗಿದೆ.

ಈ ಆಳ್ವಾರರು ಬೇರೆ ಬೇರೆ ಕಾಲದವರು, ಬೇರೆ ಬೇರೆ ರಾಷ್ಟ್ರಗಳಿಗೆ ಸೇರಿದವರು. ಬೇರೆ ಬೇರೆ ಜಾತಿ-ಕುಲಗಳಲ್ಲಿದ್ದವರು, ಬೇರೆ ಬೇರೆ ವೃತ್ತಿಗಳನ್ನು ಮಾಡಿದವರು, ಇವರಲ್ಲಿ ರಾಜರು (ಕುಲಶೇಖರಾಳ್ವಾರರು) ನಾಯಕನು (ತಿರುಮಂಗೈ ಆಳ್ವಾರು),ಅರ್ಚಕರು (ಪೆರಿಯಾಳ್ವಾರರು), ಸಾಮಂತರು (ನಮ್ಮಾಳ್ವಾರರು) ಯೋಗಿಗಳು (ಪೊಯೇಗೈ, ಪೂದತ್ತ, ಪೇಯಾಳ್ವಾರರು) ಇರುವರು. ಬ್ರಾಹ್ಮಣರು, ಶೂದ್ರರಿದ್ದಾರೆ. ಅವರವರ ಪ್ರಬಂಧಗಳ ಮೂಲಕ ಅವರವರ ವೃತ್ತಿಗಳು ತಿಳಿದು ಬಂದಿವೆ. ದಕ್ಷಿಣ ದೇಶಗಳಲ್ಲಿರುವ ಬೇರೆ ಬೇರೆ ವಿಷ್ಣು ಕ್ಷೇತ್ರಗಳನ್ನು ಸಂದರ್ಶಿಸಿ ಇವರು ಅಲ್ಲಿಯೇ ಸೊಗಸಾಗಿ, ಸರಸವಾಗಿ ವರ್ಣಿಸಿದ್ದಾರೆ.ಪ್ರಾಸಂಗಿಕವಾಗಿ ಆಯಾ ಕ್ಷೇತ್ರ ದಲ್ಲಿರುವ ವಿಷ್ಣುಮೂರ್ತಿಯನ್ನು,ಅರ್ಚನಾಮೂರ್ತಿಯ ಸ್ತೋತ್ರಗಳೊಂದಿಗೆ ಕ್ಷೇತ್ರ ಪರಿಚಯವನ್ನು ಮಾಡಿಕೊಡುವುದೇ ಇದರ ಮುಖ್ಯ ಉದ್ದೇಶ. ಅವರು ತಂತಮ್ಮ ವೃತ್ತಿಗಳಲ್ಲಿದ್ದು ಕೊಂಡೇ ಕ್ಷೇತ್ರ ಪರ್ಯಟನೆ ಮಾಡುವವರು. ಅಷ್ಟೇ ಹೊರತು ಕೆಲಸವಿಲ್ಲದೇ ಊರೂರು ತಿರುಗುವುದೇ ಅವರ ವ್ಯಾಸಂಗವಲ್ಲ.

ಆಳ್ವಾರರೆಲ್ಲರೂ ಸಂದರ್ಶಿಸಿದ ಕ್ಷೇತ್ರಗಳು ಎರಡೇ. ಅವು ವೇಂಗಡ (ತಿರುಮಲೆ), ತಿರುವರಗಂ (ಶ್ರೀರಂಗಂ)ಗಳು, ಆಳ್ವಾರರು ಈ ಕ್ಷೇತ್ರಗಳನ್ನು ಸಂದರ್ಶಿಸಿದಾಗ ಕ್ಷೇತ್ರ ವೈಶಿಷ್ಟ್ಯಗಳನ್ನು, ಸುಂದರವಾದ ಪ್ರಕೃತಿ ಸಂಪತ್ತನ್ನು, ಅಲ್ಲಿರುವ ಅರ್ಚನಾ ಮೂರ್ತಿಗಳನ್ನು, ಆ ಮೂರ್ತಿಗಳಿಗೆ ಜರುಗುವ ಉತ್ಸವ ವಿಶೇಷಗಳನ್ನು ಮುತ್ತಿತರ ವಿವರಗಳೆಲ್ಲವನ್ನು ತಮ್ಮ ಕವಿತ್ವದಗಳಲ್ಲಿ ಇಲ್ಲವೇ ತಮ್ಮ ರಚನೆಗಳಲ್ಲಿ ಇಮ್ಮಡಿಸಿ ರಚಿಸಿದ್ದಾರೆ. ಅವುಗಳಿಗೇ ಪ್ರಬಂಧಗಳೆಂದು ಹೆಸರು.

ಆಳ್ವಾರರೆಲ್ಲರೂ ಈ ಬೆಟ್ಟವನ್ನು 'ವೇಂಗಡ' ವೆಂಬ ಹೆಸರಿನಿಂದ ಕರೆದಿದ್ದಾರೆ ಪೆರಿಯಾಳ್ವಾರರ ಪಾಶುರಗಳಲ್ಲಿ ಮಾತ್ರವೇ ಒಂದೊಂದು ಬಾರಿ ತಿರುಮಲವೆಂಬ ಹೆಸರು ಕಂಡು ಬರುತ್ತದೆ.ಆದರೂ ಈ ಪಾಶುರ ಪ್ರಕ್ಷುಪ್ತವಾದುದೆಂದು ಅಭಿಪ್ರಾಯ ಪಡಲಾಗಿದೆ. ಬೆಟ್ಟದ ಮೇಲಿರುವ ದೈವವನ್ನು ಆಳ್ವಾರರು 'ವೇಂಗಡ' (ವೇಂಕಟ,ವೆಂಗಡವಾಗಿ-ವೇಂಗ ದತ್ತಾನ್) ವೇಂಕಟನಾಥನು (ವೇಂಗಡ ದೊಡೆಯ - ವೇಂಗಡ ಮುಡ್ತೈಯಾನ್) ವೇಂಗಡದ ಮೇಲಿರುವ ದೇವ (ವೇಂಗಡದತ್ತು ಮೇಯನ್) ಎಂದೂ ಕರೆಯುತ್ತಾರೆ. ಇಂದು ಬೆಟ್ಟಕ್ಕಿರುವ ಹೆಸರುಗಳಲ್ಲಿ ನಮಗೆ ಗೊತ್ತಿರುವುದು ಶೇಷಾಚಲ,ನಾರಾಯಣಾದ್ರಿ,ಸಿಂಹಾಚಲ ಮೊದಲಾದುವುಗಳು ಆಳ್ವಾರರಿಗೆ



ಗೊತ್ತಿರಲಿಲ್ಲ. ದೇವದೇವ, ಶ್ರೀನಿವಾಸನೆಂಬ ಹೆಸರುಗಳು ತಿಳಿದಿರಲಾರವು. ಆದರೆ ಈ ದೈವ ವಿಷ್ಣುವೇ ಎಂಬ ವಿಷಯಗಳಲ್ಲಿ ಮಾತ್ರ ಆಳ್ವಾರರೆಲ್ಲಾ ಏಕಾಭಿಪ್ರಾಯ ಹೊಂದಿದವರೇ. ಇವರೆಲ್ಲರೂ ವಿಷ್ಣು ಭಕ್ತರೇ. ಅವರೆಲ್ಲರಿಗೂ ಪುರಾಣಗಳೆಲ್ಲವೂ ಪರಿಚಯವಿರುವವೇ. ವೇಂಕಟಾಚಲಪತಿಯನ್ನು ವಿಷ್ಣುಮೂರ್ತಿಯೆಂದು ಬಾಯ್ತುಂಬಾ ಕರೆದಿದ್ದಾರೆ. ಮನಸಾರೆ ನಮಿಸಿದ್ದಾರೆ.ಆ ದಿನದ ವೇಂಗಡವೇ (ವೇಂಕಟಾದ್ರಿ) ಸುಪ್ರಸಿದ್ಧವಾದ ವಿಷ್ಣು ಕ್ಷೇತ್ರವೇ ಆಗಿತ್ತೆಂದು ತಿಳಿಸಿ ಕೊಡುತ್ತದೆ.

ಆ ಕಾಲದಲ್ಲಿಯೇ ಅಷ್ಟೊಂದು ಪ್ರಸಿದ್ಧಿ ಪಡೆದಿವೆ ವೇಂಗಡವು.ಆಳ್ವಾರರ ದೃಷ್ಟಿಯಲ್ಲಿ ಬೆಟ್ಟಗಳು ಪವಿತ್ರವಾದವುಗಳು. ಅದರ ಮೇಲೆ ನೆಲೆಸಿರುವ ವಿಷ್ಣುದೇವನ ಅರ್ಚನಾಮೂರ್ತಿ ಭಕ್ತರನ್ನು, ಭಾವುಕರನ್ನು ಉದ್ಧರಿಸಲೆಂದೇ ಅಲ್ಲಿ ತಂತಾನೇ ಪ್ರತ್ಯಕ್ಷವಾಗಿದ್ದಾನೆಂದು ಅವರು ಸಾರುತ್ತಾರೆ. ಆ ದೇವನ ಆಯುಧಗಳಾದ ಶಂಖಚಕ್ರಗಳು ಅವರು ಉಲ್ಲೇಖಿಸಿದ್ದಾರೆ. ಆತನು ಧರಿಸಿರುವ ತುಳಸೀ ಮಾಲೆಯನ್ನು ವರ್ಣಿಸಿದ್ದಾರೆ. ಮುಖ್ಯದೈವವಾದ ವಿಷ್ಣುವನ್ನು ಬಣ್ಣಿಸಿದ ವಿವರಣೆ ಅಂದಿಗೆ ಬಹಳಾ ಹೆಚ್ಚೇ ಆದರೂ ಆತನನ್ನೇ ಅವರು "ರಾಮ, ಕೃಷ್ಣ, ಪದ್ಮನಾಭ, ದಾಮೋದರ" ಮುಂತಾದ ರೂಪಗಳಿಂದ ದರ್ಶನ ಪಡೆದಿದ್ದಾರೆ. ಸಮುದ್ರದ ಮೇಲೆ ಪವಡಿಸಿದ ಪರಮಾತ್ಮನೇ ವೇಂಕಟಾದ್ರಿಯ ಮೇಲೆ ನಿಂತಿರುವ ದೈವವೆಂದು ಅವರ ಅವಿರತ ವಿಶ್ವಾಸ.ಮೋಹಿನಿಯಾಗಿ ರಾಕ್ಷಸರನ್ನು ಮೋಸಗೊಳಿಸಿದ.ರಾಮನಾಗಿ ರಾವಣನ ಮೇಲೆ ವಿಜಯಿಸಿದ, ಕೃಷ್ಣನಾಗಿ ಅರ್ಜುನನ ಭ್ರಾಂತಿಯನ್ನು ದೂರಾಗಿಸಿ ಕರ್ತವ್ಯದ ಸಾರವನ್ನು ಬೋಧಿಸಿದ, ತ್ರಿವಿಕ್ರಮನಾಗಿ ಮೂಲೋಕಗಳನ್ನು ಆಕ್ರಮಿಸಿದನೆಂದೂ ಅಂತಹ ವಿಷ್ಣುವೂ ವೇಂಕಟಾದ್ರಿಯ ಮೇಲೆ ತನ್ನ ನಿವಾಸವನ್ನು ನಿರ್ಮಿಸಿ ಕೊಂಡಿದ್ದಾನೆಂದು ಅವರ ವಿಶ್ವಾಸ. ಮಾನವರು ಕೆತ್ತಿಸಿದ ಮೂರ್ತಿ (ಶಿಲ್ಪ) ಆತನದೆಂದೇ ಆಳ್ವಾರರೆಲ್ಲೂ ಸೂಚಿಸಿಲ್ಲ. ಅವರ ಮಾತಿನ ಪ್ರಕಾರ ಬೆಟ್ಟದ ಮೇಲೆ ನೆಲೆಸಿರುವ ದೈವ ಸ್ವಯಂ ಉದ್ಭವವಾದದ್ದು - ಸ್ವಯಂ ವ್ಯಕ್ತವಾದುದು - ತನ್ನ ಷ್ಟಕ್ಕೆ ತಾನೇ ನೆಲೆಸಿರುವ ದೈವ ಸ್ವಯಂ ಉದ್ಭವವಾದದ್ದು - ಸ್ವಯಂ ವ್ಯಕ್ತವಾದುದು - ತನ್ನಷ್ಟಕ್ಕೆ ತಾನೇ ನೆಲೆಸಿರುವುದೆಂದು ಹೇಳಿದ್ದಾರೆ.

ಪೊಯೇಗೈ, ಪೂದತ್ತ, ಪೇಯಾಳ್ವಾರರು ಇವರು ಮೂರು ಜನ ಮೊದಲ ಆಳ್ವಾರರೆಂದು ಹೆಸರು. ಅವರ ಕಾಲದಲ್ಲಿ ಬಹಳಾ ಪ್ರಾಚೀನವಾದುದು ಸುಮಾರು ಎರಡು ಸಾವಿರ ವರ್ಷಕ್ಕೂ ಮೊದಲಿನದು.


ತೊಂಡೈನಾಡು-ತೋಂಡಮಂಡಲಂ ಅವರ ಮಾತೃಭೂಮಿ. ಅಲ್ಲಿಂದಲೇ ವಡನಾಡು (ಮಧ್ಯಪ್ರದೇಶ) ಬಿಟ್ಟು ಪಡನಾಡು (ಉತ್ತರ ಪ್ರದೇಶ) ಕ್ಕೆ ಬರುತ್ತಲೇ ಅವರಿಗೆ, ಮಹೋನ್ನತವಾದ ನೋಡುವವರಿಗೆ ಭಯವನ್ನು ಕಲ್ಪಿಸುವ ವೇಂಕಟಾದ್ರಿಯನ್ನು ಸೇರುವುದು ಅಷ್ಟು ಹಗುರವಾದ ಮಾತಲ್ಲ. ಅಂದಿಗೆ ವೇಂಕಟಾದ್ರಿ ಮಲೆನಾಡು (ಪರ್ವತಪ್ರಾಂತ್ಯ) ಕ್ಕೆ ಸೇರಿದ ಗುಡ್ಡಗಾಡು. ಆಳ್ವಾರರ ಪಾಶುರಗಳಲ್ಲಿ ವೇಂಕಟಾಚಲ ವರ್ಣನೆ ಕಣ್ಣಿಗೆ ಕಟ್ಟದಂತೆ ಗೋಚರಿಸುತ್ತದೆ.ಮಹೋನ್ನತವಾದ, ದುರ್ಭರವಾದ ಕಣಿವೆಗಳು, ಉನ್ನತವಾದ ಪರ್ವತಶ್ರೇಣಿಗಳು, ದಟ್ಟವಾದ ಅಡವಿಗಳು, ನದೀತೀರಗಳಲ್ಲಿ ಅಡ್ಡಾಡುವ ಆನೆಗಳ ಹಿಂಡು, ಅವುಗಳನ್ನು ಹಿಡಿಯಲು ಆ ಕಡೆ ಈ ಕಡೆ ತಿರುಗಾಡುವ ಅಡವಿಜನರು, ಅವರ ಸಂಚಾರವನ್ನು ಅಣಕಿಸುತ್ತಾ ಅಲ್ಲಿಂದಿಲ್ಲಿಗೆ ನೆಗೆದಾಡುವ ಬೆಟ್ಟದ ಜೀವಿಗಳು, ಹುಲಿಗಳು ಚಿರತೆಗಳು ಮೊದಲಾದ ಕ್ರೂರಮೃಗಗಳಂಥವುಗಳನ್ನು ನೋಡುತ್ತಲೇ ಸಾವಧಾನವಾಗಿ ಮೆಲ್ಲಮೆಲ್ಲಗೆ ದಾಟಿ ಮುಂದಕ್ಕೆ ಸಾಗುತ್ತಾ ಅರ್ಧಮೈಲಿ ದೂರ ನಡೆದುಕೊಂಡು ಶೈಲಿ ಪಂಕ್ತಿಯನ್ನು ಹತ್ತಿಳಿದು ವೇಂಕಟನಾಥನ ಬಳಿಗೆ ಸಾರಬೇಕು. ಆಳ್ವಾರರು ಈ ದೇವರನ್ನು ನೋಡಲು ಅಲ್ಲಿಯವರೆಗೂ ನಡೆದು ಹೋಗಿದ್ದಾರೆ. ಅವರುಗಳು ಬಂದ ತೊಂದರೆಗಳನ್ನೆಲ್ಲಾ ಹಿಮ್ಮೆಟ್ಟುತ್ತಾ ಅಂಗೈಯಲ್ಲಿ ಜೀವವನ್ನು ಹಿಡಿದು ಕೊಂಡು, ದಾರಿ ಹಿಡಿದು ಸಾಗಿ, ದೇವರ ಮುಂದೆ ಕೈ ಮುಗಿದು ನಿಂತಾಗ



ಉಂಟಾದ ಸಮಾಧಾನವನ್ನು ಅವರು ಸ್ತುತಿಸಿರುವ ಪಾಶುರಗಳಲ್ಲಿ ಕಾಣಬಹುದು. ಆಗ ಅವರಿಗೆ ಬೆಟ್ಟದ ಮೇಲಿನ ಆ ಪ್ರಕೃತಿ ಸೌಂದರ್ಯವೇ ನಿಲುವಾಗಿದೆ. ಮನೋಹರವಾದ ಪರ್ವತಶ್ರೇಣಿಗಳು 'ಸುಯ್' ಎಂದು ಬೀಸುವ ತಂಪಾದ ಗಾಳಿ, ದಟ್ಟವಾದ ಗಿಡಮರಗಳು, ತೇಲುತ್ತಾ ಎದುರಾಗುವ ಕರಿಮೋಡಗಳು, ಗುಡ್ಡಗಳಿಂದ ಸುವಾಸನೆಯನ್ನು ಚೆಲ್ಲುವ ಬಗೆಬಗೆಯ ಹೂಗಿಡಗಳು, ಅಲ್ಲಲ್ಲಿ ಓಲಾಡುತ್ತಾ ಧುಮ್ಮಿಕ್ಕುವ ಜಲಪಾತಗಳು-ಈ ಪ್ರಕೃತಿ ಸೌಂದರ್ಯವೆಲ್ಲಾ ಅವರ ಮನಸ್ಸನ್ನು ಗಾಢವಾಗಿ ಪ್ರಭಾವಿತಗೊಳಿಸಿವೆ.

ಬೆಟ್ಟಗಳಲ್ಲಿ, ಬೆಟ್ಟದ ಮೇಲಿನ ನದಿಗಳೂ, ರಮ್ಯ ಪ್ರದೇಶಗಳು ಅಷ್ಟೊಂದು ಆಳ್ವಾರರಮನಸ್ಸನ್ನು ಸೆಳೆಯಲಿಲ್ಲ ಬದಲಾಗಿ ಅವರನ್ನು ಪರವಶರನ್ನಾಗಿಸಿದ್ದು, ಆಕರ್ಷಣೆಯೊಳಪಡಿಸಿದ್ದು ಬೆಟ್ಟದ ಮೇಲೆ ನೆಲೆನಿಂತಿರುವ ದೈವವೇ. ಈ ದೈವ ತನ್ನ ಮೂಲಸ್ಥಾನವನ್ನಾಗಿ ಮಾಡಿಕೊಂಡ ಬೆಟ್ಟವಿದೆಯೇ. ಆದ್ದರಿಂದ ಇದರ ಮಹಿಮೆ ಕೂಡಾ ಅಂತಹುದೇ. ಆಳ್ವಾರರ ಕಾಲಕ್ಕೆ ಈ ಕ್ಷೇತ್ರ ಮಹಾತ್ಮೆ ಇನ್ನೂ ಬೆಳಕಿಗೆ ಬಂದಿರಲಿಲ್ಲವೇನೋ? ವೇಂಗಡದ ಮೇಲೆ ನಿಂತಿರುವ ದೇವನು ಮುಕ್ತಿಯನ್ನು ಪ್ರಸಾದಿಸುತ್ತಾನೆ ಪಾಪಗಳನ್ನು ಬಡಿದೋಡಿಸುತ್ತಾನೆ.

ಈ ಲೋಕಕ್ಕೂ ಮೇಲಿನ ಲೋಕಕ್ಕೂ ಪ್ರಭುವು ಆತನೇ ಭಕ್ತರ ಕೋರಿಕೆಯ ಮೇರೆಗೆ ತಂತಾನೇ ಇಲ್ಲಿ ಪ್ರತ್ಯಕ್ಷನಾಗಿದ್ದಾನೆ. ಆಳ್ವಾರರು ತಮ್ಮ ಮನಸಾರೆ ಈ ದೈವವನ್ನು ವರ್ಣಿಸಿದ್ದಾರೆ. ಆತನು ವಿಷ್ಣುವೇ ಎಂದು ನಂಬಿದ್ದಾರೆ. ಆತನೇ ತಿರುಮಲೆಯ ಮೇಲೆ ನೆಲೆಸಿದ್ದಾನೆ. ಆತನ ಎದೆಯ ಮೇಲಿನ ಹೂಮಾಲೆಗಳಲ್ಲಿ ಶ್ರೀ ಮಹಾಲಕ್ಷ್ಮೀ ಪ್ರಕಾಶಿಸುತ್ತಾಳೆ. ಆತನು ತಿರುಮಲಕ್ಕೇ ಒಡೆಯ, ಶ್ರೀ ವೇಂಕಟ ಪ್ರಭುವಾದ ಶ್ರೀ ಮನ್ನಾರಾಯಣನು ಈತನೇ. ಆ ಸ್ವಾಮಿ ಅರ್ಚನಾ ಮೂರ್ತಿಯಾಗಿ ನಿಂತಿರುವುದನ್ನು ನೋಡುತ್ತಲೇ ಅವರಿಗೆ ಒಂದು ಚಿಕ್ಕ ಬೆಟ್ಟವನ್ನು ಹತ್ತಿರ ಬಂದಂಥ ಸಂಭ್ರಮವುಂಟಾಗಿದೆ. ಅಂದವಾಗಿ, ಉತ್ತಮ ರೀತಿಯಲ್ಲಿ ನಿಂತಿರುವ ಉನ್ನತವಾದ ವೇಂಕಟಪತಿಯ ಕರಿಶಿಲೆಯ ನಿಲುವು ಆದರ ಮೇಲೆ ಸುಂದರವಾಗಿ ಹಚ್ಚಿರುವ ಗಂಧದ ಲೇಪನ, ಸಂಪೂರ್ಣ ವಿಗ್ರಹದುದ್ದಕ್ಕೂ ಇಳಿ ಬಿದ್ದಿರುವ ಹೂವಿನ ಹಾರಗಳು, ಕಂಠವನ್ನ ಲಂಕರಿಸಿದ ತುಳಸಿ ಮಾಲೆಗಳು, ಅದರ ಮೇಲೆ ಹಸಿಪಟ್ಟು ವಸ್ತ್ರ, ಪಾದದ ಮೇಲೆ ಬಿದ್ದಿರುವ ಹೂಗಳ ರಾಶಿ, ಅಡವಿಯ ಗಿಡಗಳ ಮೇಲೆ ತಿರುಗುತ್ತಾ ಹೂಗಳನ್ನು ಕಾಯಿಗಳನ್ನು ಚದುರಿಸುತ್ತಾ ಹಾರುವ ಗಿಳಿಗಳು, ದೂರದ ಗ್ರಾಮಗಳಿಂದ ಇಲ್ಲಿಗೆ ಬಂದು ಸೇವೆಯೊಪ್ಪಿಸುತ್ತಿರುವ ಜನರ ಗುಂಪು, ಅದರಲ್ಲೂ ಮುಕ್ಕೋಟಿ ದ್ವಾದಶಿಯ ಪಾರಣೆಯ ದಿನವಂತೂ ಹರಿದು ಬರುವ ಜನಸ್ತೋಮ, ಸ್ವಾಮಿಯನ್ನು ಸಾಸಿರನಾಮಗಳಿಂದ ಸ್ತುತಿಸುತ್ತಾ ಧೂಪದೀಪ ಪುಷ್ಪಗಳನ್ನು ಸಮರ್ಪಿಸಲು ಬರುತ್ತದೆ. ಅವೆಲ್ಲವುಗಳನ್ನು ಸ್ವಾಮಿಯ ಪಾದಕ್ಕರ್ಪಿಸಿ ಸಾಷ್ಟಾಂಗ ನಮಸ್ಕಾರವೆರಗುತ್ತಾರೆ. ಹೂಮಾಲೆಗಳಿಂದ ಅಲಂಕರಿಸಿಕೊಂಡ ಆ ಸ್ವಾಮಿಯ ನಿಲುವು ಎಲ್ಲರ ದೇಹದಲ್ಲೂ ಪುಳಕವನ್ನುಂಟು ಮಾಡುತ್ತದೆ. ಬೆಟ್ಟದ ಮೇಲೆ ಬಂದ ಭಕ್ತರೆಲ್ಲರೂ ಸಹಾ ಪರವಶರಾಗಿ ಸ್ವಾಮಿಯನ್ನು ಕೊಂಡಾಡುತ್ತಾರೆಂದರೆ ತಪ್ಪಾಗಲಾರದು.



ತಿರುಮಳಿಶೈ ಆಳ್ವಾರರು ನಾಲ್ಕನೆಯವರು ಮೊದಲ ಮೂರು ಜನ ಆಳ್ವಾರರು ನಂತರ ಬಂದವರು. ಇವರ ಜನ್ಮಸ್ಥಳ ತಿರುಮಳಿಶೈ (ಅಥವಾ) ಮಹಿನಾರಪುರ. ಇವರು 14 ನೇ ಪಾಶುರದಲ್ಲಿ ವೇಂಗಡದ ಕುರಿತು ತಿಳಿಸಿದ್ದಾರೆ. ಇವತ್ತಿನ ವೇಂಗಡಪುರ ಸೌಂದರ್ಯ ಮೊದಲ ಮೂವರಾಳ್ವಾರರು ವರ್ಣಿಸಿ ಬಿಟ್ಟದ್ದೇ. ಪರ್ವತಶ್ರೇಣಿ ಅರಣ್ಯ, ಬಿದಿರಿನ ವೃಕ್ಷಗಳು., ಮರದ ಸಾಲುಗಳು, ಗಿಡಗಳು, ಹೂಗಿಡಗಳು, ಜಲಪಾತಗಳು, ವನಚರಗಳು, ಇವೆಲ್ಲವನ್ನು ಅವರು ವಿಫಲವಾಗಿ ಬಣ್ಣಿಸಿದ್ದಾರೆ. ಅವರೂ ಸಹಾ ಇಲ್ಲಿ ಸುತ್ತಾಡುವ ಆನೆ ಹಿಂಡುಗಳನ್ನು ಕಂಡಿದ್ದಾರೆ. ಬೆಟ್ಟದ ಮೇಲಿರುವ ದೈವವನ್ನು ವೇಂಕಟ, ತಿರುವೆಂಗದತ್ತಾನ್, ಪದವೇಂಗಡ ದತ್ತಾನ್‌ಯೆಂದು ಕರೆದಿದ್ದಾರೆ. ಅವರ ದೃಷ್ಟಿಯಲ್ಲಿ ಈ ದೇವರು ವಿಷ್ಣುಮೂರ್ತಿಯೇ ಲಕ್ಷ್ಮೀದೇವಿಯ ಪತಿಯೆಂದೇ ಪರಿಗಣಿಸಿದ್ದಾರೆ. ಮೊದಲಾಳ್ವಾರರು ಈ ದೈವಕ್ಕೆಂದು ಗುಡಿಯೆಂದು ಎಲ್ಲೂ ಬರೆಯಲಿಲ್ಲ. ಆದರೆ ಇವರು ಈ ಗುಡಿಯಲ್ಲಿ ಈ ದೇವನಿದ್ದಾನೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಸುತ್ತಲೂ ದಟ್ಟವಾದ ಅಡವಿಯಿದೆ. ದೇವರು ನೆಲೆಸಿರುವ ಸ್ಥಳದ ಹತ್ತಿರ ಮಾತ್ರ ಅಡವಿಯನ್ನು ಕಡಿದು, ನಡೆದು ಬರಲು ದಾರಿಯನ್ನು ನಿರ್ಮಿಸಿದ್ದಾರಂತೆ. ಅಡವಿಯನ್ನು ತಾನೇ ಸ್ವತಃ ಸರಿಸಿ ದಾರಿ ಮಾಡಿ ನಮ್ಮನ್ನು ದೇವನು ಕರುಣಿಸಿದ್ದಾನೆಂದು ಅವರ ನಂಬಿಕೆ ನಮ್ಮ ಕೋರಿಕೆಯ ಮೇರೆಗೆ ದಾರಿ ಮಾಡಿ ಕೊಂಡು ಆ ದೇವನು ಎತ್ತರವಾದ ಪ್ರದೇಶದಲ್ಲಿ ತನ್ನ ಪಾದಗಳನ್ನೂರಿ ನಿಂತಿದ್ದಾನೆ. ಭಕ್ತರು ಆ ಸ್ವಾಮಿಯ ಪಾದಗಳಲ್ಲಿ ಹೂಗಳನ್ನು ಅರ್ಪಿಸುತ್ತಾರೆ. ಎತ್ತರವಾದ ಸ್ಥಳದಲ್ಲಿ ನಿಂತ ಆ ಸ್ವಾಮಿಯನ್ನು ಎಲ್ಲಾ ದಿಕ್ಕುಗಳಿಂದ ನೋಡಬಹುದು. ಶುದ್ಧವಾದ, ತಂಪಾದ ನೀರಿನಿಂದ ತುಂಬಿದ ಜಲಪಾತಗಳಿಂದ ತುಂಬಿ

ರುವ ವೇಂಗಡವು ದೇವತೆಗಳಿಗೆ,ಮಾನವರಿಗೆ ಸೇವಿಸಲನುವು ಮಾಡಿಕೊಟ್ಟಿದೆ ಎಂದು ತಿಳಿಸಿದ್ದಾರೆ.

ಅಂದರೆ ದೈವವು ಗುಡಿಯಲ್ಲಿಲ್ಲವೆಂದು ತಾನೇ ಅರ್ಥ? ತುದಿಯ ಮೇಲೆ ಒಂದು ಮಂಟಪದಲ್ಲಿರಬಹುದು. ಆ ದಿನಗಳಲ್ಲಿ ದೇವತೆಗಳಿಗೆ ಗುಡಿಗಳನ್ನು ಕಟ್ಟುವುದು ವಾಡಿಕೆಯಲ್ಲಿತ್ತು. ಆದರೂ ವೇಂಗಡಪ್ರಭುವಿಗೆ ಒಂದು ಗುಡಿಕಟ್ಟಿ ನಾಲ್ಕು ಗೋಡೆಗಳ ಮಧ್ಯೆ ಆ ಸ್ವಾಮಿಯ ಪ್ರಭೆಯನ್ನು ಮುಚ್ಚಿಡಲಾರರು ಯಾರಾದರೂ, ಎಲ್ಲಿಯವರಾದರೂ, ಯಾವಾಗಲಾದರೂ ಈ ವೈಭವವನ್ನು ಕಂಡು ಸ್ವಾಮಿಯ ಪಾದಗಳಿಗೆ ಸ್ವಯಂ ತಾವೇ ಹೂಗಳನರ್ಪಿಸಿ,ಮುಟ್ಟಿ ಸಂತೋಷಿಸುವಂತಹ ಭಾಗ್ಯ ಈ ಆಳ್ವಾರರ ಕಾಲಕ್ಕಿತ್ತು. ಆ ದಿನಗಳಲ್ಲಿ ಅಲ್ಲಿ ಯಾವುದೋ ನಿಯಮಿತವಾದ ವಿಧಾನಗಳಿತ್ತು ಎನ್ನಲು ಯಾವುದೇ ಆಧಾರಗಳಿಲ್ಲ. ಭಕ್ತರು ತಮ್ಮಷ್ಟಕ್ಕೇ ತಾವೇ ತಮಗೆ ತೋಚಿದ ರೀತಿಯಲ್ಲಿ ಸ್ವಾಮಿಯನ್ನು ಆರಾಧಿಸಿ ಹೋಗುತ್ತಿದ್ದರು.ಬೆಟ್ಟದ ಮೇಲೆ ಆನೆಗಳ ಹಿಂಡು ಸಂಚರಿಸುತ್ತಿದ್ದರಿಂದು 'ಮಾವು'ರೆಂಬುವರು ಈ ಪ್ರಾಂತ್ಯದ ಸ್ಥಾನಿಕರಾಗಿ ಅಲ್ಲೇ ಹಳ್ಳಿಗಳನ್ನು ಕಟ್ಟಿಕೊಂಡಿರಬಹುದು.ಕಾಡು ಮೃಗಗಳನ್ನು ಬೇಟೆಯಾಡಿ,ಆನೆಗಳನ್ನು ಹಿಡಿದು ಬಂಧಿಸಿ, ಅವುಗಳಿಂದ ಆ ಜನರು ತಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದರು.ಕಾಡು, ಗುಡ್ಡ, ಪರ್ವತ, ಕಣಿವೆ, ಎತ್ತರವಾದ ದಿಬ್ಬಗಳು ಮೊದಲಾದ ಜಾಗಗಳಲ್ಲಿ ಇವರು ವಾಸಿಸುತ್ತಿದ್ದರೆಂದು ನಮಗೆ ತಿಳಿದು ಬರುತ್ತದೆ.

ಬೆಟ್ಟದ ಮೇಲಿದ್ದ 'ವಡ್ಡ' ರೆಂಬ ಆದಿವಾಸಿಗಳನ್ನು ಓಡಿಸಿ, ತೊಲಗಿಸಿ ಈ ಪ್ರದೇಶವನ್ನೆಲ್ಲವನ್ನು ಆಕ್ರಮಿಸಿಕೊಂಡು ಇವರು ಕನ್ನಡನಾಡಿನಿಂದ ಅಲ್ಲಿಗೆ ಬಂದಿದ್ದಾರೆ. ಮೊದಲಿದ್ದ ಗುಂಪಿಗೆ ನಾಯಕರಾರಿರಲಿಲ್ಲ. ಕಲಹಗಳು ಕ್ರಮೇಣ ಏರ್ಪಡಲು "ಕೋಮಂದ ಕುರುವ ಪ್ರಭು" ಎಂಬಾತನು ಪ್ರಜೆಗಳಿಗೆ ರಕ್ಷಕನಾಗಿದ್ದಾನೆ ಯಾದವರಾಜರ ಸಂತತಿ ಆರಂಭಗೊಳ್ಳುವವರಿಗೆ ಹೀಗೆ ನಡೆದಿದೆ. ಆತನು ಪಲ್ಲವನೆಂದು ಒಂದು ವಾದವಿದೆ. ಅದು ಹಾಗಿರಲಿ, ಕುರುವ ರಾಜನಿಗೂ, ಪಲ್ಲವರಿಗೂ ವಿರೋಧ ಮೊದಲಿಡಲು ಕಾರಣವಾದ ಸಂಗತಿಗಳು ಈ ಆಳ್ವಾರರ ಪಾಶುರಗಳಲ್ಲಿ ತಲೆ ದೋರಿವೆ. ಗಿರಿಜನರಾದ ಇವರು ಮಾವುತರು, ಬರುಬರುತ್ತಾ ಬೇಸಾಯ ಪದ್ಧತಿಯನ್ನು ಕಲೆತುಕೊಂಡ ವಿವರಣೆಗಳು ಸಿಗುತ್ತವೆ. ಸಾಮೆಯೆಂಬ ಧಾನ್ಯವನ್ನು ಇವರು ಬೆಳೆಯುತ್ತಿದ್ದರೆಂದು ತಿಳಿದು ಬರುತ್ತದೆ.

ಬೇರೆ ದೇಶದಲ್ಲಿನ ಕೊಲ್ಲಿನಗರದಲ್ಲಿ ದೃಢವ್ರತರಾಜನಿಗೆ ಜನಿಸಿದ ಕುಲಶೇಖರಾಳ್ವರರು ಮೇಲೆ ಹೇಳಿದ ನಾಲ್ಕು ಆಳ್ವಾರರಗಿಂತಲೂ 40-50 ವರ್ಷ ಈಚೆಯವರು. ಇಷ್ಟೊತ್ತಿಗೆ ಬೆಟ್ಟದ ಮೇಲೆ ಹಲವು ಮಾರ್ಪಾಟುಗಳಾದಂತೆ ನಮಗೆ ತಿಳಿಯುತ್ತದೆ. ಅಲ್ಲಿ ಕಂಬಕವೆಂಬ ವೃಕ್ಷ, ಸಂಪಿಗೆ ವೃಕ್ಷವೊಂದೇ ಅಲ್ಲದೇ ಅವರು 'ಪೆರುಮಾಳ್ ತಿರುಮೊಳಿ' ಬರೆಯುವ ಹೊತ್ತಿಗಾಗಲೇ ಗಿಡಕ್ಕೆಂದು ಗುಡಿಯಿರಬಹುದೆಂದು ಕೆಲವರ ಅಭಿಪ್ರಾಯ. ವೇಂಗಡದಲ್ಲಿ 'ನಿಳ್‌ಮಾಳಲ್' ಅಂದರೆ ಹೆಬ್ಬಾಗಿಲಿಗೆ ಕುರಿತ ಪ್ರಸ್ತಾಪವನ್ನು, ಅವರು ತಮ್ಮ ಮುಂದಿನ ಜನ್ಮದಲ್ಲಿ ವೇಂಗಡಪ್ರಭುವಿನ ಗುಡಿಯ ಪೂಜಾರಿಚಯಾಗಿ ಜನ್ಮಿಸಬೇಕೆಂದು ತಮ್ಮ ಕೋರಿಕೆಯೆಂದು ಬರೆದಿಟ್ಟಿರುವುದನ್ನು ಆಧಾರವಾಗಿಟ್ಟುಕೊಂಡು ಆ ದಿನಗಳಲ್ಲೇ ಒಂದು ಚಿಕ್ಕ ಗುಡಿಯಿತ್ತೆಂದು ಸೂಚಿಸಿದ್ದು ದಿಟವಾಗಿದೆ.ಅರ್ಚಕರು ಮಹಾದ್ವಾರದ ದೊಡ್ಡಬಾಗಿಲಿನಿಂದ ಒಳಕ್ಕೆ ಅರ್ಚನೆಗಳನ್ನು ಮಾಡಿರಬಹುದೆಂದೂ,ಭಕ್ತರು ಮಹಾದ್ವಾರದ ಬೆಳಕಲ್ಲಿ ನಿಂತು ಪೂಜೆಗಳನ್ನು ಮಾಡುವವರಿಗೆ 'ವೆಂಗಡೂಕ್ಕನ್' ಎಂಬ, 4-3 ಪಾಶುರಗಳಲ್ಲಿ ತಿಳಿದು ಬರುತ್ತದೆ. ಇನ್ನೊಂದು ಪಾಶುರದಲ್ಲಿ ಈ ಗುಡಿಯ ಬಾಗಿಲನ್ನು ಕುರಿತು ಪ್ರಸ್ತಾಪಿಸಿದ ಪದವಿದೆ. ಗುಡಿಯ ಬಾಗಿಲಲ್ಲಿ ನಿಂತು ಅರ್ಚಿಸುವ ಪೂಜಾರಿಗೆ ವೆಂಕಟರಮಣನ ಪದಕಮಲಗಳನ್ನು ನೋಡುವ ಭಾಗ್ಯ ನಿರಂತರವಾಗಿರುತ್ತದೆಂದು ತಿಳಿಸುವ ಕುಲಶೇಖರನ ಭಾವವು ನಮಗೆ ವ್ಯಕ್ತಪಡಿಸುತ್ತದೆ. ಇಂದಿಗೂ ಗುಡಿಯ ಬಾಗಿಲ ಹೊಸ್ತಿಲನ್ನು ಕುಲಶೇಖರಪಡಿಯೆಂದೇ ಕರೆಯುತ್ತಾರೆ.

ಕುಲಶೇಖರನ ನಂತರ 30-40 ಸಂವತ್ಸರಗಳ ಬಳಿಕ ಪಾಂಡ್ಯದೇಶದಲ್ಲಿ ನಮ್ಮಾಳ್ವಾರು ಎಂಬುವವರು ಮನುಷ್ಯರೆಲ್ಲರಿಗೆ ಮಾದರಿಯಾಗಿ ಶರಣ್ಯನಾಗಿರುವ ದೈವವೆಂದರೆ ವೇಂಕಟಪ್ರಭುವೇ. ಮಹಾ ಮಾಯಾವಿ, ವೈಕುಂಠನಾಥ, ನಿತ್ಯನೂತನನಾದ ಸ್ವಾಮಿಯಾದ ಈ ದೈವ ತಂಪಾದ ವೇಂಗಡ ಬೆಟ್ಟದ ಮೇಲೆ ಕಾಣಸಿಗುತ್ತಾನೆಂದು ತಿಳಿಸಿದ್ದಾನೆ. ಅವರ ದೃಷ್ಟಿಯಲ್ಲಿ ಈ ಬೆಟ್ಟ ಪವಿತ್ರವಾದುದು. ವೈಕುಂಠಕ್ಕೆ ಸಮಾನವಾದುದು. ಒಂದು ರೀತಿಯಲ್ಲಿ ವೈಕುಂಠಕ್ಕು ಮಿಗಿಲಾದುದು. ಪಾಪಗಳೆಲ್ಲವನ್ನು ರೂಪುರೇಷೆಯಿಲ್ಲದೇ ಬಡಿದೋಷಿಸುವುದು.ಕ್ಷೀರಸಾಗರದಲ್ಲಿ ಪವಡಿಸಿದ ಸ್ವಾಮಿಯ ಹಾಗೇ ಪರ್ವತಾಚಲನಿರುವುದನ್ನು ಅವರು ಗುರುತಿಸಿದ್ದಾರೆ. ಆದಿಶೇಷನೆಂದೇ ಭಾವಿಸಿ ಈ ಬೆಟ್ಟವನ್ನು ಶೇಷಾಚಲವೆಂದೂ ಕರೆಯುವ ವಾಡಿಕೆಯಿತ್ತೆಂದು ನಮಗೆ ತಿಳಿದು ಬರುತ್ತದೆ. ಒಂದು ಚೊಕ್ಕವಾದ ನೀಲಮೇಘದ ತೆರದಲ್ಲಿ ಈ ಬೆಟ್ಟದ ಮೇಲೆ ನಿಂತಿರುವ ದೈವ ನಾರಾಯಣನೇ! ಪರಮಾತ್ಮನೇ! ದೇವಾದಿ ದೇವನೇ! ಜಗತ್ಕಾರಣನೇ! ಲಕ್ಷ್ಮಿ ರಮಣನೇ! ಆಗಿದ್ದಾನೆ. ನಮ್ಮ ವಿಭುವೇ ತಂಪಾದ ಬೆಟ್ಟದ ಮೇಲೆ ನಿಂತಿದ್ದಾನೆ. ಮೂರು ಲೋಕ ಮೊಡೆಯನು,ನನಗೂ ನಿನಗೂ ಎಲ್ಲರಿಗೂ ತಂದೆ ತಾಯಿಯಂಥವನು. ಶ್ರೀದೇವಿಯನ್ನು ವಕ್ಷಃಸ್ಥಲದಲ್ಲಿ

ಹೊಂದಿರುವವನು. ತನ್ನ ಕಾಲು ಹಿಡಿಯುವ ಭಕ್ತರಿಗೆ ಕೈ ತುಂಬಾ ವರವನಿತ್ತು ಮುಕ್ತಿ ಕೊಡುವವ ನೀತನೇ. ಆದ್ದರಿಂದ ಇತರ ದೇವತೆಗಳಿಗೆ ಶರಣಾಗ ಬೇಡಿರೆಂದು ಅವರು ಎದೆಮುಟ್ಟಿ ಹೇಳಿದ್ದಾರೆ 'ಮುದಿತನ ಬರುವ ಮುಂಚೆಯೇ ಪ್ರತಿಯೊಬ್ಬರೂ ವೇಂಗಡ ಬೆಟ್ಟವನ್ನು ಹತ್ತಿ ಅಲ್ಲಿ ನಿಂತಿರುವ ದೈವಕ್ಕೆ ಧೂಪ, ದೀಪ, ನೀರು, ಹೂವುಗಳಿಂದ ಪೂಜೆಮಾಡಬೇಕೆಂದು ಅವರ ಮಾರ್ಗದರ್ಶನ. ತಿರುಮಲಕ್ಕೆ ಬರುವವರು ತಮ್ಮನ್ನು ತಾವೇ ಮರೆತು ಹೋಗಬೇಕು. ನಾನು ನನ್ನದೆಂಬ ತನ್ನತನವನ್ನು ದಾಟಿ ಬರಬೇಕಂತೆ. ಮೈಮರೆತು ಹಾಡುತ್ತಾ, ಕೇಕೆ ಹಾಕುತ್ತಾ, ದೇವನೆದುರು ನಿಲ್ಲಬೇಕಂತೆ ಇಲ್ಲಿ ಜಾತಿಮತ ಬೇಧವಿಲ್ಲ. ದೇವತೆಗಳು,ಮನುಷ್ಯರೆಂದು ಇಲ್ಲವೇ ಇಲ್ಲ. ಈ ಪರಮಾತ್ಮನಿಗೆ ಜಡ-ಜೀವಿಗಳೆರಡೂ ಸಮಾನವು. ಈ ವರ್ಣನೆಯನ್ನು ಪರಿಗಣಿಸಿದ್ದೇ ಆದರೆ ವೇಂಗಡದ ಮೇಲಿರುವ ಗುಡಿಗೆ ಯಾರಾದರೂ ಯಾವಾಗಲಾದರೂ ಒಂದು ಹೋಗುವ ಸೌಕರ್ಯವಿತ್ತೆಂದು ತಿಳಿದು ಬರುತ್ತದೆ. ಅಲ್ಲಿ ಜನರಿಗೆ ತಾವೇ ಖುದ್ದಾಗಿ ಪೂಜೆ ಮಾಡುವಂತಹ ಅವಕಾಶವಿತ್ತೆಂದು ತಿಳಿಯುತ್ತದೆ.

ಇವರು ವೇಂಕಟಾಚಲ ಮೂರ್ತಿಯನ್ನು ವರ್ಣಿಸಿದ್ದಾರೆ. ಅವರ ದೃಷ್ಟಿಯಲ್ಲಿ ಭಾವನೆಯಲ್ಲಿ ಅದು ನಿಸ್ಸಂದೇಹವಾಗಿ ವಿಷ್ಣುಮೂರ್ತಿಯೇ ಶಂಖ, ಚಕ್ರ, ಶಾರ್ಙ, ಗದೆಗಳನ್ನು ಧರಿಸಿರುವ ಈ ಮೂರ್ತಿ ತನ್ನನ್ನು ಆಶ್ರಯಿಸಿದ ಭಕ್ತರಿಗೆ ಪ್ರತ್ಯಕ್ಷವಾಗಿ ಶರಣಾಗತಿಯೇ ತತ್ವವೆಂದೂ ತಿಳಿಸುತ್ತಿದ್ದಾನೆಂದೂ ಅವರು ಮತ್ತೆ ಮತ್ತೆ ಬತ್ತಿ ಹೇಳಿದ್ದಾರೆ. ಅರ್ಚನಾ ಮೂರ್ತಿ ಹೃದಯದ ಮೇಲೆ ಅಲುಮೇಲುಮಂಗ ತಾಯಿ (ಲಕ್ಷ್ಮೀ ದೇವಿ) ಇದ್ದಾಳೆಂದು ಅವರು ಗಮನಿಸಿ ಈ ವಿಷಯವನ್ನು ಬರೆದಿಟ್ಟಿದ್ದಾರೆ. ಈ ಮೂರ್ತಿಯ ಪಾದಗಳನ್ನು ಮಹಿಮೆಗಳನ್ನು, ಸೊಬಗನ್ನು ವಿವರಿಸಿದ್ದಾರೆ. ಈ ಮೂರ್ತಿ ಏಕವಾಗಿದ್ದರೂ ಇದರಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರು ಅಡಗಿದ್ದಾರೆಂದೂ ಆತನನ್ನು ಲಕ್ಷ್ಮೀದೇವಿ ಆಶ್ರಯಿಸಿದ್ದಾರೆಂದೂ ಅವರು ಸೂಚಿಸಿದ್ದಾರೆ.

ಈ ವಿಧವಾಗಿ ಆಳ್ವಾರರೆಲ್ಲರಿಗೂ ವೇಂಗಡದೇವರ ಅರ್ಚನಾವತಾರ ಆ ದೇವನು ಜನರಿಗೆ ಕರುಣಿಸಿ ತಂತಾನೇ ಸ್ವಯಂ ಈ ರೂಪದಲ್ಲಿ ಪ್ರತ್ಯಕ್ಷನಾಗಿದ್ದಾನೆ. ಭಕ್ತರು ತಮಗೆ ಶಾಂತಿ,ತೃಪ್ತಿವುಂಟಾಗುವವರೆಗೂ ಯೋಗ್ಯವಾದ ಈ ಮೂರ್ತಿಯನ್ನು ಪೂಜಿಸುತ್ತಿರಬೇಕೆಂದು ಅವರ ಸಲಹೆ.

ಯಾವ ದೈವಕ್ಕೆ ಶರಣಾಗಿ ಆರಾಧಿಸಿದರೂ ಕಡೆಗೆ ಅದು ತಿರುಮಲೆ ದೈವಕ್ಕೇ ಒಂದು ಸೇರುವುದೆಂದು ಅವರ ದೃಢ ವಿಶ್ವಾಸ. ಆ ದೇವರನ್ನು ಸೇವಿಸುವ ಜನರು ತಮಗೆ ತಿಳಿದಷ್ಟು ತಂತಾವೇ ಪೂಜಿಸುವ ವಿಧಾನ ವಾಡಿಕೆಯಲ್ಲಿತ್ತು. ದೇವರ ನಾಮಗಳನ್ನು ಸ್ತುತಿಸುತ್ತಾ ಈ ಸ್ವಾಮಿಯೆದುರು ದೀಪ ಬೆಳಗಿಸಿ



ಧೂಪವಿದ್ದು ಅರ್ಚನಾಮೂರ್ತಿ ಪಾದಕ್ಕೆ ನೀರಿನಿಂದ ಪಾದ ಪೂಜೆ ಮಾಡಿ ಹೂವೇರಿಸಿ, ಗಂಧ ಲೇಪಿಸಿ ನಮಸ್ಕರಿಸಿದ್ದರು ಎಂಬ ಪ್ರಸ್ತಾಪ ಅವರ ಪಾಶುರಗಳಲ್ಲಿ ಅನೇಕ ಬಾರಿ ಕಂಡು ಬರುತ್ತದೆ. ಭಕ್ತಿಯಿಂದ ಬಗೆ ಬಗೆಯ ಹೂ ಸರಗಳನ್ನು ಕಟ್ಟಿ, ಹಾಲಿನ ಖೋವದಿಂದ ಮಾಡಿದ ಇಡ್ಡಿಯಂತೆ ಕಡುಬುಗಳನ್ನು (ಅಥವಾ) ಹಬೆ ಕಡುಬುಗಳನ್ನು ಮಾಲಾಕಾರದಲ್ಲಿ ಪೋಣಿಸಿ ಅರ್ಚನಾ ಮೂರ್ತಿಯನ್ನು ಅಲಂಕರಿಸಿದ್ದನ್ನು ಇಲ್ಲಿ ಕಾಣಬಹುದು ಎಂದು ಅವರು ಬಣ್ಣಿಸಿದ್ದಾರೆ. ಭಕ್ತರ ಪೂಜೆಯೇ ಮುಖ್ಯವೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ವೇಂಗಡವೆಂದರೆ ವಾಸ್ತವವಾಗಿ ನಮ್ಮ ದೇಹವೇ. ಈ ದೈವವಿರುವುದು ನಮ್ಮ ಮನಸ್ಸಿನಲ್ಲೇ ಎಂದು ಅವರು ತಮ್ಮ ಪಾಶುರದಲ್ಲಿ ದೃಢವಾಗಿ ತಿಳಿಸಿ ಹೇಳಿದ್ದಾರೆ.

ಈ ಬಗೆಯಾಗಿ ತಿರುಮಲೆಯಲ್ಲಿ ಪ್ರಕಾಶಿಸುತ್ತಿರುವ ಈ ಬೆಟ್ಟದ ದೇವರೇ ನಮ್ಮ ಪರದೈವವೆಂದು ಆಳ್ವಾರರು ತಮ್ಮ ಪಾಶುರಗಳಲ್ಲಿ ವರ್ಣಿಸಿದ್ದಾರೆ. ಆಳ್ವಾರರಂತೆಯೇ ನಾವೆಲ್ಲರೂ ಕೂಡಾ ಆ ಬೆಟ್ಟದ ದೈವವನ್ನೇ ಆಶ್ರಯಿಸಿ ಧನ್ಯರಾಗೋಣ.



# ತಿರುಪತಿ ಶ್ರೀವೆಂಕಟೇಶ್ವರ

ಡಾ|| - ಟಿ.ಎಸ್.ಶ್ರೀನಿವಾಸನ್

94 ನೇ ಶಾಸನವು ವೀರನರಸಿಂಗ ದೇವಯಾದವ ರಾಯನು ಮಾಡಿದ ಭೂಮಿದಾನವನ್ನು ತಿಳಿಸುವುದು.

98 ನೇ ಶಾಸನವು ಗೋವಿಂದರಾಜ ಸ್ವಾಮಿ ಆಲಯ ದಲ್ಲಿ ಉಪಲಬ್ಧವಾದುದು, ಇದು ಕೀಲಕ ಸಂವತ್ಸರದ್ದು. ಶಾಲಿ ವಾಹನ ಶಕವರುಷ 1230 (ಕ್ರಿ.ಶ. 1308 )ಕ್ಕೆ ಸೇರಿದೆ. ಗೋವಿಂದ ರಾಜಸ್ವಾಮಿಗೆ ಪ್ರತಿನಿತ್ಯವೂ ಮತ್ತು ಕಾರ್ತೀಕ ಮಾಸದ, ಕೈಶಿಕ ದ್ವಾದಶಿ, ಮಾರ್ಗಳಿ ಮಾಸದ ಮಾರ್ಗಳಿ ದ್ವಾದಶಿ, ಮಕರ ಸಂಕ್ರಮಣ, ಚೈತ್ರಮಾಸದ (ಚಿತ್ತಿರೈ ವಿಷು) ಮೊದಲದಿನ (ಸೌರಮಾನದ ಯುಗಾದಿಯಂದು) ವಿಶೇಷ ಪೂಜೆಗಳನ್ನು ಮಾಡಲೆಂದು ನೀಡಿದ ದಾನವನ್ನು ದಾಖಲಿ ಸುವುದು. ಮಲಿಕ್‌ಕಾಫರನು ದಕ್ಷಿಣ ಭಾರತದ ಮೇಲೆ ಧಾಳಿ ಮಾಡಿದ ಪ್ರಕ್ಷುಬ್ಧ ದಿನಗಳಿವು. ಹೀಗಾಗಿ ಶಕವರ್ಷವನ್ನು ಮಾತ್ರವೇ ಗುರುತಿಸಲಾಗಿದೆಯಲ್ಲದೆ ಯಾವ ರಾಜನ ಹೆಸರನ್ನು ಸೂಚಿಸಲಾಗಿಲ್ಲ. ಸೌರಮಾನ ವರ್ಷದ ವಿಶೇಷ ದಿನಗಳಲ್ಲಿ ದೇವರಿಗೆ ವಿಶೇಷವಾದ ಪೂಜೆ ಸಲ್ಲಿಸುವುದಕ್ಕಾಗಿ ಸೌಲಭ್ಯ ಗಳನ್ನು ಒದಗಿಸುವ ವಿಧಾನವನ್ನಿಲ್ಲಿ ಕಾಣಬಹುದು.

99 ನೆ ಯ ಶಾಸನವು ತಿರುಮಲೆಯ ವೆಂಕಟೇಶ್ವರ ಸ್ವಾಮಿ ಆಲಯದಲ್ಲಿ ಉಪಲಬ್ಧವಾಗಿದ್ದು,ತಿರುವೆಂಕಟನಾಥ ಯಾದವರಾಯನ ಎಂಟನೆಯ ಪ್ರತಿಮುಖ ಸಂವತ್ಸರದ ಆಡಿ ಮಾಸದಲ್ಲಿ ಪ್ರಕಟವಾಗಿದ್ದ ಸಿಂಗಯ ದಣ್ಣಾಯಕನು ರಾಚಯ ದಣ್ಣಾಯಕನ ಹೆಸರಿನಲ್ಲಿ ವೆಂಕಟೇಶ್ವರಸ್ವಾಮಿಗೆ ಆಡಿ ಮಾಸದ ಉತ್ಸವವನ್ನು ಏರ್ಪಡಿಸಿ ಅದಕ್ಕೆ ಬೇಕಾದ ಪೂಜೆ ನೀವೇದನೆಗಳ ವೆಚ್ಚಕ್ಕೆಂದು ಪೊಂಗಲೂರು ಗ್ರಾಮವನ್ನು ಸರ್ವ ಮಾನ್ಯವಾಗಿಸಿ ಹತ್ತು ಭಾಗದಲ್ಲಿನ ಆದಾಯದ ಐದು ಭಾಗ ವನ್ನು ವೆಂಕಟೇಶ್ವರ ಸ್ವಾಮಿಗೆ ನೀಡಿದ್ದು ಇದು ಯಾದವ ರಾಯನ ಆಡಳಿತದ 9 ನೇ ವರ್ಷದ ಆಡಿ ಮಾಸದಿಂದ ಜಾರಿಗೆ ಬರಬೇಕೆಂದು ತಿಳಿಸುತ್ತದೆ. ಸರಿಸುಮಾರು ನಲವತ್ತು ತೆರಿಗೆಗಳ ಪಟ್ಟಿಯನ್ನು ವಿನಾಯಿತಿ ನೀಡಿದ ತೆರಿಗೆಗಳೆಂದು ಶಾಸನದ ಕಡೆಗೆ ಹೆಸರಿಸಲಾಗಿದೆ.

(ಈ ಹಿಂದೆ ಜಟಾವರ್ಮ ಸುಂದರ ಪಾಂಡ್ಯನ ಆಡ ಳಿತದ ಹದಿನಾಲ್ಕನೆಯ ಪ್ರತಿಮುಖ ವರ್ಷವನ್ನು ಪ್ರತಿಮುಖ ಸಂವತ್ಸರ ಎದಿರಾಂಡು) ಎಂದು ಕರೆದಿರುವುದನ್ನು ಕಾಣ ಬಹುದಾಗಿದೆ. ಇಲ್ಲಿ ತನ್ನ ಆಡಳಿತದ ಎಂಟನೆಯ ಅಥವಾ ಒಂಭತ್ತನೆಯ ವರ್ಷದಲ್ಲಿ ಸಿಂಹಾಸನವನ್ನೂ, ಕಿರೀಟವನ್ನೂ ಕಳೆದುಕೊಂಡು ಒಂಭತ್ತನೆಯ ವರ್ಷದಲ್ಲಿ ಸಿಂಹಾಸನವನ್ನು, ಕಿರೀಟವನ್ನೂ ಕಳೆದುಕೊಂಡು ಒಂಭತ್ತನೆಯ ವರ್ಷದಲ್ಲಿ ಅದನ್ನು ಪುನಃ ಪಡೆದಿರಬೇಕು. ತನ್ನ ಆಡಳಿತದ ಅವಧಿಯಲ್ಲಿ ಅಧಿಕಾರ ವಿಹೀನನಾಗಿದ್ದರೂ 9 ನೇ ವರ್ಷದಲ್ಲಿ ಅಧಿಕಾರ ವನ್ನು ಮೊದಲಿಗೆ ಪಡೆದ ನಂತರ ಅದೇ ವರ್ಷವನ್ನು ಒಂಭ ತ್ತನೆಯ ವರ್ಷವೆಂದೇ ಕರೆಯಲಾಯಿತು. ಆದ್ದರಿಂದಲೇ ಆತನ ಆಳ್ವಿಕೆಯ 9 ನೇ ವರ್ಷದಿಂದ ಜಾರಿಗೆ ಬರಬೇಕೆಂದು ಹೇಳಲಾಗಿದೆ.ಹಳೆಯ ಪಾಂಡ್ಯ ಚೋಳರ ಪ್ರಭುತ್ವಗಳು ಖಿಲವಾಗುತ್ತಿದ್ದಂತೆಯೇ ಅವರ ಕೈಕೆಳಗಿನ ಸಾಮಂತರು ಸ್ವತಂತ್ರರಾಗಲು ಯುದ್ಧಗಳನ್ನಾರಂಭಿಸಿದರು. ಮೂರನೆಯ ಹೊಯ್ಸಳ ವೀರಬಲ್ಲಾಳನು ದ್ವಾರ ಸಮುದ್ರವನ್ನು ತ್ಯಜಿಸಿ ತಿರುವಣ್ಣಾಮಲೆಯಲ್ಲಿ ಇರುವುದೆಂದು ನಿರ್ಧರಿಸಿದಾಗ ಪ್ರಾಯಶಃ ತಿರುವೆಂಕಟನಾಥ ಯಾದವರಾಯನು ಇವನನ್ನು ದಕ್ಷಿಣದಲ್ಲಿ ಒಳಬರಗೊಡದೆ ಯುದ್ಧ ಮಾಡಿ ಸೋಲನ್ನಪ್ಪಿರ ಬೇಕು.)

100 ಹಾಗೂ 101 ನೆಯ ಶಾಸನಗಳೆರಡು ಒಂದರ ಪ್ರತಿ ಇನ್ನೊಂದಾಗಿ, ಗೋವಿಂದರಾಜ ಸ್ವಾಮಿ ಆಲಯದಲ್ಲಿವೆ. ಈ ಹಿಂದೆ ವೆಂಕಟೇಶ್ವರ ಸ್ವಾಮಿಯ ದೇವದಾನ ಗ್ರಾಮ ವಾಗಿದ್ದು ತಿರುಪತಿಯನ್ನು ಸರ್ವಮಾನ್ಯ ಗ್ರಾಮವಾಗಿ ಪರಿ ವರ್ತಿಸಿದುದನ್ನು ತಿಳಿಸುತ್ತವೆ ತಿರುವೆಂಕಟನಾಥ ಯಾದವ ರಾಯನ ಆಡಳಿತದ ಹನ್ನೆರಡನೆಯ ವರ್ಷದಲ್ಲಿ (ಕ್ರಿ.ಶ. 1333

-1334) ಆತ ವಿನಾಯಿತಿ ನೀಡಿದ ಈ ತೆರಿಗೆಗಳ ಪಟ್ಟಿಯನ್ನು 100 ನೇ ಶಾಸನದಲ್ಲಿ ನೀಡಲಾಗಿದೆ.

102 ನೇ ಶಾಸನವು ಸಿಂಗಯ ದಂಡನಾಯಕನು ರಾಚಯ ದಂಡ ನಾಯಕನ ಹೆಸರಿನಲ್ಲಿ ಏರ್ಪಡಿಸಿದ ಆಡಿ ತಿರುನಾಳ್ ಉತ್ಸವ ಹಾಗೂ ಸಂಧಿಗಳಿಂದಾಗಿ (ಶಾಸನ ಸಂಖ್ಯೆ-99) ಪೊಂಗಲೂರನ್ನು ದಾನ ಮಾಡಿದಾಗ ಆ ಗ್ರಾಮದ ಎಲ್ಲ ತೆರಿಗೆಗಳನ್ನೂ ಮಾಫಿ ಮಾಡಿದ ವಿಷಯವನ್ನು ತಿಳಿಸುವ ತಿರುವೆಂಗಳನಾಥ ಯಾದವರಾಯನ ಆಡಳಿತದ ಹನ್ನೆರಡನೆಯ ವರ್ಷದ ಶಾಸನದಂತೆಯೇ ಆ ವಿಷಯವನ್ನು ಶ್ರೀ ವೆಂಕಟೇಶ್ವರ ಸ್ವಾಮಿ ಆಲಯದ ಸ್ಥಾನತ್ತಾರರಿಗೆ ತಿಳಿಸಿದಾಗ ಸಿಂಗಯ ದಂಡನಾಯಕನು ಸ್ಥಾನತ್ತಾರರಿಗೆ - ಈ ಗ್ರಾಮದ ಆದಾಯವನ್ನು ಮೇಲಿನ ವೆಚ್ಚಗಳಿಗೆ ಮಾತ್ರವೇ ಅಲ್ಲದೆ- ವೀರನರಸಿಂಗ ಪೆರುಮಾಳ್ ಹಾಗೂ ತಿರುಪತಿಯ ತಿರುಮಂಗೈ ಆಳ್ವಾರರಿಗೆ ತಲಾ ಒಂದು ತಿರುಭ್ಯೋನಕವನ್ನೂ, ಸಿತಕರ ಗಂಡನ್ ಮಠದಲ್ಲಿ ಪ್ರತಿನಿತ್ಯ 32 ಮಂದಿ ಶ್ರೀ ವೈಷ್ಣವರಿಗೆ ಭೋಜನವನ್ನೂ, ಏರ್ಪಡಿಸುತ್ತ ಮಿಕ್ಕ ಹಣವನ್ನು ತಿರುಮಲೆಯಲ್ಲಿ ಒಂದು ಹೂವಿನ ತೋಟವನ್ನೂ, ಒಂದು ಅರವಟ್ಟಿಗೆಯನ್ನೂ ಇವೇ ಮುಂತಾದ ಧರ್ಮಕಾರ್ಯಗಳಿಗೆ ಬಳಸಬೇಕೆಂದು ತಿಳಿಸಿದಾಗ ಈ ಎಲ್ಲ ನಿಬಂಧನೆಗಳನ್ನೂ ಸ್ಥಾನತ್ತಾರರು ಒಪ್ಪಿದ ಮೇಲೆ ಈ ವಿಷಯವನ್ನು ತಾವು ಪತ್ರದಲ್ಲಿಯೂ ಶಿಲಾಶಾಸನದಲ್ಲಿಯೂ ಕೆತ್ತಿಸಲಾಯಿತೆಂದು ತಿಳಿಸುತ್ತದೆ.

103 ನೇ ಸಂಖ್ಯೆಯ ಶಾಸನವು (ಫು -111 ಸಂಪುಟ 1) ಶ್ರೀರಂಗನಾಥ ಯಾದವರಾಯನು ತನ್ನ ಆಡಳಿತದ ಮೂರನೆಯ ವರ್ಷದಲ್ಲಿ (ಕ್ರಿ.ಶ. 1339 - 40 ) ತಿರುವೆಂಕಟ ಮುಡೈಯಾನನಿಗೆ 200 ಪಣಗಳ ತಿರುಮುನ್ ಕಾಣಿಕೈ(ಶುಲ್ಕ ಸಮರ್ಪಣೆ - ಅಡ್ವಾನ್ಸ್ ಪೇಮೆಂಟ್) ಕೊಟ್ಟು ಈ ದೇವರಿಗೆ ಸೇರಿದ ತಿರುಪತಿಯ ಪೆರಿ ಏರಿ (ದೊಡ್ಡ ಕೆರೆ)ಯಿಂದ ಎಂಬೆರುಮಾನಾರ್ - ರಾಮಾನುಜರಿಗೆ ನೀಡಿದ ಭೂಮಿಯನ್ನು ಸಾಗುವಳಿ ಮಾಡಲು ನೀರನ್ನು ಪಡೆಯಬೇಕೆಂಬ ಆಜ್ಞೆಯನ್ನು ತಿಳಿಸುವುದು.

104 ನೆಯ ಶಾಸನವು ತಿರುಮಲೆ ಹಾಗೂ ತಿರುಪತಿಗಳಲ್ಲಿ ಎರಡು ಮಠಗಳನ್ನು ಸ್ಥಾಪಿಸಿ, ಅವುಗಳನ್ನು ಕೆಲವು ಬ್ರಹ್ಮಚಾರಿಗಳ ಮೇಲುಸ್ತುವಾರಿಗೆ ಮಹಾಪ್ರಧಾನಿ ಇಮ್ಮಡಿ ರಾಹುತ್ತ ರಾಯನ್ ಮಾದಪ್ಪನ್ ಸಿಂಗಯ ದಣ್ಣಾಯಕರು ನೀಡುತ್ತ ಇವರು ಒಬ್ಬಾನೊಬ್ಬ ಜೀಯರಿಂದ 1000 ಪಣಂ ಪಡೆದು ಈ ಎರಡು ಮಠಗಳನ್ನೂ ನಂದನ ವನವನ್ನೂ ಅರಿಗೆ ಒಪ್ಪಿಸಬೇಕೆಂದು ತಿಳಿಸಿರುವುದನ್ನು ನಮ್ಮ ಗಮನಕ್ಕೆ ತರುವುದು.

(ಕ್ರಿ.ಶ. 1339 -40 ರಲ್ಲಿ ಸಿಂಗಯ ದಣ್ಣಾಯಕರು ಸ್ಥಾಪಿಸಿದ ಮಠಗಳನ್ನೂ, ಹೂದೋಟವನ್ನೂ ದೇಶಾಂತರೀ ಜೀಯರು ಸ್ವಾಮಿ ಆಲಯದ ಸೇವೆಯನ್ನು ಸಲ್ಲಿಸಿದ್ದರ ಪ್ರತಿಯಾಗಿ ಅವರ ಜೀವಿಕೆಯೊಡನೆ (ಬದುಕುವ ದಾರಿಯೊಡನೆ) ಒಪ್ಪಿಸಿದ್ದೇ ಮುಂದೆ ಮುಂದೆ ಆಲಯದ ಆಡಳಿತದಲ್ಲಿ ಜವಾಬ್ದಾರಿಯನ್ನು ಪಡೆಯುಲು ಬುನಾದಿಯನಾಗಿ ಕಾಲಾ ನಂತರದಲ್ಲಿ ಧರ್ಮಕರ್ತ ಎಂಬ ಹೆಸರು ಪಡೆಯಲು ಕಾರಣವಾಯಿತು. ಈ ಜೀಯರು ದೇಶಾಂತರಿಗಳಾಗಿ ದೊಡ್ಡ ಚಿಕ್ಕವರೆಂದು ಎರಡು ಬಗೆಯಾಗಿ ಪೆದ್ದ (ಹಿರಿಯ) ಜೀಯರು ಒಬ್ಬ ತೆಂಗಲೆ ವೈಷ್ಣವ ಬ್ರಾಹ್ಮಣನನ್ನು ತಮಗೆ ಸಹಾಯಕವಾಗಿ ಸ್ವೀಕರಿಸಿದ ನಂತರ ಈ ಚಿಕ್ಕ ಜೀಯರು ಹಿರಿಯರ ಸ್ಥಾನ ತೆರವಾದಾಗ ಅದನ್ನು ಸ್ವೀಕರಿಸಿ ನಂತರ ಒಬ್ಬ ಕಿರಿಯ ಜೀಯರನ್ನು ಆರಿಸಿಕೊಳ್ಳುವರು. ತಿರುಮಲೆ ತಿರುಪತಿಗಳಲ್ಲಿ ಇವರಿಗೆಂದು ಎರಡು ಮಠಗಳ ಜೀಯರೂ ಪ್ರತ್ಯೇಕ ಮಠಗಳುಂಟು. ಎರಡು ಆಲಯಗಳಿಂದ ಒಂದೊಂದು ಭಾಗದ ಪ್ರಸಾದವನ್ನು ಪಡೆಯುವರು. ಜೊತೆಗೇ ಸಂಭಾವನೆಯ ಹಣವನ್ನೂ ಸಹ ಪಡೆಯುವರು. ಉತ್ಸವದ ಸಮಯದಲ್ಲಿ ನಿತ್ಯಸೇವಾ ಕಾರ್ಯದಲ್ಲಿ ಇವರಿಗೆ ನೆರವು ನೀಡಲು ಏಕಾಂಗಿಗಳೆಂಬ ಸಹಾಯಕರೂ ಉಂಟು.)

104 ನೇ ಶಾಸನವು ಜೀಯರು ತಮಗೆ ನೀಡಲಾಗಿರುವ ಜೀವಿಕೆಯಿಂದ (ಪಾರಿತೋಷಿಕದಿಂದ) ದೇವರ ಸೇವೆಯಲ್ಲಿ ಕಾಲ ಕಳೆಯುತ್ತ ಮರಣ ಹೊಂದಿದಾಗ, ಅವರ ಇಡೀ ಸಂಪತ್ತು ದಂಡನಾಯಕರಿಗೇ ಸೇರಿ ಹೊಸ ದೇಶಾಂತರಿ ಜೀಯರನ್ನು ದಂಡನಾಯಕರು ಆಯ್ಕೆ ಮಾಡುವುದೆಂದೂ, ಈ ಹೊಸಬ ನಿರ್ಗತಿಕನಾಗದೆ, ದೇವಾಲಯದ ಭಂಡಾರಕ್ಕೆ 400 ಪಣಂ ಹಣವನ್ನು ಸಲ್ಲಿಸಿದ ನಂತರವೇ ಸ್ವಾಮಿ ಸೇವೆಯಲ್ಲಿ ಭಾಗ ವಹಿಸಲು ಅವಕಾಶ ನೀಡಲಾಗುವುದು ಎಂಬ ನಿಬಂಧನೆಯನ್ನು ತಿಳಿಸುವುದು. ಉತ್ಸವ ಮೂರ್ತಿಗಳು ಮೆರವಣಿಗೆಯಲ್ಲಿ ಹೊರಬಂದಾಗ ಉತ್ಸವದ ನಾಲ್ಕನೆಯ ದಿನಗಳಲ್ಲಿಯೂ, ಪಾರ್ವೇಟಿ ಉತ್ಸವದಲ್ಲಿಯೂ, ಅರಿಶಾಣಾಲಯ ನಂದನವನದಲ್ಲಿಯೂ ವಿಶ್ರಾಂತಿ ಪಡೆಯುವ ಸಮಯದಲ್ಲಿ, ಶ್ರೀ ಭಂಡಾರಕ್ಕೆ ಠೇವಣಿಯಾಗಿ ಸಲ್ಲಿಸಿದ ಹಣದ ಬಡ್ಡಿಯಲ್ಲಿ ಪೂಜೆ ಪುರಸ್ಕಾರ ಮಾಡುವ ಜವಾಬ್ದಾರಿ ಇವರದಾಗಿದ್ದಿತು. ಈ ದಾಖಲೆಯು ಶ್ರೀರಂಗನಾಥ ಯಾದವರಾಯರ ಆಡಳಿತದ ಮೂರನೆಯ ವರ್ಷಕ್ಕೆ - ಕ್ರಿ.ಶ.1339 - 40 ಕ್ಕೆ ಸೇರಿದುದಾಗಿದೆ.

105 ನೆಯ ಶಾಸನವು ಶ್ರೀರಂಗನಾಥ ಯಾದವರಾಯನ (ಕ್ರಿ.ಶ. 1345 - 46) ಆಳ್ವಿಕೆಯ 9 ನೇ ವರ್ಷದಲ್ಲಿ ಪ್ರಕಟವಾಗಿದ್ದು ಪಾರ್ವೇಟಿ ಉತ್ಸವದ ನಿವೇದನೆಗಳ ಬಗ್ಗೆ ತಿಳಿಸುವುದು.



- ಸಶೇಷ

# ಗಣೇಶ ಚತುರ್ಥಿ ತನ್ನ ನಿಮಿತ್ತ ಸಕಾಲಿಕ ನುಡಿ ನಮನ

- ಶ್ರೀಮತಿ. ಕೆ.ವಿ. ಪದ್ಮಾವತಿ

**ವಿನಾಯಕನ ಲೋಕ ಯಾವುದು?**

ಸತ್ಯಲೋಕದಲ್ಲಿ ಬ್ರಹ್ಮ, ವೈಕುಂಠದಲ್ಲಿ ಮಹಾವಿಷ್ಣು, ಕೈಲಾಸದಲ್ಲಿ ಮಹೇಶ್ವರ, ಹೀಗೆ ಒಬ್ಬೊಬ್ಬ ದೇವನಿಗೂ ಒಂದೊಂದು ಲೋಕ. ಹಾಗಿದ್ದಲ್ಲಿ ವಿಶ್ವಮಾನ್ಯವಾದ ವಿನಾಯಕನು ಇರುವ ಲೋಕ ಯಾವುದು?

ಇದನ್ನು ತಿಳಿಯಲು ನಾವು ಶ್ರೀ ಗಣೇಶ ಪುರಾಣದ ಉಪಾಸನಾ ಖಂಡದ ಐವತ್ತೊಂದನೇ ಅಧ್ಯಾಯವನ್ನು ನೋಡಬೇಕು. ಶ್ರೀ ಗಣೇಶ ಮೂರ್ತಿಯ ಲೋಕ, ಅದರ ಹೆಸರು, ಆ ಲೋಕ ಸ್ವರೂಪ ಹೇಗಿದೆ ಎಂಬ ಎಲ್ಲಾ ಪ್ರಶ್ನೆಗಳಿಗೂ ಈ ಅಧ್ಯಾಯದಲ್ಲಿ ಪರಿಹಾರ ಲಭಿಸುತ್ತದೆ.


ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುವ ಇತರ ಲೋಕಗಳಿಗಿಂತ ಗಣೇಶ ಲೋಕಕ್ಕೆ ಪ್ರತ್ಯೇಕತೆಯ ವೈಶಿಷ್ಟ್ಯವಿದೆ. ಅಂಡಾಂಡ ಪಿಂಡಾಂಡಗಳನ್ನು ಶ್ರೀ ಗಣಪತಿಯ ರೂಪ ಕಲ್ಪನೆಯಲ್ಲಿ ಸಮನ್ವಯ ಮಾಡಿರುವಂತೆ ಗಣೇಶ ಲೋಕದ ನಿರ್ದೇಶನದಲ್ಲೂ ಮಾಡಿರುವುದು ಈ ವೈಶಿಷ್ಟ್ಯ.

ಮುದ್ಗಲ ಮಹರ್ಷಿಗಳು ಶ್ರೀ ಗಣೇಶನ ಲೋಕದ ವರ್ಣನೆಯನ್ನು ಗಣೇಶನ ಪರಮ ಭಕ್ತನಾದ ಕಾಶಿ ರಾಜನಿಗೆ ವಿಸ್ತಾರವಾಗಿ ವರ್ಣಿಸುತ್ತಾ ಗಣೇಶ ದೇವನು ನೆಲೆಸಿರುವ ಲೋಕಕ್ಕೆ 'ಸ್ವಾನಂದ' ಲೋಕವೆಂದು ಹೆಸರು. ಇದನ್ನು ನಿಜಲೋಕ,ದಿವ್ಯಲೋಕವೆಂತಲೂ ಕರೆಯುತ್ತಾರೆ.

ಕಾಶಿ ರಾಜನು ವಿನಾಯಕನ ಅನನ್ಯ ಭಕ್ತ. ಗಣನಾಥನ ವಿರಹ ವ್ಯಥೆಯಲ್ಲಿ ಉಳಿದೆಲ್ಲಾ ದೇಹಧರ್ಮಗಳನ್ನು ತ್ಯಜಿಸಿ, ಹುಚ್ಚನಂತಾಗಿ, ಆತನಿಗೆ 'ಸ್ವಾನಂದ' ಲೋಕದಲ್ಲಿ ವಿನಾಯಕ ದೇವನೊಡನೆ ಸಾಯುಜ್ಯ ಮುಕ್ತಿ ಪಡೆಯುವ ಏಕೈಕವಾದ ಆಕಾಂಕ್ಷೆ ಇತ್ತು. ಅಂತಹ ಕಾರ್ಯ ಕಾರಣಗಳೊಡನೆ ಕಾಲ ಒದಗಿ ಬಂತು.

ಲೋಕದಲ್ಲಿ ದೇವಾಂತಕ ನರಾಂತಕವೆಂಬ ದೈತ್ಯರು ಪ್ರಬಲರಾಗಿ ನಡೆದ ಹಿಂಸಾಚಾರಗಳಿಂದ ಧರ್ಮಕ್ಕೆ ಚ್ಯುತಿ ಬಂದಿತು. ಬ್ರಹ್ಮ ದೇವರ ವರದಾನದಿಂದ ಮದಿಸಿದ ಅವರನ್ನು ಸಂಹರಿಸಲು ವಿನಾಯಕನು ಕಶ್ಯಪ ಮಹರ್ಷಿಗಳ ಮನೆಯಲ್ಲಿ ಅವರ ಪುತ್ರನಾಗಿ ಲೀಲಾಮಯ ದೇಹದಿಂದ ಅವತರಿಸಿದನು.

ದೈತ್ಯರನ್ನು ಸಂಹರಿಸಿದ ಮೇಲೆ ಬಾಲ ಗಣಪತಿಯು ಪ್ರದರ್ಶಿಸಿದ ಹಲವಾರು ಲೀಲಾ ವಿನೋದಗಳಲ್ಲಿ ಮುಖ್ಯವಾದುದೆಂದರೆ, ಕಾಶಿ ರಾಜನನ್ನು ಬಾಲಕ್ರೀಡೆಗಳಿಂದ ಸಂಪೂರ್ಣವಾಗಿ ತನ್ನೆಡೆಗೆ ಸೆಳೆದಿದ್ದು. ಇದ್ದಕ್ಕಿದ್ದಂತೆ ಕಾಶಿರಾಜನನ್ನು ಬಿಟ್ಟು ತನ್ನ ಸ್ವಾನಂದ ಲೋಕಕ್ಕೆ ಸೇರಿಕೊಂಡನು ಬಾಲ ಗಣಪತಿ. ಆದರೆ ಭಕ್ತ ಪರಾಧೀನನಾದ ಭಗವಂತನಿಗೆ ಸ್ವಾನಂದ ಲೋಕದಲ್ಲೂ ನೆಮ್ಮದಿ ಸಿಕ್ಕಲಿಲ್ಲ. ಕೊನೆಗೆ ಪ್ರಮೋದ ಮತ್ತು ಆಮೋದರೆಂಬ ತನ್ನ ದೂತರನ್ನು ಕಳುಹಿಸಿ, ಕಾಶಿರಾಜನನ್ನು ದಿವ್ಯ ವಿಮಾನದಲ್ಲಿ ಕರೆಸಿಕೊಂಡು, ಸ್ವಾನಂದ ಲೋಕದಲ್ಲಿ ಸಾಯುಜ್ಯ ಮುಕ್ತಿಯನ್ನು ಕರುಣಿಸುತ್ತಾನೆ.ಕಾಶಿರಾಜನು ದಿವ್ಯ ವಿಮಾನದಲ್ಲಿ ಅಂತರಿಕ್ಷ ಮಾರ್ಗವಾಗಿ ಪ್ರಯಾಣ ಮಾಡುವಾಗ, ಮುದ್ಗಲನು ಕಾಶಿ ರಾಜನಿಗೆ ಸ್ವಾನಂದ ಲೋಕದ ಬಗ್ಗೆ ವರ್ಣಿಸಿದ ವಿವರಣೆ ಇದೆ.



ಈ ಸ್ವಾನಂದ ಭವನಕ್ಕೆ (ಗಣೇಶನ ಸ್ವಗೃಹಕ್ಕೆ) ವೇದಾಧ್ಯಯನ, ಮಹಾದಾನ, ತಪಸ್ಸು, ಯಜ್ಞ, ವ್ರತ, ಜಪಗಳಿಂದ ಸಹ ಈ ಲೋಕ ದೊರೆಯುವಂಥದ್ದಲ್ಲ. ನಿತ್ಯವೂ ಭಕ್ತಿಯಿಂದ ಮಾಡುವ ಶ್ರೀ ವಿನಾಯಕನ ಸೇವೆಯಿಂದ ಮಾತ್ರ ಈ ದುಃಖ ಮೋಹಗಳಿಲ್ಲದ ಲೋಕವು ಲಭಿಸುವುದು. ಅಂದರೆ ಶ್ರೀ ಗಣೇಶನಿಗೆ ಬೇಕಾಗಿರುವುದು ನಿಷ್ಕಲ್ಮಶವಾದ, ನಿರ್ಮಲವಾದ,ನಿಜವಾದ ಭಕ್ತಿಯೇ ಹೊರತು ಬೇರೇನೂ ಅಲ್ಲ.

'ಸ್ವಾನಂದ ಲೋಕ' ದವರೆಗೆ ಇರುವ ಭೂತ (ಪಿಶಾಚಿ), ದಾನವ, ಗಂಧರ್ವ, ಇಂದ್ರ, ಅಗ್ನಿ, ಯಮ, ಕುಬೇರ, ವರುಣ, ವಾಯು, ಸೂರ್ಯ, ಚಂದ್ರ, ನಕ್ಷತ್ರ, ಗೋ, ಸತ್ಯ, ವೈಕುಂಠ, ಕೈಲಾಸವೇ ಮೊದಲಾದ '21'

ಲೋಕಗಳ ಬಳಿಕ 'ಶೂನ್ಯ' ಲೋಕವೆಂಬ ಲೋಕದಲ್ಲಿ ಸೂರ್ಯ - ಚಂದ್ರರಿಲ್ಲ. ಪುಣ್ಯ ಜೀವಿಗಳ ಪುಣ್ಯದ ಬೆಳಕಿನಿಂದ ಮಾತ್ರವೇ ಈ ಸ್ಥಾನವನ್ನು ದಾಟಿ 'ಸ್ವಾನಂದ ಲೋಕ' ಕ್ಕೆ ಸಾಗಬೇಕು.

ಶೂನ್ಯದ ನಂತರ ಭ್ರಾಮರಿಕ ಶಕ್ತಿ ಸ್ಥಾನವಿದೆ. ಆಧಾರ ಶಕ್ತಿ ದೇವತೆಯು ಸರ್ವಶಕ್ತಿಮಯಿ. ಆಕೆಯ ಒಂದು ನಿಶ್ವಾಸ ಮಾತ್ರದಿಂದಲೇ ಪರ್ವತಗಳು ತರಗೆಲೆಗಳಂತೆ ಅಲುಗಾಡುತ್ತದೆ.

ಈ ಲೋಕವು ಐದು ಸಹಸ್ರ ಯೋಜನೆಗಳಷ್ಟು ವಿಸ್ತಾರವಾದುದು. ರತ್ನಖಚಿತವಾದ ಸುವರ್ಣಭೂಮಿಯಲ್ಲಿ ಹತ್ತು ದಿಕ್ಕುಗಳನ್ನು ಬೆಳಗುತ್ತಾ ಶ್ರೀ ವಿನಾಯಕನು ಸಮಷ್ಟಿ ವೃಷ್ಟಿ ರೂಪ ಜಗದಾತ್ಮಕವಾಗಿ ಇಲ್ಲಿ ನೆಲೆಸಿದ್ದಾನೆ.

ಶ್ರೀ ಮನ್ನಾರಾಯಣನು ಅನ್ನಮಯ್ಯ ಕೋಶಕ್ಕೂ, ಶಿವನು ಪ್ರಾಣಮಯ ಕೋಶಕ್ಕೂ, ಪರಾಶಕ್ತಿಯು ಮನೋಮಯ ಕೋಶಕ್ಕೂ, ಸೂರ್ಯನು ವಿಜ್ಞಾನಮಯ ಕೋಶಕ್ಕೂ ಒಡೆಯರಾದರೆ, ಶ್ರೀ ಗಣಪತಿಯು ಆನಂದಮಯ ಕೋಶಕ್ಕೆ ಅಧಿಪತಿಯಾಗಿದ್ದಾನೆ. ಆನಂದ, ಪರಮಾನಂದ, ಬ್ರಹ್ಮಾನಂದಗಳನ್ನು ಬಯಸುವವರು ಗಣಪತಿಯನ್ನು ಉಪಾಸಿಸಬೇಕೆಂದು ತಿಳಿದುಕೊಳ್ಳಬಹುದು ಶ್ರೀ ಗಣಪತಿಯ ವಾಸಸ್ಥಳವೇ 'ಆನಂದ ಭವನ' ಸ್ವಾನಂದ ಭವನ ಎನ್ನಲ್ಪಡುತ್ತದೆ. ಈತನು ಸ್ವಾನಂದ ಮತ್ತು ಆನಂದ ಎಂಬ ಎರಡು ಸ್ಥಿತಿಗಳಿಗೂ ಅಧಿದೇವತೆಯಾದ್ದರಿಂದ ಈತನಿಗೆ ಸ್ವಾನಂದೇಶ ಎಂಬ ಹೆಸರುಂಟು.

ಈ ಲೋಕದ ತುಂಬೆಲ್ಲಾ ಇಕ್ಷುಸಾರ (ಕಬ್ಬಿನ ರಸದ ಸಮುದ್ರ).ಅದರ ಮಧ್ಯೆ ಸಹಸ್ರ ದಳಗಳ ಶ್ವೇತ ಕಮಲದ ಕಣಿವಕೆಯಲ್ಲಿ ರತ್ನಖಚಿತವಾದ ಸುವರ್ಣ ಮಂಚವು ಶೋಭಿಸುತ್ತದೆ. ಆ ಮಂಚದ ಮೇಲೆ ಬಾಲಸ್ವರೂಪಿಯೂ, ದಿವ್ಯಾಲಂಕಾರ ಭೂಷಿತನೂ,ಹಿಮಕರ್ಪೂರ ಕೋಮಲ ಶರೀರವುಳ್ಳ ರಕ್ತವರ್ಣದ ಪೀತಾಂಬರವನ್ನು ಧರಿಸಿದ ಕಸ್ತೂರಿ ತಿಲಕವೇ ಮೊದಲಾದ ಸುಗಂಧ ದ್ರವ್ಯಾರ್ಚಿತನೂ, ಅರ್ಧ ಚಂದ್ರ ಕಿರೀಟ ಮತ್ತು ಮಣಿ ಮಾಣಿಕ್ಯಾದಿ ಹೊನ್ನಾಭರಣ ಧರಿಸಿದ, ಅನಂತ ಕೋಟಿ ಸೂರ್ಯಪ್ರಕಾಶದ ತ್ರಿನೇತ್ರ ಧಾರಿಯಾದ, ಶಯನ ಭಂಗಿಯಲ್ಲಿ ಇರುವ (ಯೋಗನಿದ್ರಾ ರೂಢನಾದ) ಶ್ರೀ ವಿನಾಯಕ ಸ್ವಾಮಿಯ ದರ್ಶನವು ಪರಮ ಪಾವನ ಗಂಗೆಯಂತೆ ತನ್ನ ಭಕ್ತರ ಸಕಲ ಪಾಪಗಳನ್ನು ಸ್ಮರಣೆ ಮಾತ್ರದಿಂದ ಪರಿಹರಿಸುವನಾಗಿ ಅಲ್ಲಿ ವ್ಯಕ್ತನಾಗಿರುವನು, ವಿರಾಜಿಸುತ್ತಿರುವನು.

ಸರ್ವ ಸಿದ್ಧಿಗಳಿಗೂ ಕಾರಣರಾದ ಸಿದ್ಧಿ - ಬುದ್ಧಿ ದೇವಿಯರಿಂದ ಪಾದಸೇವನೆಗೊಳ್ಳುತ್ತಾ, ಅಣಿಮಾ - ಗರಿಮಾ ದೇವಿಯರು ಶ್ವೇತಚಾಮರಸೇವೆಗೈಯುತ್ತಾ, ಜ್ವಾಲಿನಿ - ತೇಜಿನಿ ದೇವಿಯರೀರ್ವರೂ ದೇವದೇವನ ಎರಡೂ ಪಾರ್ಶ್ವಗಳಲ್ಲಿಯೂ ಪುಷ್ಪಾರ್ಚನೆಗೈಯುತ್ತಾ ಛತ್ರಿಯನ್ನು ಹಿಡಿದು ಶೋಭಿಸುತ್ತಿರುವವರು ಮತ್ತು ಮಹಿಮ - ಪ್ರತಿಮೆಯರು ದೇವನ ದೃಷ್ಟಿಗೋಚರವಾಗಿ ಸಮೀಪದಲ್ಲೇ ರತ್ನಖಚಿತವಾದ ಸುವರ್ಣ ಜಲಪಾತ್ರೆಯನ್ನು,ಗಂಡೂಷ ಪಾತ್ರೆಯನ್ನು ಹಿಡಿದು ನಿಂತಿರುವರು. ಸಾಮವೇದ ಪುರುಷರು ಬಂದು, ನಿಂತು, ಶ್ರೀ ಗಣೇಶನ ಮಹಿಮಾ ಗುಣಾಗಾನವನ್ನು ಮಾಡುತ್ತಿರುತ್ತಾರೆ.ಎಲ್ಲಾ ಶಾಸ್ತ್ರಗಳು, ಇತಿಹಾಸ ಪುರಾಣಗಳು ಮೂರ್ತಿವತ್ತಾಗಿ ಬಂದು, ಶ್ರೀ ಗಣೇಶನ ದಿವ್ಯ ಮಹಿಮೆಯನ್ನು ಕೊಂಡಾಡುತ್ತಿರುತ್ತವೆ.

ಈ ಎಲ್ಲಾ ರಸಮಯ ಸನ್ನಿವೇಶಗಳನ್ನೊಳಗೊಂಡ 'ಸ್ವಾನಂದ' ಲೋಕವನ್ನು ಶ್ರೀ ಗಣೇಶನ ಅನುಗ್ರಹದೊಡನೆ ಮೂರ್ತರೂಪದಲ್ಲಿ ಸಾಂಪ್ರದಾಯಿಕ ಹೊಸ ಶೈಲಿಯಲ್ಲಿ 'ಸಿಂಹದ್ವಾರ' ದ ಒಡಗೂಡಿದ ದೇವಾಲಯವು ಬೆಂಗಳೂರಿಗೆ ಅನತಿ ದೂರದಲ್ಲಿರುವ ಕನಕಪುರ ರಸ್ತೆಯ ಅಗರ ತಾತಗುಣಿ ಗ್ರಾಮದ ಪ್ರಶಾಂತ ವಾತಾವರಣದ 'ಶ್ರೀ ಸ್ವಾನಂದಾಶ್ರಮ' ದ ಆವರಣದಲ್ಲಿ ನಿರ್ಮಿಸುವ ಪ್ರಯತ್ನವು ಗಣೇಶ ಭಕ್ತಾಭಿಮಾನಿಗಳ ಸಹಕಾರದೊಡನೆ ಸೋಂದಾ ಸ್ವರ್ಣವಲ್ಲಿ ಮಠದ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಲೋಕಾರ್ಪಣೆಗೊಂಡು ವಿನಾಯಕ ಸದ್ಭಕ್ತಿ ತಾಣವಾಗಿದೆ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

– ಕಾರ್ಯನಿರ್ವಹಣಾಧಿಕಾರಿ

# ಅನಂತ ಚತುರ್ದಶಿ

-ಡಾ॥ ಗುರುರಾಜ ಪೋಶೆಟ್ಟಿಹಳ್ಳಿ





ಭಾದ್ರಪದ ಶುದ್ಧ ಚತುರ್ದಶಿ ಅನಂತ ಪದ್ಮನಾಭ ವ್ರತ. ಪರಮಾತ್ಮನ ಅನುಗ್ರಹವನ್ನು ಪಡೆಯುವ ಪೂಜೆ, ಕ್ರಿಯಾ ವಿಧಾನಗಳಲ್ಲಿ ಅನಂತ ಪದ್ಮನಾಭ ವ್ರತ ಅತ್ಯಂತ ಶ್ರೇಷ್ಠ ಹಾಗೂ ಶೀಘ್ರ ಫಲದಾಯಕ. ಮಹಾವಿಷ್ಣುವು ಸಾಕಾರ ಸ್ವರೂಪನು. ವಿಷ್ಣುವಿನ ಕುರಿತು ಜನಪ್ರಿಯವಾದ ಪರಿಕಲ್ಪನೆ ಎಂದರೆ ಕ್ಷೀರಸಾಗರದ ಮೇಲೆ ಶೇಷಶಾಯಿಯಾಗಿ ವಿಶ್ರಮಿಸುತ್ತಿರುವುದು. ಒಂದೆಡೆ ಲಕ್ಷ್ಮಿಯು ಅವನ ಕಾಲನ್ನೊತ್ತುತ್ತಿದ್ದರೆ, ಇನ್ನೊಂದೆಡೆ ನಾಭಿಯಿಂದ ಬಂದ ಕಮಲದಲ್ಲಿ ಕುಳಿತ ಬ್ರಹ್ಮನು ಸೃಷ್ಟಿ ಕಾರ್ಯದಲ್ಲಿ ನಿರತನಾಗಿದ್ದಾನೆ. ಇದು ಇಡೀ ಬ್ರಹ್ಮಾಂಡದಲ್ಲಿರುವ ಚೇತನ ಸ್ವರೂಪವನ್ನೇ ಸೂಚಿಸುತ್ತದೆ. ಮುಗಿಲು ಕಡಲುಗಳೆರಡರ ಕಲ್ಪನೆ ಬೆರೆತಂತಿರುವ ಇದನ್ನು ವಿಜ್ಞಾನದ ಆಕಾಶಗಂಗೆ (ಮಿಲ್ಕಿವೇ) ಪರಿಕಲ್ಪನೆಗೆ ಹೋಲಿಸಬಹುದು. ವಿಷ್ಣುವು ಮಲಗಿದ್ದಾನೆ ಎನ್ನಲಾದ ಆದಿಶೇಷ ಅಥವಾ ಅನಂತ ಎಂಬ ಸರ್ಪಕ್ಕೆ ಸಾವಿರ ಹೆಡೆಗಳಿದ್ದು ಅದು ಅನೇಕ ಲೋಕಗಳನ್ನು ಹೊತ್ತಿದೆ ಎನ್ನಲಾಗುತ್ತಿದೆ.

ಪರಮಾತ್ಮನು ಪರಮಚೇತನವಾದ್ದರಿಂದ ಆತನು ಇರದ ದೇಶ -ಕಾಲಗಳು ಇಲ್ಲ. ಜಗತ್ತು ಅನಾದಿ - ಅನಂತ . ದೇವರು ನಿತ್ಯ ಪ್ರಕೃತಿ ಕಾಲವೂ ನಿತ್ಯ. ಶ್ರೀ ಹರಿಯು ನಿತ್ಯ ಪದಾರ್ಥಗಳಿಗೂ ನಿತ್ಯತ್ವ ನೀಡುವ ಮಹಾ ಚೇತನ.

'ಸಂತತಂ ಚಿಂತಯೇನಂತಂ' ಎನ್ನುವುದು ಸುಜೀವಿಗಳಿಗೆ ಜೀವೋತ್ತಮದ ಸಂಕೇತ. ಸಾಮಾನ್ಯರಾದ ನಾವು ಕೇವಲ ವರ್ಷದಲ್ಲೊಂದು ದಿನ ಅನಂತ ದೇವನನ್ನು ಜ್ಞಾಪಿಸಿಕೊಳ್ಳುತ್ತೇವೆ. ಇದು ಸಮುದಾಯದ ಹಬ್ಬವಲ್ಲ. ವ್ಯಕ್ತಿಗತ ನಿಷ್ಠೆ ಮತ್ತು ಶ್ರದ್ಧೆಯಿಂದ ಆಚರಿಸುವ ವ್ರತ. ಅನಂತ ವ್ರತದಂದು ನಾನು ಕುಂಕುಮ ವರ್ಣದ ರೇಷ್ಮೆ ಎಳೆಗಳನ್ನು ಕಲಾತ್ಮಕವಾಗಿ ಹೊಸೆದು ಶೇಷನಾಗನ ತೆಕ್ಕೆಯಾಗಿ ಹೆಣೆದು, ತುದಿ ಮೊದಲು ಕಾಣದಂತೆ ಹೊಸೆದು, ಅನಂತದಾರವನ್ನು ಮಾಲೆ ಹಾಕಿ, ಕಂಕಣ ಕಟ್ಟಿಕೊಳ್ಳುತ್ತೇವೆ.

ದಾರ ಧಾರಣೆಯ ಸಂಪ್ರದಾಯದ ಬಗ್ಗೆ ಸಂಶೋಧಕರು ಐತಿಹಾಸಿಕ ಬೆಳಕು ಚೆಲ್ಲಬೇಕಾಗಿದೆ. ಇದರಿಂದ ಶ್ರದ್ಧಾಳುಗಳ ಪೂಜೆಗೆ ಸಾಮಾಜಿಕವಾಗಿ ಹೊಸ ಅರ್ಥ ಸಿಗಬಲ್ಲದು. ಅಶ್ವಯುಜ ಮಾಸ ನಿಯಾಮಕ ಪದ್ಮನಾಭ. ಇಂತಹ ಪದ್ಮನಾಭವನ್ನು ಮಾಸದ ಆದಿಯಲ್ಲಿ ಪೂಜಿಸಿದರೆ, ಪದ್ಮನಾಭರೂಪಿ ಪರಮಾತ್ಮನು ಸಂರಕ್ಷಿಸುವನು. ಈ ವ್ರತವನ್ನು ಪಾಂಡವರು ಕೃಷ್ಣನ ಆಜ್ಞೆಯಂತೆ ನೆರವೇರಿಸಿದ ಕಾರಣ ನವರಾತ್ರಿಯ ಒಂಭತ್ತು ದಿನಗಳಲ್ಲಿ ಪ್ರತಿ ದೇವತೆಗಳನ್ನು ಅನುಸಂಧಾನಿಸಿ ನಂತರ ಪದ್ಮನಾಭನ ಅನುಗ್ರಹದಿಂದ ತಮ್ಮ ಆಯುಧಗಳನ್ನು ಪಡೆದು ವಿಜಯವನ್ನು ಸಾಧಿಸಿದರು. ಈ ಮಹಾದಿನವೇ ವಿಜಯದಶಮಿ.

ಅನಂತ ಚತುರ್ದಶಿಯಂದು ಏಳು ದರ್ಭೆಗಳು ತುದಿಗೆ ಗಂಟು ಹಾಕಿ ಹೆಡೆಯಂತೆ ಮಾಡಿ ಕಲಶದ ಹತ್ತಿರ ಇಡುವ ಸಂಕೇತ. ವಿಷ್ಣುವು ಶೇಷಶಾಯಿಯಾಗಿ ಏಳೂ ಲೋಕಗಳಲ್ಲಿಯೂ ವಿಸ್ತರಿಸಿದ್ದಾನೆ ಎಂಬುದರ ಸಂಕೇತ. ಬಾಹ್ಯ ಪ್ರಪಂಚದಲ್ಲಿರುವ ಏಳು ಲೋಕಗಳು ಮಾನವರಲ್ಲಿ (ಸೂಕ್ಷ್ಮ ರೂಪದಲ್ಲಿ)ರುವ ಚಕ್ರಗಳಾಗಿವೆ. ಆದ್ದರಿಂದ ವಿಷ್ಣುವು ಬಾಹ್ಯ ಪ್ರಪಂಚದಲ್ಲಷ್ಟೇ ಅಲ್ಲ, ಮಾನವನಲ್ಲಿಯೂ ಕೂಡ ಅಂತರ್ಯಾಮಿಯಾಗಿರುವನು.

ಈ ಅನಂತನೆಂಬ ದೇವರು ಬೇರೆ ಯಾರೂ ಅಲ್ಲ. ಸೂರ್ಯೋದಯ, ಕಳಾ, ಕಾಷ್ಠಾ, ಮುಹೂರ್ತ, ಹಗಲು - ಇರುಳು, ಯುಗ, ಸಂವತ್ಸರಾದಿಗಳು ಭೂಭಾರವನ್ನು ತಗ್ಗಿಸುವ ಅನಂತನೂ, ವಿಷ್ಣುವೂ, ಸಕಲಲೋಕ, ಹದಿನಾಲ್ಕು ಲೋಕಗಳು, ಏಕದಶಾರುದ್ರರು, ದ್ವಾದಶಾದಿತ್ಯರು, ಸಪ್ತ ಋಷಿಗಳು, ನದಿ, ಸಾಗರ, ವೃಕ್ಷ, ಪರ್ವತಾದಿಗಳು, ನಾನೇ ಎಂದು ಪರಮಾತ್ಮನು ಅನಂತನ ಭವ್ಯ ರೂಪವನ್ನು ಅರ್ಜುನನಿಗೆ ಪ್ರಕಟಿಸಿದ್ದುಂಟು.

ವಿಷ್ಣು ಎಂದರೆ ಅನಂತವಾದದ್ದು ಎಲ್ಲೆಲ್ಲಿಯೂ ಹರಡಿಕೊಂಡಿರುವ ತತ್ತ್ವ. ಇದನ್ನು ಸಂಕೇತಿಸುವಂತೆ ಅವನ ಹೆಸರುಗಳೂ ಸಹ ಅನಂತವಾಗಿದೆ. ಅವನು ಯಾವುದೇ ಹೆಸರು (ನಾಮ) ಮತ್ತು ಆಕೃತಿ (ರೂಪ) ಗಳಿಗೆ ಸೀಮಿತನಲ್ಲ ಎನ್ನುವುದು ಇಲ್ಲಿರುವ ಸಿದ್ಧಾಂತ. ಶ್ರೀಮಹಾವಿಷ್ಣುವಿನ ಅನಂತರೂಪಗಳಲ್ಲಿ ಒಂದು ಅನಂತಪದ್ಮನಾಭ. ಅನಂತಪದ್ಮನಾಭನನ್ನು ಆರಾಧಿಸುವ ದಿನವೇ ಅನಂತಪದ್ಮನಾಭವ್ರತ, ಅಥವಾ ಅನಂತನ ವ್ರತ. ಪ್ರತಿ ವರ್ಷಭಾದ್ರಪದ ಶುದ್ಧ ಚತುರ್ದಶಿಯಂದು ಈ ವ್ರತವನ್ನು ಆಚರಿಸಲಾಗುತ್ತದೆ.

ಸೃಷ್ಟಿಯ ನಿರ್ಮಾಣದ ಮೊದಲು ಎಲ್ಲಾ ಜಲರಾಶಿಯಾಗಿತ್ತು. ಮಹಾವಿಷ್ಣುವು ಆ ಜಲರಾಶಿಯಲ್ಲಿ ಅಂತರ್ಗತನಾಗಿದ್ದನು. ತನ್ನ ಒಂದು ಲೀಲೆಯಾಗಿ ಮಹಾವಿಷ್ಣುವು ಈ ಪ್ರಪಂಚವನ್ನು ಸೃಷ್ಟಿಸಲು ಇಚ್ಛಿಸಿದನು. ಅಷ್ಟರಲ್ಲೇ ಅವನ ನಾಭಿಯಿಂದ ಕಮಲದ ಮೇಲೆ ಪವಡಿಸಿದ ಚತುರ್ಮುಖ ಬ್ರಹ್ಮನು ಹೊರಬಂದನು. ಆ ಕಾರಣಕ್ಕಾಗಿ ವಿಷ್ಣುವನ್ನು ಪದ್ಮನಾಭನೆಂದು ಕರೆಯುತ್ತಾರೆ.

ಚತುರ್ಮುಖ ಬ್ರಹ್ಮನು ಹೊರಬರುತ್ತಲೇ ಸೂರ್ಯಾಂತರ್ಗತನಾಗಿ ಸೃಷ್ಟಿಯನ್ನು ನಿರ್ಮಿಸಲು ಅನುವಾದನು. ಮೊದಲು, ಅವನು ತನ್ನ ಪೀಠವನ್ನು ಭೂಮಿ, ಸ್ವರ್ಗ ನರಕಗಳೆಂಬ ಮೂರು ಭಾಗಗಳನ್ನಾಗಿ ವಿಂಗಡಿಸಿದನು. ಅವನು ಪ್ರಪ್ರಥಮ ಶಬ್ಧವಾದ "ಓಂ" ಕಾರವನ್ನು ಜಪಿಸಿ, ಸೂಕ್ಷ್ಮ ರೂಪದಲ್ಲಿದ್ದ ಪಂಚಭೂತಗಳನ್ನು ಪ್ರಕೃತಿಯ ಸ್ಥೂಲ ರೂಪವನ್ನು ಮಾರ್ಪಡಿಸಿದನು.ಅಲ್ಲದೆ, ಅವನು ಸ್ಥಾವರ (ಸಸ್ಯ ರಾಶಿ), ತಿರ್ಯಕ್ (ಪ್ರಾಣಿ, ಪಶು ಪಕ್ಷಿಗಳು) ಹಾಗೂ ಮಾನವರೆಂಬ ಮೂರು ವಿವಿಧ ಜೀವರಾಶಿಗಳನ್ನು ಸೃಷ್ಟಿಸಿದನು. ಬ್ರಹ್ಮನ ಈ ಸೃಷ್ಟಿಯನ್ನು "ವೈಕೃತ ಸೃಷ್ಟಿ" ಎಂದು ಕರೆಯುತ್ತಾರೆ.ಅದರ ಮೊದಲೇ ಇಪ್ಪತ್ತನಾಲ್ಕು ತತ್ತ್ವಗಳಿಂದೊಡಗೂಡಿದ "ಪ್ರಾಕೃತ ಸೃಷ್ಟಿ"ಯ ನಿರ್ಮಾಣ, ಪರಬ್ರಹ್ಮನಿಂದ ಆಗಿತ್ತು.

ವಿಷ್ಣುವು ಸೃಷ್ಟಿಯ ಕಣಕಣಗಳಲ್ಲಿ - "ಅಣು, ರೇಣು ತೃಣಕಾಷ್ಠ"ಗಳಲ್ಲಿ-ಸೂಕ್ಷ್ಮ ರೂಪದಲ್ಲಿದ್ದು ಅವುಗಳ "ಆಗು ಹೋಗು"ಗಳನ್ನು ಪಾಲಿಸುತ್ತಾನೆ. ಕ್ಷೀರಸಾಗರದಲ್ಲಿ, ಶೇಷಶಯನನಾಗಿ, ಪರಮಾನಂದದ ಸ್ವರೂಪದಲ್ಲಿರುವ ಸರ್ವಾಂತರ್ಯಾಮಿಯಾದ, ಅನಂತಪದ್ಮನಾಭನ ವ್ರತವನ್ನು "ಅನಂತ ವ್ರತ"ವೆಂದೂ ಕರೆಯುತ್ತಾರೆ. ಚಿತ್ರಪಟದಲ್ಲಿ ಕಾಣಿಸುವ ಶೇಷನು "ಅನಂತತೆ"ಯನ್ನೂ ಸಾಗರವು "ಚಿರಂತನ ಅಸ್ತಿತ್ವ"ವನ್ನೂ, ವಿಷ್ಣುವು"ಪದ್ಮನಾಭ" ನನ್ನೂ ಲಕ್ಷ್ಮೀಯು "ಅಷ್ಟೈಶ್ವರ್ಯ"ಗಳನ್ನು ಸಾಂಕೇತಿಕವಾಗಿ ಪ್ರಕಟಿಸುತ್ತವೆ.

ತತ್ತ್ವಾರ್ಥ

ಸೃಷ್ಟಿಯ ಕಾರಣಕರ್ತನಾದ ಮಹಾವಿಷ್ಣುವನ್ನು ಅನಂತಪದ್ಮನಾಭನೆಂದೂ ಕರೆಯುತ್ತಾರೆ. ಆದ್ದರಿಂದ, ಭಾದ್ರಪದ ಶುಕ್ಲಪಕ್ಷದ ಚತುರ್ದಶಿಯ ದಿನ ಆಚರಿಸುವ ಮಹಾವಿಷ್ಣುವಿನ ವ್ರತವನ್ನು ಅನಂತಪದ್ಮನಾಭ ವ್ರತವೆನ್ನುತ್ತಾರೆ.

ಸೃಷ್ಟಿಯ ಮೊದಲು ಮಹಾವಿಷ್ಣುವು ಅನಂತ ಸಾಗರದಲ್ಲಿ (ಅವ್ಯಕ್ತವಾಗಿ) ಲೀನನಾಗಿದ್ದನು. ಅವನು, ತನ್ನೊಂದು ಲೀಲೆಯಾಗಿ ಈ ಸೃಷ್ಟಿಯನ್ನು ವ್ಯಕ್ತಗೊಳಿಸಿದನು. ಮೊದಲು"ಏಕ" ವಾಗಿದ್ದನು "ಅನೇಕ"ನಾಗಿ, ಅವನು ಸೃಷ್ಟಿಯ ಕಣಕಣಗಳಲ್ಲಿ ಅಡಗಿದ್ದಾನೆ. ಈ ಅನಂತತೆಯನ್ನು ಪುರುಷ ಸೂಕ್ತದಲ್ಲಿ ಹೀಗೆ ಸೂಚಿಸಿದೆ "ಸಹಸ್ರ ಶೀರ್ಷ ಪುರುಷಃ ಸಹಸ್ರಕ್ಷಃ ಸಹಸ್ರಪಾತ್" ಅಲ್ಲದೆ, ಭಗವದ್ಗೀತೆಯೂ ಈ ಅನಂತತೆಯನ್ನೂ ಇನ್ನೊಂದು ವಿಧವಾಗಿ ವಿವರಿಸುತ್ತದೆ.

ಅಂದರೆ, ಈ ಬ್ರಹ್ಮವು ಸರ್ವದಿಕ್ಕುಗಳಲ್ಲಿಯೂ ಕೈ, ಕಾಲು, ಕಣ್ಣು,ತಲೆಗಳು,ಮುಖಗಳು, ಕಿವಿಗಳು ಉಳ್ಳದ್ದಾಗಿ ಲೋಕವನ್ನೆಲ್ಲಾ ಆವರಿಸಿದೆ.ಮೇಲೆ ತಿಳಿಸಿದ ಅನಂತವಾಗಿರುವ ಬ್ರಹ್ಮದಲ್ಲಿ ವಿಷ್ಣುವು ಅಂತರ್ಗತನಾಗಿದ್ದಾನೆ.

ಅನಂತ ಎಂದರೆ ಶೇಷ.ಏಳು ಹೆಡೆಗಳ ಶೇಷ. ಆದರೆ ಅದು ಸಾಮಾನ್ಯ ಸರ್ಪವಲ್ಲ."ವಿಷ್ಣುವು ಶೇಷಶಯನನಾಗಿದ್ದಾನೆ"ಎಂದರೆ ಅವನು ಏಳೂ ಲೋಕಗಳಲ್ಲಿ ವಿಸ್ತರಿಸಿದ್ದಾನೆ ಎಂದು ಅರ್ಥ. ಅನಂತ ಚತುರ್ದಶಿಯ ದಿನ ಏಳು ದರ್ಭೆಗಳ ತುದಿಗೆ ಗಂಟು ಹಾಕಿ ಹೆಡೆಯಂತೆ ಮಾಡಿ ಕಲಶದ ಹತ್ತಿರ ಇಡುವ ಸಾಂಕೇತಿಕತೆ ಇದೇ. ಈ ಏಳು ಲೋಕಗಳು ಈ ಕೆಳಗಿನಂತಿವೆ.

| | ಲೋಕಗಳು | ಬಾಹ್ಯ ಪ್ರಪಂಚದಲ್ಲಿ | ಮಾನವನಲ್ಲಿ (ಸೂಕ್ಷ್ಮ ರೂಪದಲ್ಲಿ) |
|---|---|---|---|
| 1. | ಭೂಲೋಕ | ಭೂಮಿ | ಮೂಲಾಧಾರಚಕ್ರ |
| 2. | ಭುವಲೋಕ | ಅಂತರಿಕ್ಷ | ಸ್ವಾಧಿಷ್ಠಾನ ಚಕ್ರ |
| 3. | ಸ್ವರ್ಗಲೋಕ | ಸ್ವರ್ಗ | ಮಣಿಪುರ |
| 4. | ಮಹಾಲೋಕ | ಮಹಾತ್ಮರ ಲೋಕ | ಅನಾಹತ ಚಕ್ರ |
| 5. | ಜನಲೋಕ | ಪಿತೃಗಳ (ಸಂತೋಷದ)ಲೋಕ | ವಿಶುದ್ಧ ಚಕ್ರ |
| 6. | ತಪೋಲೋಕ | ತಪಸ್ವಿಗಳ (ಋಷಿಗಳ)ಲೋಕ | ಆಜ್ಞಾಚಕ್ರ |
| 7. | ಸತ್ಯಲೋಕ | ಸತ್ಯದ ಪೀಠ | ಸಹಸ್ರಾರು ಚಕ್ರ |

ಬಾಹ್ಯ ಪ್ರಪಂಚದಲ್ಲಿರುವ ಏಳೂ ಲೋಕಗಳೂ ಮಾನವನಲ್ಲಿ (ಸೂಕ್ಷ್ಮರೂಪದಲ್ಲಿ)ರುವ ಚಕ್ರಗಳಾಗಿವೆ. ಆದ್ದರಿಂದ, ವಿಷ್ಣುವು ಬಾಹ್ಯ, ಪ್ರಪಂಚದಲ್ಲಷ್ಟೇ ಅಲ್ಲ, ಮಾನವನಲ್ಲಿಯೂ ಕೂಡ, ಅಂತರ್ಯಾಮಿಯಾಗಿ ಸೂಕ್ಷ್ಮರೂಪದಲ್ಲಿರುವನು."ಕ್ಷೀರಸಾಗರದಲ್ಲಿ ವಿಷ್ಣುವು ಅನಂತಶಯನನಾಗಿದ್ದಾನೆ" ಎಂದು ಹೇಳಿದಾಗ, ಅನಂತ ಎಂದರೆ ಸಾಮಾನ್ಯ ಸರ್ಪವಲ್ಲ, ಕ್ಷೀರವೆಂದರೆ ಹಾಲೂ ಅಲ್ಲ ಅಥವಾ ಸಾಗರವೆಂಬಂತೆ ಹಾಲಿನಿಂದ ಕೂಡಿದ ವಿಶಾಲ ಸಮುದ್ರವಲ್ಲ.ಇದರ ಸಾಂಕೇತಿಕತೆ ಏನೆಂದರೆ, ಸರ್ವಾಂತರ್ಯಾಮಿಯಾದ ವಿಷ್ಣುವು ಚಿರಂತನ ಅಸ್ತಿತ್ವದ ಆನಂದಮಯದಲ್ಲಿ ಅನಂತತೆ ಎಂಬ ಸುರುಳಿಯಲ್ಲಿ ಪವಡಿಸಿದ್ದಾನೆ ಎಂದು ಈ ಅಭೇದ್ಯ ಸತ್ಯಗಳನ್ನು ಸಾಮಾನ್ಯ ಜಡ ಮತಿಗಳಿಗೆ ತಿಳಿಸಲೋಸುಗ "ಕ್ಷೀರಸಾಗರದಲ್ಲಿ ವಿಷ್ಣುವು ಅನಂತ ಶಯನನಾಗಿದ್ದಾನೆ" ಎಂದು ಕವಿಗಳು ಸಾಂಕೇತಿಕತೆಯ ಮರ್ಮವನ್ನು ಜಾಹೀರುಗೊಳಿಸಿದ್ದಾರೆ. ಇದನ್ನು ಇನ್ನೊಂದು ರೀತಿಯಲ್ಲಿ ವಿವರಿಸಬಹುದು:-

"ವಿಷ್ಣು" ಎಂದರೆ ಸರ್ವಾಂತರ್ಯಾಮಿ - "ಶೇಷ" ಸರ್ಪವು ಅನಂತತೆ

"ಕ್ಷೀರ" ವು ಪರಮಾನಂದ - "ಸಾಗರ"ವು ಚಿರಂತನ ಅಸ್ತಿತ್ವ

ಸೃಷ್ಟಿಯ ಮೂಲವೇ ಪರಮಾನಂದ. ಆ ಪರಮಾನಂದದಲ್ಲಿ ತೇಲಲು ಕ್ರಿಯಾಶೀಲರಾಗುವುದೇ ಜೀವನದ ಉದ್ದೇಶ. ಅನಂತ ಚತುರ್ದಶಿಯ ವ್ರತಾಚರಣೆ ಈ ದಿಶೆಯಲ್ಲಿ ಸಾಗಲು ಪ್ರೇರಕವಾದ ಒಂದು ಅತೀ ಮುಖ್ಯ ವ್ರತ. ಮೇಲೆ ತಿಳಿಸಿದ ಪರಮಾನಂದದ ರಹಸ್ಯವು "ಮಧುವಿದೆ"ಯಲ್ಲಿ ಅಡಗಿದೆ. "ಮಧುವಿದ್ಯೆ"ಯು ಋಗ್ವೇದದ ಮೂರು ಮಂತ್ರಗಳಲ್ಲಿ ಅಡಗಿದೆ. ಈ ಮೂರು ಮಂತ್ರಗಳಲ್ಲಿರುವ ರಹಸ್ಯವನ್ನು ತಿಳಿದು ಕೊಂಡವನು "ಮಧುವಿದ್ಯೆ" ಯನ್ನು ಕಲಿತ ಹಾಗೆ. ಪರಮಾನಂದದಲ್ಲಿ ಲೀನನಾಗಲು ಮುಖ್ಯವಾಗಿ ಬೇಕಾಗಿರುವುದು ವಿಷ್ಣುವಿನ ಕೃಪೆ. ಈ ಸೃಷ್ಟಿಯನ್ನು ಪರಬ್ರಹ್ಮನು ರಚಿಸಿ, ಅದು ಸುಗಮವಾಗಿ ಸಾಗಲು, ಅವನು ವಿಷ್ಣುವನ್ನು ನೇಮಿಸಿದನು. ವಿಷ್ಣುವು ವಿಸ್ತರಣಾ ಸಾಮರ್ಥ್ಯ ಹೊಂದಿದವನು ಮತ್ತು ವ್ಯಾಪನಾಶೀಲ.



ಋಗ್ವೇದದಲ್ಲಿ ವಿಷ್ಣುದೇವರನ್ನು ಕುರಿತು ನಾಲ್ವತ್ತೈದು ಮಂತ್ರಗಳಿದ್ದು, ಅವು ಏಳು ಸೂಕ್ತಗಳಲ್ಲಿ ಹರಡಿವೆ. ವಿಷ್ಣುವು, ಮೇಲೆ ವಿವರಿಸಿದ, ಬ್ರಹ್ಮಾಂಡವನ್ನು ಸಪ್ತಲೋಕ ಗಳಲ್ಲಿ ಹಲವು ಸ್ತರಗಳಲ್ಲಿ ಸಂಘಟಿಸಿ ಪ್ರಕಟಗೊಳ್ಳುತ್ತಾನೆ. ಅದಕ್ಕೆ ನಿಯಮಗಳನ್ನು ವಿಧಿಸಿ,ಆ ನಿಯಮಗಳಡಿ ಬ್ರಹ್ಮಾಂಡವನ್ನು ಕಾಪಾಡುತ್ತಾನೆ. ಇದು, ಸ್ಥೂಲ ವಿಶ್ವಕಷ್ಟೇ ಅಲ್ಲದೆ, ಸೂಕ್ಷ್ಮಲೋಕಕ್ಕೂ ಸಂಬಂಧಿಸಿದೆ.

**ಅನಂತಪದ್ಮನಾಭನ ಕ್ಷೇತ್ರಗಳು**

ಕೇರಳದ ತಿರುವನಂತಪುರದ ಅನಂತ ಪದ್ಮನಾಭ ದೇವಸ್ಥಾನವನ್ನು ಕಲಿಯುಗದ ಮೊದಲ ದಿನ ಸ್ಥಾಪನೆ ಮಾಡಲಾಯಿತು ಎನ್ನುತ್ತದೆ ಸ್ಥಳ ಪುರಾಣ. ಇಲ್ಲಿರುವಷ್ಟು ಬೃಹತ್ತಾದ ಶೇಷಶಾಯಿ ಮೂರ್ತಿ ಇನ್ನೆಲ್ಲೂ ಇಲ್ಲ. ತಿರುವನಂತಪುರದ ಮಹಾರಾಜನಾಗಿದ್ದ ಮಾರ್ತಾಂಡ ವರ್ಮನ ಕಾಲದಲ್ಲಿ ಈ ದೇವಳವು ಜೀರ್ಣೋದ್ಧಾರಗೊಂಡಿದೆ.

ಅಖಂಡ ಭಾರತವನ್ನು ಎರಡು ಬಾರಿ ಪರ್ಯಟನ ಮಾಡಿ,ತಾವು ಸಂದರ್ಶಿಸಿದ ಕ್ಷೇತ್ರಮೂರ್ತಿಗಳ ಮಹಿಮೆಯನ್ನು ಕುರಿತು ಶ್ರೀ ವಾದಿರಾಜ ತೀರ್ಥರು ತೀರ್ಥ ಪ್ರಬಂಧ ಕೃತಿಯಲ್ಲಿ ಈ ದಿವ್ಯಮಂಗಲ ಪಾವನ ಮೂರ್ತಿಯನ್ನು ವರ್ಣಿಸಿರುವುದು ಕಣ್ಣಿಗೆ ಕಟ್ಟುವಂತಿದೆ. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಶ್ರವಣ, ಮನನ, ಧ್ಯಾನಗಳೆಂಬ ಮೂರು ದ್ವಾರಗಳಿವೆ ಎಂದು ಪ್ರಮೇಯವನ್ನು ಪದ್ಮನಾಭನು ಅನಂತ ಶಯನನ ಕ್ಷೇತ್ರದಲ್ಲಿ ಸಾಧಕರಿಗೆ ಪ್ರತ್ಯಕ್ಷವಾಗಿ ತಿಳಿಸಿ ಕೊಡುತ್ತಿದ್ದಾನೆ.

ಶ್ರೀ ಮಧ್ವಚಾರ್ಯರು ಲೌಕಿಕರ ಕಣ್ಣಿಗೆ ಅಂತರ್ಧಾನರಾದದ್ದು ಉಡುಪಿಯ ಶ್ರೀ ಅನಂತೇಶ್ವರನ ಗರ್ಭಗುಡಿಯಲ್ಲಿ ಶಿವಲಿಂಗದಂತೆ ಕಾಣುವ ಅನಂತೇಶ್ವರ ದೇವರನ್ನು ಅನಂತಾಸನ ಎಂದು ಕರೆಯಲಾಗುತ್ತದೆ. ಉಡುಪಿಯ ರಾಜ ಭೋಜರಾಜನಿಗೆ ವರವಿತ್ತಂತೆ ಪರಶುರಾಮನು ಪದ್ಮನಾಭ - ನಾರಾಯಣ ಸನ್ನಿಹಿತನಾಗಿದ್ದಾನೆ. ಈ ಪವಿತ್ರ ಸನ್ನಿಧಿಯಲ್ಲಿ ಇಂದಿಗೂ ಮಧ್ವಾಚಾರ್ಯರು, ಪಾಠಪ್ರವಚನಗಳನ್ನು ಮಾಡುತ್ತಿದ್ದಾರೆಂಬುದು ಭಾವುಕರ ನಂಬಿಕೆ.

ಆಚಾರ್ಯತ್ರಯರಲ್ಲಿ ಐತಿಹಾಸಿಕವಾಗಿ ಇವರು ಕಡೆಯವರಿರಬಹುದು. ಆದರೆ ಅವರ ದರ್ಶನದ ಸ್ವರೂಪವು ಅಂತ್ಯವಲ್ಲ, ಅನಂತ. ಅದರಲ್ಲಿ ಗತಿಶೀಲತೆ ಇದೆ. ನೈಸರ್ಗಿಕ, ಪಾರಿಸಾರಿಕ,ಅನುವಂಶೀಕವಾದ ಸೂಕ್ಷ್ಮಾತಿಸೂಕ್ಷ್ಮ ಪರಿಮಿತಿಗಳನ್ನರಿತು ಕೊಳ್ಳುತ್ತಲೇ ಜೀವಿ ತನ್ನ ಸಾಕ್ಷಾತ್ಕರಿಸಿ ಕೊಳ್ಳುವ ವಿಕಾಸವಾದ ಇದರಲ್ಲಿದೆ. ಈ ಸ್ವಸ್ವರೂಪ ಜ್ಞಾನಕ್ಕೆ ಪೂರ್ಣವೆಂಬುದು ಅಂತ್ಯವೆಂಬುದು ಎಲ್ಲಿ? ಆದ್ದರಿಂದಲೇ ಜೀವ ಪಯಣ ನಿರಂತರ ಅನಂತದತ್ತ ! ಹೀಗೆನ್ನುವ ಚಿಂತ ನೆಯೇ ಅನಂತನ ಹಬ್ಬದ ಸದಾಶಯವಾಗಲಿ.


## ಡಯಲ್ ಯುವರ್ ಇ.ಓ.

### ಯಾತ್ರಿಕ ಭಕ್ತರಲ್ಲಿ..... ವಿನಂತಿ

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ **ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ** ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು

ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.

# ಶಕ್ತ್ಯಾವೇಶ ಅವತಾರವಾದ ಪೃಥು ಮಹಾರಾಜನ ಚರಿತ್ರೆ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್




ಪೃಥುವು ಸಾಕ್ಷಾತ್ ಶ್ರೀಕೃಷ್ಣನ ಶಕ್ತ್ಯಾವೇಶ ಅವತಾರವು. ಈ ವಿಷಯವು ಭಾಗವತದಲ್ಲಿ "ಕೃಷ್ಣಸ್ಯ ಭವೇದ್ಭಗವತಃ" ಎಂದು ಹೇಳಲ್ಪಟ್ಟಿದೆ. ಪೃಥುಮಹಾರಾಜನ ವೃತ್ತಾಂತವು ಶ್ರೀಮದ್ಭಾಗವತದಲ್ಲಿ ನಾಲ್ಕನೆ ಸ್ಕಂದದಲ್ಲಿ ಬರುತ್ತದೆ. ಅದಲ್ಲದೇ ಆತನ ಕೃತ್ಯಗಳು ಶ್ರವಣಾನಂದಕರವಾದುವೆಂದು ವಿದುರನು ಮೈತ್ರೇಯನಿಗೆ ಹೇಳಿದ್ದಾನೆ. ಮುನಿಗಳು, ಬ್ರಾಹ್ಮಣರು ಪೃಥುಮಹಾರಾಜನನ್ನು ರಾಜ್ಯಾಭಿಶಿಕ್ತನನ್ನಾಗಿ ಮಾಡಿ, ಪ್ರಜಾಪಾಲಕನಾಗಿ ಪ್ರಕಟಿಸಿದ ಸಮಯದಲ್ಲಿ ರಾಜ್ಯದಲ್ಲಿ ಧಾನ್ಯಗಳ ಕೊರತೆ ವಿಪರೀತಕ್ಕೇರಿತ್ತು. ಬೇಕಾದಷ್ಟು ಆಹಾರ ದೊರಕದೆ ಜನರು ಹಸಿವು ಬಾಯಾರಿಕೆಗಳಿಂದ ನರಳುತ್ತಿದ್ದಾರೆ. ವೇನನ ರಾಜ್ಯಾಡಳಿತದ ಕಾಲದಲ್ಲಿ ತೀಪ್ರವಾದ ಕಷ್ಟಕ್ಕೆ ಗುರಿಯಾದ ಪ್ರಜೆಗಳೆಲ್ಲರು ಈತನು ತಮಗೆ ಭಗವದಂಶಸಂಭೂತನಾದ ರಾಜನಾಗಿ ಲಭಿಸಿದ್ದಾನೆಂದು ಆನಂದಗೊಂಡು ಆತನ ಬಳಿಗೆ ಹೋಗಿ ತಮ್ಮ ದೀನ ಸ್ಥಿತಿಯನ್ನು ವಿನಂತಿಸಿಕೊಂಡಿದ್ದಾರೆ. ಮರದೊಳಡಗಿದ ಬೆಂಕಿ ಕ್ರಮೇಣ ಮರವನ್ನೇ ಒಣಗಿಸಿದಂತೆ ತಮ್ಮ ಜಠರಾಗ್ನಿ ತಮ್ಮನ್ನು ಶುಷ್ಕರನ್ನಾಗಿಸಿದೆಯೆಂದು ಅವರು ಹವಣಿಸಿದ್ದಾರೆ. ಪ್ರಜೆಗಳ ಗೋಳನ್ನು ಕೇಳಿದ ಪೃಥುಮಹಾರಾಜ ಪ್ರಸ್ತುತ ಪರಿಸ್ಥಿತಿಗೆ ಕಾರಣವೇನೆಂದು ದೀರ್ಘಕಾಲ ಆಲೋಚಿಸಿ ಬತ್ತಳಿಕೆಯಿಂದ ಬಾಣಗಳನ್ನು ತೆಗೆದುಕೊಂಡು ಧರಣಿಯ ಮೇಲೆ ಬಾಣಗಳನ್ನೆ ರಚಿಸಿದ್ದಾನೆ.

ಪೃಥುವು ಪ್ರಳಯಕಾಲದ ರುದ್ರನ ಹಾಗೆ ಬಾಣ ಸುರಿಸಿದ ತಕ್ಷಣವೇ ಬೇಟೆಗಾರನನ್ನು ಕಂಡು ಬೆದರಿದ ಹರಿಣಿಯಂತೆ ಧರಣೀದೇವಿ ಗೋರೂಪವನ್ನು ಧರಿಸಿ ಓಟ ಕಿತ್ತಿದ್ದಾಳೆ. ಆಕೆ ಭೂ ಆಕಾಶ ಎಲ್ಲಿ ಓಡಿದರೂ ಪೃಥು ಆಕೆಯನ್ನು ಬಿಡಲಿಲ್ಲ. ಆತನಿಂದ ತಾನು ತಪ್ಪಿಸಿಕೊಳ್ಳಲಾರೆನೆಂದು ತಿಳಿದ ಧರಣಿ ಆತನಿಗೆ ಶರಣಾಗತಳಾಗಿದ್ದಾಳೆ. ತನ್ನ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡಿದ್ದಾಳೆ ಸ್ತ್ರೀಯನ್ನು ದಂಡಿಸುವುದು ಉಚಿತವಾದ ಕಾರ್ಯವಲ್ಲವೆಂದು ತಿಳಿಸಿದ್ದಾಳೆ. ಆಗ ಪೃಥು ಮಹಾರಾಜ ಗೋರೂಪದಲ್ಲಿರುವ ಭೂದೇವಿಗೆ ಅನೇಕ ರೀತಿಯಲ್ಲಿ ಅಪವಾದಗಳನ್ನು ಹೊರಿಸಿದ್ದಾನೆ.

ಪೃಥುವಿನ ಮಾತುಗಳನ್ನು ಕೇಳಿದ ಭೂದೇವಿ ಆ ಭಗವಂತನಿಗೆ ವಂದಿಸಿ ತನಗೆ ಶರಣನ್ನು ನೀಡಬೇಕೆಂದು ಪ್ರಾರ್ಥಿಸಿದ್ದಾಳೆ. ಪೂರ್ವಾವತಾರದಲ್ಲಿ ತನ್ನನ್ನು ರಕ್ಷಿಸಿದ ಭಗವಂತನೇ ಈತನೆಂದೂ, ಈಗ ಆತನೇ ತನ್ನನ್ನು ವೇಧಿಸಲೆತ್ನಿಸಿದರೆ ಏನು ಮಾಡಬೇಕೆಂದು ಆತನಲ್ಲಿ ಮೊರೆಯಿಟ್ಟಿದ್ದಾಳೆ. ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಬೀಜಗಳು, ಕಂದ - ಮೂಲಗಳು, ಔಷಧಿಗಳು, ಧಾನ್ಯ ಪ್ರಸ್ತುತ ಆಧ್ಯಾತ್ಮಿಕಾವಗಾಡನವಿಲ್ಲದೇ ದುರಾಚಾರಿಗಳಿಂದ ಉಪಯೋಗಿಸಲ್ಪಡುತ್ತಿವೆಯೆಂದು, ತನಗೆ ಬೇಕಾಗುವಷ್ಟು ಪೋಷಣೆ ಸಿಗದಿರುವುದರಿಂದ ತಾನು ಸಮಸ್ತ ಬೀಜಗಳನ್ನು ನುಂಗಿ ಹಾಕಿದ್ದೇನೆಂದು ಆಕೆ ಹೇಳಿದ್ದಾಳೆ. ಆದ್ದರಿಂದ ಶಾಸ್ತ್ರೋಕ್ತವಾಗಿ ಪ್ರಾಮಾಣಿಕ ರೀತಿಯಲ್ಲಿ ಆ ಬೀಜಗಳನ್ನು ಹೊರಗೆ ತೆಗೆಯಬೇಕೆಂದು ಆಕೆ ಪೃಥು ಮಹಾರಾಜನಿಗೆ ತಿಳಿಸಿದ್ದಾಳೆ.

"ರಾಜಾ! ನನ್ನಿಂದ ಹಾಲನ್ನು ಹಿಂಡಿ ಪ್ರಜೆಗಳನ್ನು ಪೋಷಿಸಬೇಕೆಂದು ಕೊಂಡರೆ ಅದಕ್ಕುಚಿತವಾದ ಕರುವನ್ನು, ಕ್ಷೀರಪಾತ್ರೆಯನ್ನು ತಯಾರು ಮಾಡಬೇಕಾಗುತ್ತದೆ. ಕರುವಿನ ಕುರಿತು ನನಗೆ ಅಮಿತರನುರಾಗವಿರುವುದರಿಂದ ಅದರ ಸಲುವಾಗಿ ನನ್ನ ಸಮಸ್ತ ಹಾಲನ್ನು ಅದಕ್ಕೆ ಪೊರೆಯುತ್ತೇನೆ. ಆನಂತರ ನೀನು ಈ ಭೂಮಿಯನ್ನು ಸಮತಟ್ಟಾಗಿ ಮಾಡು. ಮಳೆಗಾಲ ಅಷ್ಟೊತ್ತಿಗೆ ಒದಗಿ ನೀರು ಹರಿಯುತ್ತದೆ." ಎಂದು ಭೂದೇವಿ ಹೇಳಿದ್ದಾಳೆ. ಆಕೆಯ ಮಾತಿನಿಂದ ಮುದಗೊಂಡ ಪೃಥುವು ಸ್ವಾಯಂಭು ಮನುವನ್ನು ಗೋವತ್ಸನಾಗಿ ಮಾಡಿ ತನ್ನ ಬತ್ತಳಿಕೆಯನ್ನು ಕ್ಷೀರಪಾತ್ರೆಯನ್ನಾಗಿಸಿ ಸಕಲ ಔಷಧಿಗಳನ್ನು, ಧಾನ್ಯಗಳನ್ನು ಹಾಲಿನಂತೆ ಕರೆದಿದ್ದಾನೆ. ಪೃಥುವು ಮಾಡಿದ ಕಾರ್ಯವನ್ನು ನೋಡಿ ಇತರರೂ ತಂತಮ್ಮ ವಾಂಛಿತ ವಸ್ತುಗಳನ್ನು ಭೂಮಿಯಿಂದ ಪಡೆದುಕೊಂಡಿದ್ದಾರೆ. ಋಷಿಗಳು ಬೃಹಸ್ಪತಿಯನ್ನು ಕರುವನ್ನಾಗಿ ಮಾಡಿಕೊಂಡು ಇಂದ್ರೀಯ ಪಾತ್ರೆಯಲ್ಲಿ ಮನಸ್ಸನ್ನು,ನಮ್ಮನ್ನು ಪುನೀತರನ್ನಾಗಿ ಮಾಡಬಲ್ಲ ವಾಕ್-ವೇದಜ್ಞಾನಗಳನ್ನು ಹೊಂದಿದ್ದಾರೆ. ದೇವತೆಗಳು ಇಂದ್ರನನ್ನು ಕರುವವನ್ನಾಗಿ ಮಾಡಿ ಕೊಂಡು ಸೋಮ ರಸವನ್ನು ಕರೆದು ಕೊಂಡಿದ್ದಾರೆ. ಅದರ ಮೂಲಕ ಅವರು ಮನಃ ಶಕ್ತಿ ಸಂಪನ್ನರಾಗಿದ್ದಾರೆ. ದೈತ್ಯರು ಪ್ರಹ್ಲಾದನನ್ನು ಕರುವನ್ನಾಗಿ ಮಾಡಿಕೊಂಡು ಲೋಹ ಪಾತ್ರೆಯಲ್ಲಿ ಸುರಾ ಸವಗಳನ್ನು ಕರೆದುಕೊಂಡಿದ್ದಾರೆ.ಗಂಧರ್ವ ಅಪ್ಸರೆಯರು ವಿಶ್ವಾವಸುವನ್ನು ಕರುವನ್ನಾಗಿ ಮಾಡಿಕೊಂಡು ಪದ್ಮಪಾತ್ರೆಯಲ್ಲಿ ಹಾಲನ್ನು ಕರೆದಿದ್ದಾರೆ ಅದೇ ಮಧುರವಾದ ಸಂಗೀತಕಲೆ ಹಾಗೂ ಸೌಂದರ್ಯವಾಗಿ ಮಾರ್ಪಟ್ಟಿದೆ.ಶ್ರಾದ್ಧ ಕರ್ಮಗಳನ್ನು ಪರಿವೀಕ್ಷಿಸುವ ಪಿತೃ ದೇವತೆಗಳು ಆರ್ಯಮುನಿಯನ್ನು ಕರುವನ್ನಾಗಿ ಮಾಡಿ ಕೊಂಡು ದೊನ್ನೆಯಲ್ಲಿ ಕಾವ್ಯವನ್ನು ಹಿಂಡಿ ಕೊಂಡಿದ್ದಾರೆ. ಸಿದ್ಧಿ ಯೋಗಿಗಳು ಕಪಿಲಮುನಿಯನ್ನು ಕರುವನ್ನಾಗಿ ಮಾಡಿಕೊಂಡು ಆಕಾಶವನ್ನೇ ಪಾತ್ರೆಯನ್ನಾಗಿ ಮಾಡಿ ಕೊಂಡು ಅಣಿಮಾದಿ ಸಿದ್ಧಿಗಳನ್ನು ಕರೆದಿದ್ದಾರೆ. ವಿದ್ಯಾಧರ ಲೋಕ ನಿವಾಸಿಗಳು ಆಕಾಶಕ್ಕೆ ಹಾರಬಲ್ಲ ವಿದ್ಯೆಯನ್ನು ಪಡೆದು ಕೊಂಡಿದ್ದಾರೆ. ಕಿನ್ನರ - ಕಿಂಪುರುಷರು ಮಯನೆಂಬ ದಾನವನ್ನು ಕರುವನ್ನಾಗಿ ಮಾಡಿ ಅಂತರ್ಧಾನರಾಗುವ ವಿದ್ಯೆಯನ್ನು ಕರೆದಿದ್ದಾರೆ.ಯಕ್ಷ ರಾಕ್ಷಸರು ಶಿವನನ್ನು ಕರುವನ್ನಾಗಿಸಿ ರಕ್ತಮಯವಾದ ಮದ್ಯವನ್ನು ಕಪಾಲದಲ್ಲಿ ಕರೆದುಕೊಂಡಿದ್ದಾರೆ. ನಂತರ ಸರ್ಪಗಳು, ಹುಳಗಳು, ಹಾವುಗಳು, ನಾಗಗಳು, ಚೇಳುಗಳು ಇತರ ವಿಷಜಂತುಗಳು ತಕ್ಷಕನನ್ನು ಕರುವನ್ನಾಗಿ ಮಾಡಿ ವಿಷವನ್ನು ಬಿಲಿ ಪಾತ್ರೆಯಲ್ಲಿ ಹಿಡಿದಿದ್ದಾರೆ. ಗೋವುಗಳಂತಹ ಚತುಷ್ಪಾದ ಪ್ರಾಣಿಗಳು ಶಿವನ ವಾಹನವಾದ ನಂದಿಯನ್ನು ಕರುವನ್ನಾಗಿ ಮಾಡಿ ಅರಣ್ಯವೆಂಬ ಪಾತ್ರೆಯಲ್ಲಿ ಹಸಿರು ಕಾಯಿಗಳನ್ನು ಕರೆದುಕೊಂಡಿದ್ದಾರೆ. ಕ್ರೂರಮೃಗಗಳು ಸಿಂಹವನ್ನು ಕರುವನ್ನಾಗಿಸಿ ಮಾಂಸವನ್ನು ಕರೆದಿದ್ದಾರೆ. ಪಕ್ಷಿಗಳು ಗರುಡನನ್ನು ಕರುವಾಗಿಸಿ ಕೀಟಗಳನ್ನು, ವೃಕ್ಷವನ್ನು, ಸಸ್ಯಗಳನ್ನು ಕರೆದುಕೊಂಡಿದ್ದಾರೆ. ವೃಕ್ಷಗಳು ವಟವೃಕ್ಷವನ್ನು ಕರುವಾಗಿಸಿ ರಸವತ್ತಾದ ಹಾಲನ್ನು ಕರೆದಿವೆ. ಪರ್ವತಗಳು ಹಿಮಾಲಯವನ್ನು ವತ್ಸವನ್ನಾಗಿಸಿ ಬೆಟ್ಟದಡಿಯ ಪಾತ್ರೆಯಲ್ಲಿ ಧಾತುಗಳನ್ನು ಕರೆದುಕೊಂಡಿವೆ.

ಈ ರೀತಿಯಾಗಿ ಪೃಥುಮಹಾರಾಜನೊಂದಿಗೆ ಎಲ್ಲರೂ ತಂತಮ್ಮ ವಾಂಛಿತ ವಸ್ತುಗಳನ್ನು ಧರಣಿಯಿಂದ ಪಡೆದಿದ್ದಾರೆ. ಈ ವಿಧವಾಗಿ ಧರಿಣಿಯು ಎಲ್ಲರಿಗೂ ವಾಂಛಿತಗಳನ್ನು ಕೊಡುವುದನ್ನು ಕಂಡು ಪೃಥು ಬಹಳಾ ಹರ್ಷಿಸಿದ್ದಾನೆ. ಆಗ ಆತನಿಗೆ ಆಕೆಯ ಪ್ರತಿ ಪುತ್ರ ವಾತ್ಸಲ್ಯವುಂಟಾಗಿದೆ. ನಂತರ ಆತ ತನ್ನ ಧನಸ್ಸಿನಿಂದ ಪರ್ವತಗಳನ್ನು ಒಡೆದು ಭೂಮಿಯನ್ನು ಸಮತಲವನ್ನಾಗಿಸಿದ್ದಾನೆ.ಆನಂತರ ಆತನು ಸಮತಲವನ್ನಾಗಿಸಿದ ಭೂಮಿಯ ಮೇಲೆ ಜನರಿಗಾಗಿ ನಿವಾಸಗಳನ್ನು ನಿರ್ಮಿಸಿದ್ದಾನೆ. ಪೃಥುಮಹಾರಾಜನ ಆಡಳಿತ ಕಾಲಕ್ಕೆ ಮುಂಚೆ ಗ್ರಾಮಗಳು, ನಗರಗಳು, ತೋಟಗಳು ಇದ್ದಿಲ್ಲ.ಎಲ್ಲವೂ ಅಸ್ತವ್ಯಸ್ತಗೊಂಡಿತ್ತು. ಪೃಥುವಿನ ಆಳ್ವಿಕೆಯ ಕಾಲದಲ್ಲೇ ಜನರೆಲ್ಲರೂ ತಮ್ಮ ವಸತಿ ಗೃಹಗಳನ್ನು ನಿರ್ಮಿಸಿಕೊಂಡಿದ್ದಾರೆ. ಪೃಥುವಿನ ಕಾಲದಿಂದಲೇ ನಗರಗಳು, ಗ್ರಾಮಗಳು, ಸುಂದರ ಪ್ರಣಾಳಿಕೆಗಳು ಮೊದಲುಗೊಂಡಿವೆ.

ಈ ರೀತಿಯಾಗಿ ಜನರ ಸಮಸ್ತ ಅವಶ್ಯಕತೆಗಳನ್ನು ತೀರಿಸಿದ ಪೃಥುವು ಸರಸ್ವತಿ ನದಿ ತೀರದಲ್ಲಿ ನೂರು ಅಶ್ವಮೇಧಯಾಗಗಳನ್ನು ಮಾಡಲು ಸಂಕಲ್ಪ ಮಾಡಿದ್ದಾನೆ. ಪೃಥುವು ಬಹು ವೈಭವದಿಂದ ಮಾಡಿದ ಈ ಯಾಗದಲ್ಲಿ ಸ್ವತಃ ವಿಷ್ಣುವೇ ಉಪಸ್ಥಿತನಾಗಿದ್ದಾನೆ.ಯಜ್ಞ ಕುಂಡದಲ್ಲಿ ಪ್ರತ್ಯಕ್ಷನಾದ ದೇವದೇವನ ಜೊತೆಯಲ್ಲಿ ಬ್ರಹ್ಮರುದ್ರಾದಿಗಳೂ ಆತನ ಜೊತೆಯಲ್ಲಿ ಬಂದಿದ್ದಾರೆ. ಗಂಧರ್ವರು, ಮುನಿಗಳು, ಅಪ್ಸರೆಯರು ದೇವೇಶನನ್ನು ಸ್ತುತಿಸಿದ್ದಾರೆ. ನಂದ ಸುನಂದಾದಿ ಭಾಗವತರು, ಕಪಿಲ, ನಾರದರು, ದತ್ತಾತ್ರೇಯರಂತಹ ಮುನಿಗಳು ಯೋಗಿಗಳಾದ ಸನಕಾದಿಗಳು, ಈ ಸಮಯದಲ್ಲಿ ಭಗವಂತನನ್ನು ಅರ್ಚಿಸಿದ್ದಾರೆ. ಯಜ್ಞವು ವಿಷ್ಣು ಪ್ರೀತ್ಯರ್ಥವಾಗಿ ಕೈಗೊಂಡಿದ್ದರಿಂದ ವಿಷ್ಣು ಸಂಪ್ರೀತನಾಗಿ ಯಜ್ಞ ಸ್ಥಳದಲ್ಲಿ ಪ್ರಕಟಗೊಂಡಿದ್ದೇ ಅಲ್ಲದೆ ಸಮಸ್ತ ಜೀವಿಗಳ ಇಚ್ಛೆಗಳೂ ತೀರಿ ಹೋಗಿವೆ. ಈ ರೀತಿಯಾಗಿ ಅಪ್ರತಿಮವಾದ ಯಜ್ಞ ನಿರ್ವಹಣೆಯಿಂದ ಪೃಥುವಿನ ವೈಭವವು ಹೆಚ್ಚಾಗಿ ಬೆಳೆದುದನ್ನು ಕಂಡು ಸಹಿಸಲಾರದ ಇಂದ್ರನು ಕಡೆಗೆ ಯಜ್ಞದ ಕುದುರೆಯನ್ನು ಅಪಹರಿಸಲು ಸನ್ಯಾಸಿ ವೇಷವನ್ನು ಧರಿಸಿದ್ದಾನೆ. ಅದೇ ಮುಂದೆ ಪಾಷಂಡ ಮತದಾರರಾಗಿ ವೃದ್ಧಿ ಹೊಂದಿದ್ದಾರೆ. ಈ ಪ್ರಕಾರವಾಗಿ ಅಕ್ರಮ ಸನ್ಯಾಸಿಗೆ ಪ್ರವೇಶವಿತ್ತಿದ್ದಕ್ಕಾಗಿ ಇಂದ್ರನನ್ನು ಸಂಹರಿಸಲು ಪೃಥುವು ಮುಂದಾಗಿ

ದ್ದಾನೆ. ಆಗ ಋತ್ವಿಕರು ಆತನನ್ನು ತಡೆದಿದ್ದಾರೆ. ಯಜ್ಞ ಸ್ಥಳದಲ್ಲಿ ಬಲಿ ಯಜ್ಞಪಶುವನ್ನು ಬಲಿಕೂಡಬೇಕೇ ಹೊರತು ಮತ್ತಾರನ್ನು ಅಲ್ಲವೆಂದು ಉಪದೇಶಿಸಿದ ಋತ್ವಿಕರು ಮಂತ್ರಜಲದಿಂದ ಇಂದ್ರನನ್ನು ಕರೆಸಿ ಅಗ್ನಿಯಲ್ಲಿ ಹೋಮವನ್ನು ಮಾಡಲು ಸಂಕಲ್ಪಿಸಿದ್ದಾರೆ. ತಮ್ಮ ಸಂಕಲ್ಪದಂತೆ ಅವರೂ ತಮ್ಮ ಮಂತ್ರಜಲದಿಂದ ಸಾಕ್ಷಾತ್ ಇಂದ್ರನನ್ನೇ ಅಲ್ಲಿಗೆ ಬರುವಂತೆ ಮಾಡಿದ್ದಾರೆ. ಸ್ವರ್ಗದರಸನಾದ ಇಂದ್ರನನ್ನು ಯಜ್ಞಕುಂಡಲದಲ್ಲಿ ಹೋಮ ಮಾಡುಲಾಗುತ್ತಿದೆ ಎನ್ನುತ್ತಲೇ ಬ್ರಹ್ಮನು ಪ್ರತ್ಯಕ್ಷನಾಗಿ ಅದನ್ನು ನಿವಾರಿಸಿದ್ದಾನೆ. ಈ ರೀತಿಯಾಗಿ ಇಂದ್ರನ ಮೇಲೆ ದಾಳಿ ಮಾಡಿದರೆ ಆತನು ಮತ್ತಷ್ಟು ಅಧರ್ಮ ಪದ್ಧತಿಗಳಿಂದ ಪ್ರವೇಶ ಪಡೆಯಬಹುದೆಂದು ಬ್ರಹ್ಮನು ಅವರಿಗೆಲ್ಲಾ ಎಚ್ಚರಿಸಿದ್ದಾನೆ. ಮುಕ್ತಿ ಮಾರ್ಗದ ಅರಿವಿರುವ ಪೃಥುವಿಗೆ ಕ್ಷುಲಕ ಯಜ್ಞಗಳಿಂದ ಆಗುವುದಾದರು ಏನು ಎಂದು ಬ್ರಹ್ಮನು ಅರುಹಿದ್ದಾನೆ. ಪೃಥುವು ಸಂಕಲ್ಪಿಸಿದ ನೂರು ಯಜ್ಞಗಳಲ್ಲಿ ಒಂದು ಯಜ್ಞ ಕಡಿಮೆಯಾದಲ್ಲಿ ನಷ್ಟವಾಗುವುದಾದರೂ ಏನಿಲ್ಲವೆಂದು ಬ್ರಹ್ಮನು ಪೃಥುವಿಗೆ ಹಿತೋಪದೇಶ ಮಾಡಿದ್ದಾನೆ.

ಬ್ರಹ್ಮನ ಮಾತನ್ನು ಶಿರಸಾವಹಿಸಿದ ಪೃಥುಮಹಾರಾಜ ಇಂದ್ರನೊಂದಿಗೆ ಸಂಧಿ ಮಾಡಿಕೊಂಡಿದ್ದಾನೆ. ನೂರನೇ ಯಜ್ಞವನ್ನು ಪೂರ್ತಿ ಮಾಡಿ ತನ್ನ ಆಸೆಯನ್ನು ತೀರಿಸಿಕೊಳ್ಳುವ ವಾಂಛೆಯನ್ನು ಆತ ಕೈಬಿಟ್ಟಿದ್ದಾನೆ. ಆನಂತರ ಅವಭೃಥ ಸ್ನಾನವನ್ನು ಮಾಡಿ ಸಮಸ್ತ ದೇವತೆಗಳಿಂದ ವರಗಳನ್ನು, ಆಶೀರ್ವಾದಗಳನ್ನು ಹೊಂದಿದ್ದಾನೆ. ಆ ಬಳಿಕ ಆತನು ಬ್ರಾಹ್ಮಣರಿಗೆ ಕೂಡ ಭಾರೀ ಕಾಣಿಕೆಗಳನ್ನು ಕೊಟ್ಟು ಅವರಿಂದ ಆಶೀರ್ವಚನಗಳನ್ನು ಪಡೆದಿದ್ದಾನೆ. ಪೃಥು ಮಹಾರಾಜ ನೂರು ಅಶ್ವಮೇಧ ಯಾಗಗಳನ್ನು ಮಾಡುವಷ್ಟರಲ್ಲಿ ಸಂತೃಪ್ತನಾದ ವಿಷ್ಣು ಭಗವಂತನು ಯಜ್ಞ ಸ್ಥಳದಲ್ಲಿ ಪ್ರತ್ಯಕ್ಷನಾಗಿದ್ದಾನೆ. ತನ್ನೊಂದಿಗೆ ಇಂದ್ರನನ್ನು ಕರೆತಂದಿದ್ದಾನೆ.

ಈ ಬಗೆಯಾಗಿ ಭಗವದವತಾರಮೂರ್ತಿಯಾದ ಪೃಥು ಮಹಾರಾಜ ಜನರಂಜಕನಾಗಿ ರಾಜ್ಯ ಪರಿಪಾಲನೆ ಮಾಡುತ್ತಾ ದಿವ್ಯ ಕೀರ್ತಿಯನ್ನು ಹೊಂದಿದ್ದಾನೆ.





## ತಿರುಮಲ ತಿರುಪತಿ ದೇವಸ್ಥಾನಗಳು

## 'ಸಪ್ತಗಿರಿ' ಸ್ವರ್ಣೋತ್ಸವ ಸಂಚಿಕೆಯ ವ್ಯಾಸಗಳಿಗೆ ಆಹ್ವಾನ!!

ತಿರುಮಲ ತಿರುಪತಿ ದೇವಸ್ಥಾನವು ಆಧ್ಯಾತ್ಮಿಕ ಸಚಿತ್ರಮಾಸ ಪತ್ರಿಕೆ "ಸಪ್ತಗಿರಿ". ಕಲಿಯುಗ ಪ್ರತ್ಯಕ್ಷ ದೈವವಾದ ಶ್ರೀ ವೇಂಕಟೇಶ್ವರ ಸ್ವಾಮಿಯ ವೈಭವವನ್ನು, ತಿರುಮಲ ಕ್ಷೇತ್ರದ ದಿವ್ಯತ್ವವನ್ನು ಪ್ರತಿ ತಿಂಗಳು ಪಾಠಕರಿಗಾಗಿ "ಸಪ್ತಗಿರಿ"ಯು ನೀಡುತ್ತಿದೆ. ಆರು ಭಾಷೆಗಳಲ್ಲಿ ಪ್ರಚುರಣೆಗೊಳ್ಳುತ್ತಿರುವ ಆಧ್ಯಾತ್ಮಿಕ ಧಾರ್ಮಿಕ ಪತ್ರಿಕೆಗಳಲ್ಲಿ ಒಂದಾಗಿದೆ. ಈ ಪತ್ರಿಕೆಯು ಜಿಜ್ಞಾಸೆಯುಳ್ಳವರಿಗೆ,ಮಹಿಳೆಯರಿಗೆ, ಬಾಲರರಿಗೆ... ಹೀಗೆ ತಾರತಮ್ಯವಿಲ್ಲದೆ ಎಲ್ಲರಿಗೂ ಉಪಯುಕ್ತವಿರುವ ಪತ್ರಿಕೆ ಇದು. "ಸಪ್ತಗಿರಿ" ಪಾಠಕರೆಲ್ಲರ ಗೌರವವನ್ನು ಪಡೆದಿದೆ. ಕಾಲ ಪ್ರವಾಹದಲ್ಲಿ ಪುರೋಭಿವೃದ್ಧಿಯ ಕಡೆಗೆ ಕಾಲಿಡುತ್ತಿದೆ. ಈ ಸಂದರ್ಭವಾಗಿ "ಸಪ್ತಗಿರಿ" ಮಾಸಪತ್ರಿಕೆಯನ್ನು ಸ್ವರ್ಣೋತ್ಸವ ಪ್ರತ್ಯೇಕ ಸಂಚಿಕೆಯಾಗಿ ಪ್ರಚುರಿಸಬೇಕೆಂದುಕೊಳ್ಳುತ್ತಿದೆ ಸಪ್ತಗಿರಿ. ಪಾಠಕರಿಂದ ಸಪ್ತಗಿರಿ ಮಾಸಪತ್ರಿಕೆಯ ಬಗ್ಗೆ ತಮ್ಮ ಅನುಭೂತಿಯನ್ನು ತಮ್ಮ ರಚನೆಗಳ ರೂಪದಲ್ಲಿ ಕಳಿಸಬೇಕಾಗಿ ಕೋರಲಾಗಿದೆ. ಅದನ್ನು ಪರಿಶೀಲಿಸಿ "ಸಪ್ತಗಿರಿ"ಯಲ್ಲಿ ಪ್ರಚುರಿಸಲಾಗುತ್ತದೆ.

**ನಿಮ್ಮ ರಚನೆಗಳನ್ನು ಅಂಚೆ ಮೂಲಕ ಕಳುಹಿಸಬೇಕಾದ ವಿಳಾಸ :**

ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ., ಪ್ರೆಸ್ ಕಾಂಪೌಂಡ್, ಕೆ.ಟಿ. ರಸ್ತೆ , ತಿರುಪತಿ - 517507.

ಕನ್ನಡದಲ್ಲಿ ಡಿ.ಟಿ.ಪಿ. ಮಾಡಿ ಮೇಯಿಲ್ ಮುಖಾಂತರ ಕಳುಹಿಸುವವರು ಅನು ಫಾಂಟ್ಸ್(ಅಥವಾ) ಎಂ.ಎಸ್.ವರ್ಡ್‌ನಲ್ಲಿ ಯೂನೀಕೋಡ್ ಫಾಂಟ್‌ನಲ್ಲಿ ಟೈಪ್ ಮಾಡಿದ ಪೈಲ್ ಅನ್ನು ಪಿ.ಡಿ.ಎಫ್.ಮಾಡಿ **kannadasapthagiri50years@gmail.com** ಎನ್ನುವ ಮೇಯಿಲ್‌ಗೆ ಕಳುಹಿಸಬೇಕಾಗಿ ಕೋರಲಾಗಿದೆ.

**- ಪ್ರಧಾನ ಸಂಪಾದಕರು.**

# ಶ್ರೀ ಭೂವರಾಹ ಸ್ವಾಮಿ

- ಶ್ರೀಮತಿ. ಎಸ್. ಸುರೇಖ

ದಶಾವಾತಾರದಲ್ಲಿ ಮೂರನೇ ಅವತಾರವಾದ ವರಾಹಸ್ವಾಮಿ ಅಂಬುಜಾವಳ್ಳಿ ಸಮೇತವಾಗಿ ಕರ್ನಾಟಕದ ಮೈಸೂರು ಸಮೀಪದಲ್ಲಿರುವ ಕಲ್ಹಳ್ಳಿಯಲ್ಲಿ ಭೂವರಾಹ ಸ್ವಾಮಿಯಾಗಿ ನೆಲಸಿದ್ದಾರೆ. ಈ ದೇವಾಲಯವು ಹೇಮಾವತಿ ನದಿಯ ದಡದಲ್ಲಿದೆ.

ಸುಮಾರು 2500 ವರ್ಷಗಳ ಹಿಂದೆ ಗೌತಮ ಮಹರ್ಷಿಯು ಪೂಜಿಸಿದರೆಂದು ಪುರಾಣವು ತಿಳಿಸುತ್ತದೆ. ಇಲ್ಲಿ ಅಂಬುಜಾವಳ್ಳಿ ಸಮೇತ ಭೂವರಾಹದಲ್ಲಿರುವ ಸ್ವಾಮಿ ವಿಗ್ರಹವೂ ಸುಮಾರು 18 ಅಡಿಯ ಎತ್ತರದಲ್ಲಿದೆ. ಸ್ವಾಮಿಯ ದರ್ಶನವನ್ನು ಪಡೆಯಲು ದೂರದ ಪ್ರದೇಶಗಳಿಂದಲೂ ಸಾಕಷ್ಟು ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ದೇವರ ಮೇಲ್ಭಾಗದ ಕೈಯಲ್ಲಿ ಶಂಖ ಮತ್ತೊಂದು ಕೈಯಲ್ಲಿ ಸುದರ್ಶನ ಚಕ್ರವನ್ನು ಹಿಡಿದಿದ್ದಾರೆ. ಕೆಳಗಿನ ಕೈಗಳಲ್ಲಿ ಸುದರ್ಶನ ಚಕ್ರವನ್ನು ವಿಗ್ರಹದ ಹಿಂದೆ ಕೆತ್ತಲಾಗಿದೆ ವಿಗ್ರಹದ ಕೆಳಗಿನ ಎಡಗಡೆಯ ಕೈಯಲ್ಲಿ ಅಮ್ಮನವರು ಕುಳಿತ್ತಿದ್ದಾರೆ, ಮತ್ತು ಕೆಳಗಿನ ಬಲಗೈ ಅಭಿಯಾನ ಮುಧ್ರೆಯಲ್ಲಿದೆ. ಭೂವರಾಹಸ್ವಾಮಿ ದೇವಸ್ಥಾನವು ಸ್ಥಳೀಯರಲ್ಲಿ ಅತ್ಯಂತ ಪ್ರಸಿದ್ಧವಾಗಿದೆ. ಈ ದೇವರಿಗೆ ನಿಗೂಢ ಶಕ್ತಿಗಳಿವೆ ಎಂದು ನಂಬಲಾಗಿದೆ.



**ಇಲ್ಲಿಯ ಇಟ್ಟಿಗೆ ಮತ್ತು ಮಣ್ಣಿನ ಮಹತ್ವ :**

ಈ ಕ್ಷೇತ್ರದಲ್ಲಿರುವ ಇಟ್ಟಿಗೆಯನ್ನು ದೇವರಲ್ಲಿ ಇಟ್ಟು ಪೂಜೆ ಮಾಡಿಸಿಕೊಡುತ್ತಾರೆ. ಮನೆಯನ್ನು ಕಟ್ಟುವ ಕನಸು ನನಸಾಗುತ್ತದೆ ಎಂದು ನಂಬಿಕೆ. ಹಾಗೆಯೇ ಆ ಇಟ್ಟಿಗೆಯನ್ನು ಮನೆ ಮತ್ತು ಯಾವು ದಾದರೂ ಭವನದ ಶಂಕು ಸ್ಥಾಪನೆ ಮಾಡುವಾಗ ಬಳಸಿದರೆ ಯಾವುದೇ ಅಡಚಣೆ ಇಲ್ಲದೆ ಸಂಪೂರ್ಣವಾಗುವುದು. ಇಲ್ಲಿಯ ಮಣ್ಣಿನ ಪೂಜೆ ಮಾಡಿಸಿದರೆ ಕಾರ್ಯ ಸಿದ್ಧಿಯಾಗುತ್ತದೆ ಎಂದು ಹೇಳಲಾಗುತ್ತದೆ.

**ಹಿನ್ನೆಲೆ**

ಹೊಯ್ಸಳ ರಾಜನಾದ 3ನೇ ಬಲ್ಲಾಳ ದೇವರಾಜನು ಕಾಡಿನಲ್ಲಿ ಬೇಟೆಯಾಡುವಾಗ ವಿಚಿತ್ರವಾದ ವಿಷಯ ಸಂಭವಿಸುತ್ತಿರುವುದನ್ನು ಗಮನಿಸಿದರು. ಮೊಲವನ್ನು ಬೆನ್ನಟ್ಟಿದ ನಾಯಿಯನ್ನು ನೋಡಿದ ಒಂದು ನಿರ್ದಿಷ್ಟ ಹಂತ ತಲುಪಿದ ನಂತರ ಮೊಲವೂ ನಾಯಿಯನ್ನು ಬೆನ್ನಟ್ಟಲು ಆರಂಭಿಸಿತು. ರಾಜನಿಗೆ ಪರಮ ಆಶ್ಚರ್ಯವಾಯಿತು. ಈ ಸ್ಥಳದಲ್ಲಿ ಯಾವುದೋ ಮಾಂತ್ರಿಕ ಶಕ್ತಿಯಿದೆ ಎಂದು ರಾಜನು ನಂಬಿ ಭೂಮಿಯ ಪದರಗಳ ಅಡಿಯಲ್ಲಿ ಅಡಗಿರುವ ಶ್ರೀ ಭೂವರಾಹ ಸ್ವಾಮಿಯ ವಿಗ್ರಹವನ್ನು ಕಂಡು ಆ ಸ್ಥಳವನ್ನು ಅಗೆಸಿದನು. ಘಟನೆಯ ನಂತರ ರಾಜ ವರಾಹಸ್ವಾಮಿಯ ದೇವಸ್ಥಾನವೊಂದನ್ನು ನಿರ್ಮಿಸಿ ಪ್ರತಿದಿನ ಪೂಜೆ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರೆಂದು ಕಥೆಯು ಪ್ರಚಾರದಲ್ಲಿದೆ.

ಈಗ ಪೂಜೆ ಕೈಂಕರ್ಯವನ್ನು ಪರಕಾಲ ಮಠದವರ ಅಧೀನದಲ್ಲಿ ಕೊನೆ ಸಾಗುತ್ತಿದೆ. ಶ್ರೀ ಭೂವರಾಹ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ.

ಈ ದೇವಸ್ಥಾನವು ಮೈಸೂರಿನ ಹತ್ತಿರದಲ್ಲಿರುವ ಪಾಂಡುಪುರದಿಂದ 32 ಕಿ.ಮೀ. ದೂರದಲ್ಲಿದೆ. ಹತ್ತಿರದ ಬಸ್‌ನಿಲ್ದಾಣವು ಕಲ್ಹಳ್ಳಿಯಿಂದ 2 ಕಿ.ಮೀ. ದೂರದಲ್ಲಿದೆ. ಸ್ಥಳವನ್ನು ತಲುಪುವುದು ತುಂಬಾ ಸುಲಭ.



# ಸಂಸ್ಕಾರ ಸಮನ್ವಿತ ಜೀವನವೃತ್ತಿ

ಆರ್.ಎನ್.ಎನ್. ಮೂರ್ತಿ

ನಿಷೇಕಾದ್ ಬೈಜಿಕಂ ಚೈನೋ ಗಾರ್ಭಿಕಂ ಚಾಪಮೃಜ್ಯತೇ।
ಕ್ಷೇತ್ರ ಸಂಸ್ಕಾರಸಿದ್ಧಿಶ್ಚ ಗರ್ಭಾಧಾನ ಫಲಂ ಸ್ಮೃತಮ್ ॥

ಗರ್ಭಾಧಾನ ಕಾಲಕ್ಕೆ ಸ್ತ್ರೀ - ಪುರುಷರು ಯಾವ ಭಾವದಿಂದಿರುತ್ತಾರೋ, ಅದರ ಪ್ರಭಾವ ಅವರ ರಜ - ವೀರ್ಯದಲ್ಲಿ ಉಂಟಾಗುತ್ತದೆ. ಆ ರಜ ವೀರ್ಯಜನ್ಯ ಸಂತಾನದಲ್ಲಿಯು ಸಹ ಆ ಭಾವಗಳು ಗೋಚರಿಸುತ್ತವೆ.

ಆಹಾಚಾರಚೇಷ್ಟಾಭಿರ್ಯಾದೃಶೀಬಿಃ ಸಮನ್ವಿತೌ ।
ಸ್ತ್ರೀ ಪುಂ ಸೌ ಸಮುಪೇಯಾತಾಂ ತಯೋಃ ಪುತ್ರೋಽಪಿ ತಾದೃಶಃ॥

ಅಂದರೆ - ಸ್ತ್ರೀ ಪುರುಷರು ಎಂತಹ ಆಹಾರ, ವ್ಯವಹಾರ ಹಾಗೂ ಕ್ರಿಯೆಗಳಲ್ಲಿ ತೊಡಗಿರುತ್ತಾರೋ,ಪರಸ್ಪರ ಸಮಾಗಮಗೊಳ್ಳುತ್ತಾರೋ, ಅವರ ಮಕ್ಕಳೂ ಸಹ ಅದೇ ರೀತಿಯ ಸ್ವಭಾವದವರಾಗಿರುತ್ತಾರೆ. ಹಾಗಾಗಿ ಶುಭ ಮುಹೂರ್ತದಲ್ಲಿ ಮಂತ್ರದಿಂದ ಪ್ರಾರ್ಥಿಸಿ ಗರ್ಭಾಧಾನ ಮಾಡಿಕೊಳ್ಳಬೇಕು. ಈ ವಿಧಾನದಿಂದ ಕಾಮುಕತೆಯ ಧಮನ ಮತ್ತು ಶುಭಭಾವನೆಯಿಂದ ಕೂಡಿದ ಮನಸ್ಸು ಹೊಂದಿದಂತಾಗುತ್ತದೆ. ದ್ವಿಜಾತಿಯವರು ಗರ್ಭಾಧಾನಕ್ಕೆ ಮೊದಲು ಪವಿತ್ರರಾಗಿ ಈ ಮಂತ್ರವನ್ನು ಪ್ರಾರ್ಥಿಸಿ, ಪಠಿಸಬೇಕು.

ಗರ್ಭಂ ದೇಹೀ ಸಿನೀವಾಲಿ ಗರ್ಭಂ ಧೇಹಿ ಪೃಥುಷ್ಟುಕೀ।
ಗರ್ಭಂತೇ ಅಶ್ವಿನೌ ದೇವಾವಾಧತ್ತಾಂ ಪುಷ್ಕರ ಸ್ರ ಜೌ॥

ಹೇ! ವಿಸ್ತಾರವಾದ ಎದೆಯುಳ್ಳ, ಜಘನವುಳ್ಳ ದೇವತೆಯೇ! ಪೃಥುಷ್ಟುಕ ದೇವಿಯೋ! ನೀನು ಈ ಸ್ತ್ರೀಗೆ ಗರ್ಭದರಿಸುವ ಸಾಮರ್ಥ್ಯವನ್ನು ಕೊಡು ಮತ್ತು ಅವಳನ್ನು ಪುಷ್ಪಗೊಳಿಸು, ತಾವರೆಮಾಲೆಗಳಿಂದ ಸುಶೋಭಿತರಾದ ಇಬ್ಬರು ಅಶ್ವೀನೀಕುಮಾರರು ನಿನ್ನ ಗರ್ಭವನ್ನು ಪುಷ್ಟಿಗೊಳಿಸಲು.

ಶಾಸ್ತ್ರಗಳಲ್ಲಿ ಮಕ್ಕಳನ್ನು ಪಡೆಯಲು ಪುಂಸವನ ಸಂಸ್ಕಾರದ ವಿಧಿಯೂ ಇದೆ. 'ಗರ್ಭಾದ್ ಭವೇಚ್ಚ ಪುಂಸೂತೇ ಪುಂಸ್ವರೂಪ - ಪ್ರತಿಪಾದನಮ್' ಈ ಗರ್ಭದಿಂದ ಪುತ್ರ ಹುಟ್ಟಲಿ (ಹಾಗಾಗಲಿ) ಎನ್ನುವ ಕಾರಣಕ್ಕೆ ಈ ಪುಂಸವನ ಸಂಸ್ಕಾರ ಮಾಡಲ್ಪಡುತ್ತದೆ. 'ಪ್ರತ್ರಾಮ್ನೋ ನರಕಾತ್ ತ್ರಾಯತೇ ಇತಿ ಪುತ್ರಃ, ಅಂದರೆ 'ಪ್ರಮ್' ಹೆಸರಿನ ನರಕದಿಂದ ಯಾರು ರಕ್ಷಿಸುತ್ತಾನೋ ಅವನೇ ಪುತ್ರ ಎಂದೆನಿಸಿಕೊಳ್ಳುತ್ತಾನೆ. ಈ ಮಾತಿನ ಆಧಾರದಂತೆ ನರಕದಿಂದುಳಿಯಲು ಮನುಷ್ಯ ಪುತ್ರ ಪ್ರಾಪ್ತಿಯನ್ನು ಬಯಸುತ್ತಾನೆ. ಅವನ ಈ ಅಭಿಲಾಷೆಯನ್ನು ಪೂರ್ಣಗೊಳಿಸಲೆಂದೇ ಶಾಸ್ತ್ರಗಳಲ್ಲಿ ಪುಂಸವನ ಸಂಸ್ಕಾರ ವಿಧಾನ ಹೇಳಲ್ಪಟ್ಟಿದೆ. ಗರ್ಭ ಎರಡು - ಮೂರು ತಿಂಗಳಿರುವಾಗಲೇ ಅಥವಾ ಗರ್ಭಿಣಿಯಲ್ಲಿ ಗರ್ಭದ ಚಿನ್ಹೆ ಸ್ಪಷ್ಟವಾಗುತ್ತಲೇ ಪುಂಸವನ ಸಂಸ್ಕಾರ ವಿಧಾನವನ್ನು ಮಾಡಬೇಕೆಂದು ತಿಳಿಸಲಾಗಿದೆ. ಶುಭ ಮಂಗಳಮಯ ಮುಹೂರ್ತದಲ್ಲಿ ಮಾಂಗಲಿಕ ಪಠಣ ಮಾಡಿ ಗಣೇಶ/ ವಿಶ್ವಕ್ಸೇನ ಮುಂತಾದ ದೇವತೆಗಳನ್ನು ಪೂಜಿಸಿ, ವಟವೃಕ್ಷದ ಹೊಸ ಚಿಗುರು ಹಾಗೂ ಅಂಕುರಗಳನ್ನು ಮೊಗ್ಗುಗಳನ್ನು, ದರ್ಬೆಯ ಬೇರನ್ನು ನೀರಿನೊಂದಿಗೆ ಅರೆದು ಆ ರಸ ರೂಪದ ಔಷಧಿಯನ್ನು ಪತಿಯಾದವನು ಗರ್ಭಿಣಿಯ ಬಲ ಮೂಗಿನ ಹೊಳ್ಳೆಗಳ ಮೂಲಕ ಬಿಡಬೇಕು. ಪುತ್ರನ ಭಾವನೆಯಿಂದ : - ಈ ಮಂತ್ರಗಳನ್ನು ಪಠಿಸಬೇಕು.

ಓಂ ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯಜಾತಃ ಪತಿರೇಕ ಆಸೀತ್ ।
ಸ ದಾಧಾರ ಪೃಥಿಪೀಂ ದ್ಯಾಮುತೇಮಾಂ ಕಸ್ಮೈದೇವಾಯ ಹವಿಷಾ ವಿಧೇಮ ॥

ಈ ಮಂತ್ರಗಳಿಂದ ಸುಸಂಸ್ಕೃತ ಹಾಗೂ ಅಭಿಮಂತ್ರಿತ ಭಾವ ಪ್ರಧಾನ ನಾರಿಯ ಮನಸ್ಸಿನಲ್ಲಿ ಪುತ್ರಭಾವದ ಪ್ರವಾಹ ಪ್ರವಹಿಸುತ್ತದೆ. ಇದರ ಪ್ರಭಾವದಿಂದ ಗರ್ಭದ ಮಾಂಸ ಪಿಂಡದಲ್ಲಿ ಪುರುಷ ಚಿನ್ಹೆ ಉತ್ಪನ್ನವಾಗುತ್ತದೆ.

ಪುಂಸವನ ಸಂಸ್ಕಾರಕ್ಕೇ ಉಪಾಂಗಭೂತವಾದ ಒಂದು ಸಂಸ್ಕಾರವಿದೆ. ಅದನ್ನು 'ಅನವಲೋಭನ' ಎಂದು ಕರೆಯುತ್ತಾರೆ. ಈ ಸಂಸ್ಕಾರದ ಪ್ರಯೋಜನವೆಂದರೆ, ಇದ ರಿಂದ ಗರ್ಭಸ್ಥ ಶಿಶುವಿನ ರಕ್ಷಣೆಯಾಗುತ್ತದೆ. ಅಸಮಯ ಗರ್ಭಚ್ಯುತವಾಗಲು ಬಿಡುವುದಿಲ್ಲ.ಇದರಲ್ಲಿ ಮಗುವಿನ ರಕ್ಷಣೆಗೆ ಎಲ್ಲ ಮಂಗಳಕರ ಪೂಜೆ, ಹವನಾದಿ ಕಾರ್ಯಗಳು, ನಂತರ ದಲ್ಲಿ ಜಲ ಮತ್ತು ಔಷಧಿಗಳ ಪ್ರಾರ್ಥನೆ ಮಾಡಲಾಗುತ್ತದೆ. ಪುತ್ರಪ್ರಾಪ್ತಿಗೆ ಪುರಾಣಗಳಲ್ಲಿ ಪುಂಸವನ ಎಂಬ ಹೆಸರಿನ ಒಂದು ವ್ರತ ವಿಶೇಷವೂ ಸಹ ತಿಳಿಸಲ್ಪಟ್ಟಿದೆ. ಇದನ್ನು ಒಂದು ವರ್ಷದವರೆಗೆ ಮಾಡುತ್ತಿರಬೇಕು.ಸ್ತ್ರೀಯರು ಪತಿಯ ಅನು ಮತಿಯಿಂದಲೇ ಈ ವ್ರತದ ಸಂಕಲ್ಪವನ್ನು ಪಡೆಯುತ್ತಾರೆ. ಭಾಗವತದ ೬ನೇ ಸ್ಕಂಧ, 18-19 ನೇ ಅಧ್ಯಾಯಗಳಲ್ಲಿ ಮಹರ್ಷಿ ಕಶ್ಯಪರ ಆಜ್ಞೆಯಿಂದ ದಿತಿಯು ಇಂದ್ರನ ವಧೆಯ ಸಾಮರ್ಥ್ಯವನ್ನು ಹೊಂದಿರುವ ಮಗನ ಬಯಕೆಯಿಂದ ಈ ವ್ರತವನ್ನು ಮಾಡಿದ್ದನೆಂದು ತಿಳಿಸಲಾಗಿದೆ.

ಗರ್ಭದ ಆರನೇ ಇಲ್ಲವೇ 8 ನೇ ತಿಂಗಳಿನಲ್ಲಿ ಈ ಸಂಸ್ಕಾರ ಅಂದರೆ , ಸೀಮಂತೋನ್ನಯನ ನಡೆಯುತ್ತದೆ. ಇದರ ಫಲೋದ್ದೇಶವೂ ಸಹ ಗರ್ಭದ ಶುದ್ಧಿಯೇ ಆಗಿದೆ. ಸಾಮಾನ್ಯವಾಗಿ ಗರ್ಭದಲ್ಲಿ ನಾಲ್ಕು ತಿಂಗಳ ನಂತರ ಬಾಲಕನ ಅಂಗ - ಪ್ರತ್ಯಂಗ - ಹೃದಯ ಮುಂತಾದವು ಪ್ರಕಟಗೊಳ್ಳು ತ್ತವೆ. ಚೈತನ್ಯದ ಸ್ಥಳ ಹೃದಯವಾಗಿದ್ದರಿಂದಲೇ ಗರ್ಭದಲ್ಲಿ ಚೇತನ ( ಚೈತನ್ಯ) ಉಂಟಾಗುತ್ತದೆ. ಹಾಗಾಗಿ ಅದರಲ್ಲಿ ಆಸೆ ಗಳು ಹುಟ್ಟತೊಡಗುತ್ತವೆ. ಆ ಆಸೆಗಳು ತಾಯಿಯ ಹೃದಯ ದಲ್ಲಿ ಪ್ರತಿಬಿಂಬಿತವಾಗಿ ಕಾಣಲ್ಪಡುತ್ತವೆ. ಅದನ್ನೇ ಬಸುರ ಬಯಕೆ ಎನ್ನುವುದು. ಗರ್ಭದಲ್ಲಿ ಮನಸ್ಸು ಹಾಗೂ ಬುದ್ಧಿಯಲ್ಲಿ ಹೊಸ ಚೈತನ್ಯ ಶಕ್ತಿ ಹುಟ್ಟಿದಾಗ,ಯಾವ ಸಂಸ್ಕಾರವನ್ನು ಮಾಡುತ್ತೇವೋ (ಆರಂಭಿಸುವುದು) ಅದು ಮಗುವಿನ ಮೇಲೆ ಗಾಢ ಪ್ರಭಾವವನ್ನು ಬೀರುತ್ತದೆ. ಈಗ ಗರ್ಭ ಶಿಕ್ಷಣಯೋಗ್ಯ ವಾಗುತ್ತದೆ. (ಅರ್ಹತೆ). ಮಹಾಭಕ್ತ ಪ್ರಹ್ಲಾದನಿಗೆ ದೇವರ್ಷಿ ನಾರದರ ಉಪದೇಶ ಹಾಗೂ ಅಭಿಮನ್ಯುವಿಗೆ ಚಕ್ರವ್ಯೂಹ ಪ್ರವೇಶದ ಉಪದೇಶ ಈ ಕಾಲದಲ್ಲಿಯೇ ಆಗಿತ್ತು. ಆದ್ದರಿಂದ ತಾಯಿ - ತಂದೆಗಳಾದವರು ಈ ಸಮಯದಲ್ಲಿ ವಿಶೇಷವಾಗಿ ಎಚ್ಚರಿಕೆಯಿಂದ ಶಾಸ್ತ್ರಸಮ್ಮತ ವ್ಯವಹರಿಸಬೇಕು.

ಈ ಸಂಸ್ಕಾರದಲ್ಲಿ ಘೃತಯುಕ್ತ (ತುಪ್ಪದಿಂದ ಕೂಡಿದ) ಯಜ್ಞ ಅವಶಿಷ್ಟ ಸುಪಾಚ್ಯ ಪೌಷ್ಟಿಕ ಚರು (ಖೀರು) ವನ್ನು ಗರ್ಭವತಿಗೆ ತಿನ್ನಿಸಬೇಕು. ಸಂಸ್ಕಾರದ ದಿನ ಸುಪಾಚ್ಯ ಪೌಷ್ಟಿಕ ಆಹಾರ ವಿಧಾನದಲ್ಲಿ ಈ ಸೂಚನೆಯನ್ನು ಕೊಟ್ಟಿದ್ದಾರೆ. ಪ್ರಸವದವರೆಗೂ ಇಂತಹ ಸುಪಾಚ್ಯ (ಚೆನ್ನಾಗಿ ಜೀರ್ಣ ವಾಗುವ) ಪೌಷ್ಟಿಕ ಆಹಾರವನ್ನೇ ಕೊಡಬೇಕು. ಈ ಸಂಸ್ಕಾರ ದಲ್ಲಿ ಪತಿಯಾದವನು ಶಾಸ್ತ್ರದಲ್ಲಿ ವರ್ಣಿಸಿರುವ ಆತ್ತಿಯ ಚಿಗುರು, ಹೂ ಮುಂತಾದ ವನಸ್ಪತಿಗಳ ಮೂಲಕ ಗರ್ಭಿಣಿಯ ಸೀಮಂತ (ಬೇಡಿಕೆ) ವನ್ನು ನೆರವೇರಿಸಬೇಕು.

'ಓಂ ಭೂರ್ವಿನಯಾಮಿ, ಓಂ ಭುವರ್ವಿನಯಾಮಿ, ಓಂ ಸುವರ್ವಿನಯಾಮಿ, ಮಂತ್ರದಿಂದ ಪೃಥಕ್ಕರಣಾದಿ ಕ್ರಿಯೆಗಳನ್ನು ಮಾಡುತ್ತಾ ಈ ಮಂತ್ರವನ್ನು ಪಠಿಸಬೇಕು.

ಯೇನಾದಿತೇಃ ಸೀಮಾನಂ ನಯತಿ ಪ್ರಜಾಪತಿ ರ್ಮಹತೇ ಸೌಭಗಾಯ ।
ತೇನಾಹಮಸ್ಯೈ ಸೀಮಾನಂ ನಯಾಮಿ ಪ್ರಜಾ ಮಸ್ಯೈ ಜರದಷ್ಟಿಂ ಕೃಣೋಮಿ॥

ಅಂದರೆ - "ಹೇಗೆ ದೇವಮಾತೆ ಅದಿತಿಯ ಸೀಮಂತೋ ನ್ನಯನವನ್ನು ಪ್ರಜಾಪತಿಯು ಮಾಡಿದ್ದನೋ , ಅದರಂತೆಯೇ ಈ ಗರ್ಭಿಣಿಯ ಸೀಮಂತೋನ್ನಯನ ಮಾಡಿ ಇವಳ ಮಗನಿಗೆ ಜರಾವಸ್ಥಾಪರ್ಯಂತ ದೀರ್ಘಜೀವಿಯಾಗಿಸುತ್ತೇನೆ. ನಂತರ ವೃದ್ಧ ಬ್ರಾಹ್ಮಣ ಸ್ತ್ರೀಯರ ಮೂಲಕ ಆಶೀರ್ವಾದ ಮಾಡಿಸು ತ್ತಾನೆ.

ಜಾತಕರ್ಮ ಸಂಸ್ಕಾರದಿಂದ ಗರ್ಭಸ್ರಾವ ಜನ್ಯ ಎಲ್ಲ ದೋಷಗಳು ನಾಶವಾಗುತ್ತವೆ. ಮಗುವಿನ ಜನ್ಮವಾಗುತ್ತಲೇ ಈ ಸಂಸ್ಕಾರವನ್ನು ಮಾಡುವ ವಿಧಾನವಿದೆ. ನಾಲವೇದನಕ್ಕೆ ಮುನ್ನ (ಹೊಕ್ಕಳು ಬಳ್ಳಿ ಕತ್ತರಿಸುವ ಮೊದಲು) ಮಗುವಿಗೆ ಚಿನ್ನದ ಕಡ್ಡಿಯಿಂದ ಇಲ್ಲವೇ ತೋರು ಬೆರಳಿನಿಂದ ಅಸಮಾನ ಪ್ರಮಾಣದಲ್ಲಿ ಜೇನು ಅಥವಾ ತುಪ್ಪವನ್ನು ನೆಕ್ಕಿಸುತ್ತಾರೆ. ಇದರಲ್ಲಿ ಸ್ವರ್ಣ ತ್ರಿದೋಷನಾಶಕವಿದೆ. ತುಪ್ಪ ಆಯುವರ್ಧಕ ಹಾಗೂ ವಾತ ಪಿತ್ತನಾಶಕವು ಹಾಗೂ ಜೇನು ಕಫನಾಶಕವು. ಈ ಮೂರರ ಮಿಶ್ರಣ ಆಯಸ್ಸು, ಲಾವಣ್ಯ ಮತ್ತು ಮೇಧಾ ಶಕ್ತಿ ಯನ್ನು ಹೆಚ್ಚಿಸುವ ಹಾಗೂ ಪವಿತ್ರಕಾರಕವಾದದ್ದು. ಬಾಲಕನ ತಂದೆ ಅಥವಾ ಆಚಾರ್ಯನು ಮಗುವಿನ ಕಿವಿಯ ಬಳಿ ಅದರ ದೀರ್ಘಾಯಸ್ಸಿಗಾಗಿ ಈ ಮಂತ್ರವನ್ನು ಪಠಿಸಬೇಕು.

"ಅಗ್ನಿರಾಯುಷ್ಮಾಂತ್ಸ ವನಸ್ಪತಿಭಿರಾಯುಷ್ಮಾಸ್ತೇನ ತ್ವಾಽಽಯುಷ್ಮಾ ಯುಷಽಽಂತಂ ಕರೋಮಿ।

ಹೇಗೆ ಅಗ್ನಿದೇವ ವನಸ್ಪತಿಗಳ ಮೂಲಕ ಆಯುಷ್ಮಾನ್ ಆಗಿದೆಯೇ ಅದರಂತೆಯೇ ಅವರ ಅನುಗ್ರಹದಿಂದ ನಾನು ನಿಮಗೆ ದೀರ್ಘ ಆಯಸ್ಸಿನಿಂದ ಕೂಡಿರುವಂತೆ ಮಾಡುತ್ತೇನೆ. ಇಂತ ಎಂಟು ಆಯುಷ್ಯ ಮಂತ್ರಗಳನ್ನು, ಮಗುವಿನ ಕಿವಿಯ ಬಳಿ ಗಂಭೀರವಾಗಿ ಜಪಿಸಿ ಅದರ ಮನಸ್ಸನ್ನು ಉತ್ತಮ ಭಾವನೆಗಳಿಂದ ಭವಿತಗೊಳಿಸಬೇಕು. ಮತ್ತೆ ತಂದೆಯ ಮೂಲಕ ದೀರ್ಘಾಯುವಾಗುವಂತೆ ಹಾಗೂ ಅದರ ಒಳಿತಿಗಾಗಿ 'ಓಂ ದಿವಸ್ಪರಿ ಪ್ರಥಮ ಜಜ್ಞೇ ಮುಂತಾದ 12 ಮಂತ್ರಗಳನ್ನು ಪಠಿಸಿ ಮಗುವಿನ ಹೃದಯ ಇತ್ಯಾದಿ ಎಲ್ಲ ಅಂಗಗಳನ್ನು ಸ್ಪರ್ಶಿಸುವ ವಿಧಾನವಿದೆ. ಈ ಸಂಸ್ಕಾರದಲ್ಲಿ ತಾಯಿ ತನ್ನ ಸ್ತನಗಳನ್ನು ಶುಚಿ ಮಾಡಿಕೊಂಡು ಹಾಲು ಕುಡಿಸುವ ವಿಧಿಯನ್ನು ಮಾಡಿದ್ದಾರೆ.ಅದಕ್ಕೆ ಕಾರಣ - ತಾಯಿಯ ರಕ್ತ-ಮಾಂಸಗಳಿಂದ ಹುಟ್ಟಿದ ಮಗುವಿಗೆ ತಾಯಿಯ ಹಾಲೇ ಸರ್ವಾಧಿಕ ಪೋಷಕ ಪದಾರ್ಥ.

ನಾಮಕರಣ ಸಂಸ್ಕಾರವು ಒಳ್ಳೆಯ ಉದ್ದೇಶದಿಂದ ಕೂಡಿದೆ. ಇದರ ಫಲವಾಗಿ ಆಯಸ್ಸು ಹಾಗೂ ತೇಜಸ್ಸು ವೃದ್ಧಿಯಾಗಿ ಲೌಕಿಕ ವ್ಯವಹಾರದ ಸಿದ್ಧಿಯಾಗುತ್ತದೆಂದು ಹೇಳುತ್ತಾರೆ.

"ಆಯುರ್ವರ್ಚೋಭಿವೃದ್ಧಿಶ್ಚ ಸಿದ್ಧಿ ವ್ಯವಹತೇಸ್ತಥಾ।
ನಾಮಕರ್ಮಫಲಂ ತ್ವೇತತ್ ಸಮುದ್ದಿಷ್ಟಂ ಮನೀಷಿಭಿಃ॥

ಹುಟ್ಟಿದ ಹತ್ತು ರಾತ್ರಿಗಳ ನಂತರ ಹನ್ನೊಂದನೇ ದಿನ ಇಲ್ಲವೇ ವಂಶಕ್ರಮಾನುಸಾರ ನೂರನೇ ದಿನ ಅಥವಾ ಒಂದು ವರ್ಷ ಕಳೆದ ಮೇಲೆ ನಾಮಕರಣ ಸಂಸ್ಕಾರ ಮಾಡುವ ವಿಧಾನವಿದೆ. ಪುರುಷ ಮತ್ತು ಸ್ತ್ರೀಯರಿಗೆ (ಗಂಡು ಮಗು / ಹೆಣ್ಣು ಮಗು) ಯಾವ ರೀತಿ ಹೆಸರಿಡಬೇಕೆಂಬುದರ ರೀತಿ ನೀತಿಗಳನ್ನು ಪುರಾಣಗಳಲ್ಲಿ ವರ್ಣಿಸಿದ್ದಾರೆ.

ನಿಷ್ಕ್ರಮಣ ಸಂಸ್ಕಾರದ ಫಲವನ್ನು ವಿದ್ವಾಂಸರು ಆಯಸ್ಸು ವೃದ್ಧಿ ಎಂದೆನ್ನುತ್ತಾರೆ.'ನಿಷ್ಕ್ರಮಣಾದಾಯುಷೋ ವೃದ್ಧಿರಪ್ಯುದ್ಧಿಷ್ಟಾ ಮನೀಷಿಭಿಃ.ಈ ಸಂಸ್ಕಾರ ಮಗುವಿನ ನಾಲ್ಕನೇ ಅಥವಾ ಆರನೇ ತಿಂಗಳಿನಲ್ಲಾಗುತ್ತದೆ. ಸೂರ್ಯ ಹಾಗೂ ಚಂದ್ರಾದಿ ದೇವತೆಗಳ ಪೂಜೆ ಮಾಡಿ ಮಕ್ಕಳಿಗೆ ಅವರನ್ನು ತೋರಿಸುವುದು ಈ ಸಂಸ್ಕಾರದ ಮುಖ್ಯ ಪ್ರಕ್ರಿಯೆ. ಮಗುವಿನ ಶರೀರ ಭೂಮಿ, ನೀರು, ತೇಜಸ್ಸು ಗಾಳಿ, ಆಕಾಶದಿಂದಾಗಿದೆ. ಮಗುವಿನ ತಂದೆ ಈ ಜಗತ್ತಿನೊಳಗೆ ಆಕಾಶಾದಿ ಪಂಚಭೂತಗಳ ಅಧಿಷ್ಟಾತ ದೇವತೆಗಳಿಂದ ಮಗುವಿಗೆ ಒಳಿತಾಗಲೆಂಬ ಆಸೆಯಿಂದ ಇರುತ್ತಾನೆ.

ಶಿವೇ ತೇ ಸ್ತಾಂ ದ್ಯಾವಾಪೃಥಿವೀ ಅಸಂತಾಪೇ ಅಭಿಶ್ರಿಯೌ।
ಶಂ ತೇ ಸೂರ್ಯ ಆ ತಪತು ಶಂ ವಾತೋ ವಾತು ತೇ ಹೃದೇ।
ಶಿವಾ ಅಭಿ ಕ್ಷರಂತು ತ್ವಾಪೋ ದಿವ್ಯಾಃ ಪಯಸ್ವತೀಃ

ಅಂದರೆ: "ಹೇ ಬಾಲಕ! ನಿನ್ನ ನಿಷ್ಕ್ರಮಣಕಾಲದಲ್ಲಿ ದ್ಯುಲೋಕ ಹಾಗೂ ಭೂಲೋಕ ಕಲ್ಯಾಣಕಾರಿಯಾಗಿ, ಸುಖವಾಗಿ ಹಾಗೂ ಶೋಭಯುತವಾಗಿರಲಿ, ಸೂರ್ಯನಿನಗಾಗಿ ಮಂಗಳಕಾರಕನಾಗಿ ಬೆಳಗಲಿ, ನಿನ್ನ ಹೃದಯದಲ್ಲಿ ಸ್ವಚ್ಛ ಕಲ್ಯಾಣಕಾರಕನಾದ ವಾಯು ಸಂಚರಿಸಲಿ, ದಿವ್ಯ ಜಲವನ್ನು ಹೊಂದಿರುವ ಗಂಗಾ ಯಮುನಾ ಮುಂತಾದ ನದಿಗಳು ನಿನಗೆ ನಿರ್ಮಲವೂ, ರುಚಿಕರವೂ ಆದ ನೀರನ್ನು ಹರಿಸಲಿ".

ಅನ್ನ ಪ್ರಾಶನ ಸಂಸ್ಕಾರದ ಮೂಲಕ ತಾಯಿಯ ಗರ್ಭದಲ್ಲಿನ ಮಲಿನ ಭಕ್ಷಣ-ಜನ್ಯವಾದ ದೋಷವನ್ನು ಮಗುವಿನಿಂದ ಹೋಗಲಾಡಿಸಬಹುದು."ಅನ್ನಾಶನಾನ್ಮಾತೃ ಗರ್ಭೇ ಮಲಾಶಾದ್ಯಾಪಿ ಶುದ್ಧ್ಯತಿ. ಯಾವಾಗ ಮಗುವಿಗೆ 6-7 ತಿಂಗಳಾಗುತ್ತದೋ ಆಗ ಹಲ್ಲು ಹುಟ್ಟಲಾರಂಭಿಸುತ್ತದೆ. ಜೀರ್ಣ ಶಕ್ತಿ ಪ್ರಬಲವಾಗ ತೊಡಗುತ್ತದೆ. ಆಗ ಈ ಸಂಸ್ಕಾರವನ್ನು ಮಾಡುತ್ತಾರೆ.ಶುಭ ಮುಹೂರ್ತದಲ್ಲಿ ದೇವತೆಗಳ ಪೂಜೆ ಮಾಡಿದ ಮೇಲೆ ತಾಯಿ ತಂದೆಗಳು ಚಿನ್ನದ ಇಲ್ಲವೇ ಬೆಳ್ಳಿಯ ಕಡ್ಡಿ ಅಥವಾ ಚಮಚದಿಂದ ಕೆಳಗಿನ ಮಂತ್ರ ಹೇಳಿ ಮಗುವಿಗೆ ಹವಿಷ್ಯಾನ್ನವನ್ನು (ಖೀರು) ಪವಿತ್ರ ಪುಷ್ಟಿಕಾರಕವಾಗಿ ನೆಕ್ಕಿಸ ಬೇಕು.

ಶಿವೌ ತೇ ಸ್ತಾಂ ವ್ರೀಹಿಯವಾವಬಲಾಸಾವದೋಮಧೌ।
ಏತೌ ಯಕ್ಷ್ಮಂ ವಿ ಬಾಧೇತೇ ಏತೌ ಮುಂಚ ತೋ ಅಂಹಸಃ ॥

ಅಂದರೆ - " ಹೇ ಬಾಲಕ! ಜೋಳ ಮತ್ತು ಅಕ್ಕಿ ನಿನಗೆ ಶಕ್ತಿದಾಯಕ ಮತ್ತು ಪುಷ್ಟಿಕಾರಕವಾಗಿರಲಿ ಇವೆರಡೂ ವಸ್ತುಗಳು ಕ್ಷಯರೋಗ ನಾಶಕಗಳು ಹಾಗೂ ದೇವಾನ್ನವಾದ್ದರಿಂದ ಪಾಪನಾಶಕಗಳು".


ಈ ಸಂಸ್ಕಾರದೊಳಗೆ ದೇವತೆಗಳಿಗೆ ಖಾದ್ಯ ಪದಾರ್ಥಗಳನ್ನು ನಿವೇದಿಸಿ ಅನ್ನವನ್ನು (ಆಹಾರ) ಉಣಿಸುವ ವಿಧಾನವನ್ನು ತಿಳಿಸಿದ್ದಾರೆ. ಅನ್ನವೇ ಮನುಷ್ಯನ ಸಹಜ ಊಟ. ಅದನ್ನು ಭಗವಂತನ ಕೃಪಾಪ್ರಸಾದವೆಂದು ತಿಳಿದು ಗ್ರಹಿಸಬೇಕು.

- (ಸಶೇಷ)

## ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಮಲೆ
# ಶ್ರೀ ವೆಂಕಟೇಶ್ವರ ಸ್ವಾಮಿಯವರ
# ವಾರ್ಷಿಕ ಬ್ರಹ್ಮೋತ್ಸವ

30-09-2019 ರಿಂದ
08-10-2019 ರ ವರೆಗೆ



**30-09-2019**
**ಸೋಮವಾರ**
**ಸಾಯಂಕಾಲ**
**ಧ್ವಜಾರೋಹಣ**



**30-09-2019**
**ಸೋಮವಾರ**
**ರಾತ್ರಿ**
**ದೊಡ್ಡ ಶೇಷ ವಾಹನ**



**01-10-2019**
**ಮಂಗಳವಾರ**
**ಹಗಲು**
**ಚಿಕ್ಕಶೇಷ ವಾಹನ**



01-10-2019
ಮಂಗಳವಾರ
ರಾತ್ರಿ
ಹಂಸ ವಾಹನ



02-10-2019
ಬುಧವಾರ
ರಾತ್ರಿ
ಮುತ್ತಿನಚಪ್ಪರ ವಾಹನ



03-10-2019
ಗುರುವಾರ
ಹಗಲು
ಕಲ್ಪವೃಕ್ಷ ವಾಹನ



02-10-2019
ಬುಧವಾರ
ಹಗಲು
ಸಿಂಹ ವಾಹನ



03-10-2019
ಗುರುವಾರ
ರಾತ್ರಿ
ಸರ್ವಭೂಪಾಲ ವಾಹನ



Colour Pages Layout : P.Sivaprasad, TTD.



04-10-2019
ಶುಕ್ರವಾರ, ಹಗಲು
ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ



05-10-2019
ಶನಿವಾರ
ಹಗಲು
ಹನುಮದ್ವಾಹನ



06-10-2019
ಭಾನುವಾರ
ಹಗಲು
ಸೂರ್ಯಪ್ರಭ ವಾಹನ



06-10-2019
ಭಾನುವಾರ
ರಾತ್ರಿ : ಚಂದ್ರಪ್ರಭ ವಾಹನ



05-10-2019
ಶನಿವಾರ
ರಾತ್ರಿ : ಗಜ ವಾಹನ


08-10-2019 ಮಂಗಳವಾರ
ಹಗಲು: ಚಕ್ರಸ್ನಾನ
07-10-2019
ಸೋಮವಾರ
ರಾತ್ರಿ
ಅಶ್ವವಾಹನ



# ಜಯ ಜಗದ್ಗುರು ಶಂಕರಾಚಾರ್ಯ

- ತೆಲುಗು ಮೂಲ : ವಿದ್ವಾನ್ ಕೆ.ಸಿ. ನಾಯ್ಡು

ಅನುವಾದ : ಡಾ. ಮಲ್ಲೇಶಪ್ಪ ಸಿದ್ರಾಂಪೂರ

ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರಃ
ಗುರುಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ

ಈ ಪ್ರಾರ್ಥನಾ ಶ್ಲೋಕವು ಗುರುವನ್ನು ಬ್ರಹ್ಮದೇವನಿಗೂ, ಶ್ರೀ ಮಹಾವಿಷ್ಣುವಿಗೂ, ಮಹೇಶ್ವರನಿಗೂ ಅಷ್ಟೇ ಅಲ್ಲದೆ ಸಾಕ್ಷಾತ್ ಪರಬ್ರಹ್ಮನಿಗೂ ಹೋಲಿಸಲಾಗುತ್ತದೆ.

ಇದು ಗುರುವಿನ ಔನ್ನತ್ಯವನ್ನು, ಗುರುವಿನ ಪ್ರಾಧಾನ್ಯತೆಯನ್ನು, ಗುರುವಿನ ಅಗತ್ಯತೆಯನ್ನು ತಿಳಿಸುತ್ತದೆ. ಈ ವಿಷಯವನ್ನು ಅರಿತುಕೊಂಡು, ಆಚರಿಸಿ, ಆಚರಣಾತ್ಮಕವಾಗಿಸಿದ್ದರಿಂದಾಗಿಯೇ ಶ್ರೀ ಶಂಕರಾಚಾರ್ಯರು ತಾವೂ ಜಗದ್ಗುರುಗಳಾದರು.

ಬೌದ್ಧಮತವು ಧರ್ಮದ ಕುರಿತು, ಸಂಘದ ಕುರಿತು ಹೇಳಿತಾಗಲಿ ದೈವದ ಕುರಿತು ಹೇಳಲಿಲ್ಲ. 'ಸನಾತನಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ' ಎನ್ನುವಂತೆ ಹೈಂದವ ಧರ್ಮವನ್ನು ಕಾಪಾಡುವುದಕ್ಕಾಗಿ ಶಂಕರಾಚಾರ್ಯರ ಜನನವಾಯಿತು. ಇದು ಶಂಕರ ಮಹಾದೇವನ ರುದ್ರಾವತಾರವೆಂದು ಭಕ್ತರು ಕೊಂಡಾಡಿದರು. ಈ ವಿಷಯವನ್ನು ಅರಿಯದ ಆತನ ತಾಯಿ ಪುತ್ರ ವಾತ್ಸಲ್ಯವನ್ನು ಬೆಳೆಸಿಕೊಂಡಳು. ತಾಯಿಯ ಕೋರಿಕೆಗೆ ಅನುಗುಣವಾಗಿಯೇ ಆತನು ತನ್ನ ಸಂಕಲ್ಪವನ್ನು ನೇರವೇರಿಸಿಕೊಂಡರು. ಉತ್ತಮ ಪುತ್ರನೂ ಎನಿಸಿ ಕೊಂಡನು.

ಶಂಕರಾಚಾರ್ಯರು ಕೇರಳದ ಪೂರ್ಣನದಿ ತೀರದಲ್ಲಿನ ಕಾಲಡಿಯಲ್ಲಿ ಜನಿಸಿದರು. ತಂದೆ ಶಿವಗುರು. ತಾಯಿ ಆರ್ಯಾಂಬ. ಗುರು ಗೋವಿಂದ ಭಗವತ್ಪಾದ. ಅಖಂಡ ಭಾರತ ದೇಶದಲ್ಲಿನ ಸಂಸ್ಕೃತಿ ಸಂಪ್ರದಾಯಗಳಲ್ಲಿರುವ ಭಿನ್ನತ್ವವನ್ನು ಏಕತ್ವವನ್ನಾಗಿಸಲು ಪ್ರಯತ್ನಿಸಿದನು. ದೇಶದ ಸಮೈಕ್ಯತೆಯನ್ನು, ಸಾರ್ವಭೌಮತೆಯನ್ನು ಅಂದೇ ಅಂದರೆ 1200 ವರ್ಷಗಳ ಹಿಂದೇ ವಿಶದೀಕರಿಸಿದ್ದಾರೆ.

ಅದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡುತ್ತಾ ಅತಿ ಸಣ್ಣ ವಯಸ್ಸಿನಲ್ಲಿಯೇ ಯಾವತ್ ಭಾರತ ದೇಶವನ್ನು ಎರಡು ಸಾರಿ ಸುತ್ತಿದ್ದರು ಶಂಕರಾಚಾರ್ಯರು. ತಮ್ಮ ಪ್ರಯಾಣದಲ್ಲಿ ಎಷ್ಟೋ ಜನ ಉದ್ದಂಡ ಪಂಡಿತರೊಂದಿಗೆ, ಮಹಾಮುನಿಗಳೊಂದಿಗೆ ವಾದ ಮಾಡಿದರು. ಇದು ಒಂದು ರೀತಿಯಲ್ಲಿ ಜೈತ್ರ ಯಾತ್ರೆಯಂತಹದ್ದು. ಆ ಕಾಲಕ್ಕಾಗಲೇ ಹಿಂದೂಗಳು ಅನೇಕ ಶಾಖೆಗಳಾಗಿ ಬೇರ್ಪಟ್ಟು ತಮ್ಮಲ್ಲಿಯೇ ತಾವು ಜಗಳವಾಡಿ ಕೊಳ್ಳುತ್ತಿದ್ದರು. ಮೀಮಾಂಸೆ, ಸಾಂಖ್ಯವಾದಿಗಳು ದೇವರನ್ನು ನಂಬಲಿಲ್ಲ, ಚಾರ್ವಾಕರು ವೇದಗಳನ್ನು ಒಪ್ಪಿಕೊಳ್ಳಲಿಲ್ಲ. ಶಂಕರರು ಅವರಿಗೆ ತಕ್ಕ ರೀತಿಯಲ್ಲಿ ಉತ್ತರಿಸುತ್ತಾ ಹಿಂದೂಗಳ ದೈವಾರಾಧನೆಯ ಮೇಲೆ ಆತ್ಮ ವಿಶ್ವಾಸವನ್ನು ತುಂಬಿದರು. ಪರಿಸ್ಥಿತಿಗಳೆಲ್ಲವನ್ನೂ ಸಮನ್ವಯಗೊಳಿಸಿ ಭವಿಷ್ಯತ್ತಿನ ತಲೆಮಾರಿಗೆ ಜ್ಞಾನ ಮಾರ್ಗವನ್ನು ತೋರಿಸಿದರು.

ನೀನಾರು, ನಾನಾರು ಎನ್ನುವ ಸಂಕುಚಿತ ಮಾರ್ಗದಿಂದ ಹೊರಬಂದು ಎಲ್ಲರೂ ಒಂದೇ ಎನ್ನುವ ವಿಶಾಲ ದೃಷ್ಟಿ

ಕೋನವನ್ನು ಉಂಟುಮಾಡಿದರು. ಹಿಂದೂ ಮತದಲ್ಲಿ ಬೇರು ಬಿಟ್ಟಿದ್ದ ಕೆಟ್ಟ ಸಂಪ್ರದಾಯಗಳನ್ನು, ದುರಾಚಾರಗಳನ್ನು ತೊಲಗಿಸಿ ವೈದಿಕ ಮಾರ್ಗಕ್ಕೆ ತಿರುಗಿಸಿದರು. ಭಗವದ್ಗೀತೆ, ಬ್ರಹ್ಮ ಸೂತ್ರಗಳು, ವಿಷ್ಣು ಸಹಸ್ರ ನಾಮಗಳಿಗೆ ಶಂಕರರು ಬರೆದ ಭಾಷ್ಯಗಳು ಎಲ್ಲರಿಗೂ ವ್ಯಾಖ್ಯಾನ ಗ್ರಂಥಗಳಾಗಿ ಪ್ರಯೋಜನಗೊಳಗಾಗಿವೆ. ಶಂಕರರು ಬರೆದ ಅನೇಕ ಗ್ರಂಥಗಳಲ್ಲಿ ಗಣೇಶ ಪಂಚರತ್ನ ಸ್ತೋತ್ರ, ಭಜಗೋವಿಂದ, ಲಕ್ಷ್ಮೀನೃಸಿಂಹ ಕರಾವಲಂಬನ ಸ್ತೋತ್ರ, ಕನಕಧಾರಾ ಸ್ತೋತ್ರ, ಶಿವನಂದ ಲಹರಿ, ಸೌಂದರ್ಯ ಲಹರಿಯಂತಹ ಅನೇಕ ಬರಹಗಳು ಹಿಂದೂಗಳಿಗೆ ನಿತ್ಯ ಪ್ರಾರ್ಥನೆಯ ಶ್ಲೋಕಗಳಾಗಿ ಬಳಕೆಯಾಗುತ್ತಿವೆ.

ಚತುರ್ವೇದಗಳ ಪರಿರಕ್ಷಣೆಗಾಗಿ ಭಾರತದ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮಠಗಳನ್ನು ಏರ್ಪಾಟು ಮಾಡಿದರು. ಮಠ ನಿರ್ವಹಣೆಗಾಗಿ ನಿಯಮಿಸುತ್ತಿದ್ದ ಸನ್ಯಾಸಿಗಳ ನಾಮಾಂತರವನ್ನು ಯೋಗಪಟ್ಟ ಎಂದು ಕರೆಯಲ್ಪಡಲಾಯಿತು. ಹಿಂದೂ ಧರ್ಮದ ಪ್ರಕಾರ ಸನ್ಯಾಸವನ್ನು ಸ್ವೀಕರಿಸಿದ ವ್ಯಕ್ತಿಯ ಹಿಂದಿನ ಹೆಸರನ್ನು ತೆಗೆದು ಹಾಕಿ ಸನ್ಯಾಸಿ ಎಂದು ಸೂಚಿಸುವ ಹೊಸ ಹೆಸರನ್ನು ಚಾಲ್ತಿಗೆ ತಂದರು. ಅಂತಹ ಪ್ರತ್ಯೇಕ ಹೆಸರನ್ನೇ ಯೋಗಪಟ್ಟ ಎನ್ನುತ್ತಾರೆ. ಅವು ತೀರ್ಥ,ಆಶ್ರಮ, ವನ, ಗಿರಿ, ಅರಣ್ಯ, ಪರ್ವತ, ಸಾಗರ, ಸರಸ್ವತಿ, ಭಾರತಿ, ಪುರಿ ಎನ್ನುವವು. ಹಿಂದೂ ಸನ್ಯಾಸಿಗಳ ಹೆಸರಿನ ಕೊನೆಗೆ ಇವು ಸೇರಿಕೊಂಡಿವೆ. ಉದಾ: ಆನಂದ ತೀರ್ಥ, ವಿದ್ಯಾರಣ್ಯ, ಸತ್ಯನೃತ ನಾಮಾಶ್ರಮ,ವಿದ್ಯಾಪ್ರಕಾಶಾನಂದಗಿರಿ,ಚಂದ್ರಶೇಖರ ಸರಸ್ವತಿ,ನೃಸಿಂಹಭಾರತಿ, ತೋಪೂರಿ ಎನ್ನುವ ಹೆಸರುಗಳು ಸುಪ್ರಸಿದ್ಧವಾದವುಗಳು.

**ದಕ್ಷಿಣದ ಶೃಂಗೇರಿ ಮಠ**

ಕರ್ನಾಟಕ ರಾಜ್ಯದಲ್ಲಿನ ಶೃಂಗೇರಿ ಶಾರದಾ ಪೀಠವೆಂದೇ ಪ್ರಸಿದ್ಧಿ ಪಡೆದಿದೆ. ತುಂಗಾನದಿ ತೀರದ ಮೇಲಿರುವ ಈ ಪೀಠಾಧಿಪತಿಯನ್ನು ಶಂಕರಾಚಾರ್ಯರೆಂದು ಕರೆಯುತ್ತಾರೆ. ಈ ಪೀಠ ಯಜುರ್ವೇದ ಸಂಹಿತೆಗೆ ಅನುಗುಣವಾಗಿ ಸ್ಥಾಪಿಸಲಾಗಿದೆ.ಇದಕ್ಕೆ "ಅಹಂ ಬ್ರಹ್ಮಾಸ್ಮಿ" ಎನ್ನುವುದು ಮಹಾವಾಕ್ಯ. ಶ್ರೀ ಸುರೇಶ್ವರಾಚಾರ್ಯರು ಈ ಮಠದ ಮೊಟ್ಟಮೊದಲ ಪೀಠಾಧಿಯಾಗಿದ್ದು, ಪ್ರಸ್ತುತ ಭಾರತಿತೀರ್ಥ ಮಹಾಸ್ವಾಮಿಗಳು ಪೀಠಾಧಿಪತಿಯಾಗಿದ್ದಾರೆ.

**ಪಶ್ಚಿಮದ ದ್ವಾರಕಾಪೀಠ:** ಇದು ಗುಜರಾತ ರಾಜ್ಯ ದಲ್ಲಿನ ಅರೇಬಿಯಾ ಸಮುದ್ರತೀರದ ದ್ವಾರಕಾ ನಗರದಲ್ಲಿ ಸ್ಥಾಪಿಸಲಾಗಿದೆ.ಸಾಮವೇದ ಸಂಹಿ ತೆಗೆ ಅನುಗುಣವಾಗಿ ಸ್ಥಾಪಿತವಾದ ಈ ಪೀಠದ ಮಹಾವಾಕ್ಯ "ತತ್ತ್ವಮಸಿ". ಈ ಮಠಕ್ಕೆ ಮೊಟ್ಟ ಮೊದಲ ಪೀಠಾಧಿಪತಿಗಳು ಶ್ರೀಪದ್ಮಪಾದಾಚಾರ್ಯರು ನಿಯಮಿಸಲ್ಪಟ್ಟರು,ಪ್ರಸ್ತುತ ಸ್ವಾಮಿ ಸ್ವರೂಪಾನಂದ ಸರಸ್ವತಿಗಳು ಪೀಠಾಧಿಪತಿಗಳಾಗಿದ್ದಾರೆ.

**ಉತ್ತರದ ಜ್ಯೋತಿರ್ಮಠ ಪೀಠ:** ಇದು ಉತ್ತರಾಂಚಲ ರಾಜ್ಯದ ಬದರಿಕಾಶ್ರಮದಲ್ಲಿ ಸ್ಥಾಪಿತವಾಗಿದೆ. ಇದು ಅಲಕಾನಂದ ನದಿ ತೀರದಲ್ಲಿದ್ದು ಅಥರ್ವಣವೇದ ಸಂಹಿತೆಗೆ ಅನುಗುಣವಾಗಿ ಸ್ಥಾಪಿತವಾದುದಾಗಿದೆ.ಇದಕ್ಕೆ "ಅಯಮಾತ್ಮಾ ಬ್ರಹ್ಮ" ಎನ್ನುವುದು ಮಹಾವಾಕ್ಯ. ಶ್ರೀ ತೋಟಕಾಚಾರ್ಯ ಈ ಮಠದ ಮೊದಲ ಪೀಠಾಧಿಪತಿಗಳು,ಪ್ರಸ್ತುತ ಶ್ರೀವಾಸು ದೇವಾನಂದ ಸರಸ್ವತಿಯವರು ಪೀಠಾಧಿಪತಿಗಳಾಗಿದ್ದಾರೆ.

**ಪೂರ್ವದ ಗೋವರ್ಧನಮಠ:** ಇದು ಒಡಿಸ್ಸಾ ರಾಜ್ಯದ ಪುರಿ ನಗರದಲ್ಲಿದೆ. ಬಂಗಾಲಕೊಲ್ಲಿ ಸಮುದ್ರದ ತೀರದಲ್ಲಿದ್ದು ಋಗ್ವೇದ ಸಂಹಿತೆಗೆ ಅನುಗುಣವಾಗಿದೆ. ಇದಕ್ಕೆ "ಪ್ರಜ್ಞಾನಂ ಬ್ರಹ್ಮ" ಎನ್ನುವುದು ಮಹಾವಾಕ್ಯ.ಮಠಕ್ಕೆ ಮೊಟ್ಟ ಮೊದಲ ಪೀಠಾಧಿಪತಿಗಳು ಶ್ರೀ ಹಸ್ತಮಲಕಾಚಾರ್ಯರು.ಪ್ರಸ್ತುತ ಸ್ವಾಮಿ ನಶ್ಚಲಾನಂದ ಸರಸ್ವತಿಗಳು ಪೀಠಾಧಿಪತಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀ ಶಂಕರಾಚಾರ್ಯರ ಭಾರತದೇಶ ಪರ್ಯಟನೆಯ ಭಾಗವಾಗಿ ಆತ್ಮಲಿಂಗವೆನಿಸಿದ ಸಿದ್ಧಿಕ್ಷೇತ್ರ ಗೋಕರ್ಣವನ್ನು ಸಂದರ್ಶಿಸಿದ್ದಾರೆ.ಅಲ್ಲಿರುವ ಮಹಾಗಣಪತಿ, ಮಹಾಬಲೇಶ್ವರ, ಮಹಾಕಾಳಿ ದೇವಿಯರನ್ನು ಅಲ್ಲಿಯೇ ಕೆಲಕಾಲವಿದ್ದು ಆರಾಧಿಸಿದ್ದಾರೆ. ಅಲ್ಲಿರುವ ಬ್ರಾಹ್ಮಣೋತ್ತಮರಲ್ಲಿ ಸಖ್ಯತೆ ಇಲ್ಲದಿರುವುದನ್ನು ಗುರುತಿಸಿದರು. ಸ್ಥಳ ಮಹಿಮೆ,ಕ್ಷೇತ್ರ ಮಹಾತ್ಮೆಯನ್ನು ಹೊಂದಿ ಪುರಾಣ ಪ್ರಸಿದ್ಧಿಯನ್ನು ಪಡೆದ ಇಲ್ಲಿನ ದೇವರಿಗೆ ನಿತ್ಯ ಪೂಜೆಗಳಿಗಾಗಿ ಏನನ್ನಾದರೂ ಮಾಡಬೇಕೆಂದು ನಿರ್ಧರಿಸಿದರು.ಆ ಸಂದರ್ಭದಲ್ಲಿಯೇ ಮಹಾ ತಪಸ್ವಿಯಾದ ವರದ ಮುನಿಗಳು ಭೇಟಿಯಾದರು.ಅಂದಿಗೆ ಶ್ರೀವರದಮುನಿ ಶ್ರೀಶಂಕರರ ಕುರಿತು ತಿಳಿದಿದ್ದರಿಂದ ನೋಟದೊಂದಿಗೇ ಒಬ್ಬರನ್ನೊಬ್ಬರು ಪರಿಚಯಿಸಿಕೊಂಡರು. ಬ್ರಹ್ಮತೇಜಸ್ಸಿನಿಂದ ಬೆಳಗುತ್ತಿರುವ ಆ ಯುವ ಸನ್ಯಾಸಿಗೆ ಅಗಸ್ತ್ಯ ಮಹಾಮುನಿಯಿಂದ ತನಗೆ ಸಂಕ್ರಮಿಸಿದ ಸೀತ, ರಾಮ, ಲಕ್ಷ್ಮಣ ವಿಗ್ರಹಗಳನ್ನು ವರದ ಮುನಿ ಶ್ರೀ ಶಂಕರರಿಗೆ ಒಪ್ಪಿಸಿದರು.ಈ ಸಮಾಗಮಕ್ಕಾಗಿ ತಾನು ಕಾಯ್ದುಕೊಂಡಿದ್ದಾಗಿ ತಿಳಿಸಿದ ವರದಮುನಿ ತನ್ನ ಪರೀಕ್ಷೆ ಸಫಲವಾದುದರ ಬಗ್ಗೆ ಶಂಕರಾಚಾರ್ಯರಿಗೆ ತಿಳಿಸಿ ತನ್ನ ಶೇಷ ಜೀವನವನ್ನು ತಪೋದೀಕ್ಷೆಯೊಂದಿಗೆ ಮುಗಿಸಬೇಕೆಂದು ಹಿಮಾಲಯಕ್ಕೆ ಹೊರಟು ಹೋದನು.ಶಂಕರಾಚಾರ್ಯರು ತಮ್ಮ ಪ್ರಿಯಶಿಷ್ಯನಾದ ವಿದ್ವಾನಂದರಿಗೆ ಈ ವಿಗ್ರಹಗಳೊಂದಿಗೆ ಚಂದ್ರಮೌಳೀಶ್ವರ ಲಿಂಗವನ್ನು ಒಪ್ಪಿಸಿ ಗೋಕರ್ಣಕ್ಕೆ ಮೂರು ಕಿಲೋ ಮೀಟರ್

ದೂರದಲ್ಲಿರುವ ಶತಶೃಂಗ ಪರ್ವತದ ಮೇಲೆ ಇಟ್ಟು ಇದರೊಂದಿಗೆ ಮಹಾಬಲೇಶ್ವರನಿಗೆ ನಿತ್ಯ ಕೈಂಕರ್ಯಗಳಿಗಾಗಿ ಗೋಕರ್ಣದಲ್ಲಿನ ಬ್ರಾಹ್ಮಣರೆಲ್ಲರನ್ನು ಸಂಘಟಿಸಿದರು. ಅಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಅದಕ್ಕೆ ರಘುಕುಲ ತಿಲಕನಾದ ಶ್ರೀ ರಾಮನ ಹೆಸರಿನಲ್ಲಿ ಗೋಕರ್ಣ "ರಘೋತ್ತಮ ಮಠ" ಎಂದು ನಾಮಕರಣ ಮಾಡಿದರು. ಈ ಮಠಕ್ಕೆ ಶ್ರೀ ವಿದ್ಯಾನಂದಾಚಾರ್ಯ ಮೊದಲ ಪೀಠಾಧಿಪತಿಗಳಾಗಿ ನೇಮಿಸಲ್ಪಟ್ಟರು.

ಕೆಲಕಾಲದ ನಂತರ ಆ ಬ್ರಾಹ್ಮಣರೆಲ್ಲರೂ ಸೇರಿ ಪ್ರತಿನಿತ್ಯವೂ ಧೂಪ ದೀಪ ನೈವೇದ್ಯಗಳಿಗೆ ಅನುಕೂಲವಾಗಲೆಂದು ಈ ಮಠವನ್ನು ಶತೃಂಗ ಪರ್ವತದ ಮೇಲಿಂದ ಕೆಳಕ್ಕೆ ಬದಲಾಯಿಸಿ ಕೋಟಿತೀರ್ಥದ ಹತ್ತಿರ ಏರ್ಪಾಟು ಮಾಡಿ ಶ್ರೀ ರಾಮಚಂದ್ರಾಪುರ ಮಠವೆಂದು ಕರೆಯಲಿಕ್ಕೆ ಆರಂಭಿಸಿದರು.

ಈ ಪೀಠಾಧಿಪತಿಗಳು ತಮ್ಮ ಭಕ್ತಿಭಾವದೊಂದಿಗೆ ಭಗವಂತನ ಸೇವೆಯಲ್ಲಿ ನಿರತಗಾಗಿ ಸರ್ವರ ಮನ್ನಣೆಗೆ ಪಾತ್ರರಾದರು ಮಹಾಬಲೇಶ್ವರನಿಗೆ ಸಿಂಹಾಸನ, ಪಲ್ಲಕ್ಕಿ, ಶ್ವೇತ ಛತ್ರ,ವಿಜಾಮರ, ಮರಕತೋರಣ ಮೊದಲಾದ ಸೇವಾ ವಸ್ತುಗಳನ್ನು ಸಂಗ್ರಹಿಸಿದರು. ವಿಜಯನಗರ ಸಿಂಹಾಸನಾಧಿ ಪತಿಗಳು ಈ ಗೋಕರ್ಣವನ್ನು ಸಂದರ್ಶಿಸಿ ವಿವಿಧ ಕಾಣಿಕೆಗಳನ್ನು ಕೊಟ್ಟರು. ಟಿಪ್ಪು ಸುಲ್ತಾನ್, ಮೈಸೂರು ಮಹಾರಾಜರಾದ ಒಡೆಯರುಗಳು, ಬ್ರಿಟಿಷ್ ಕಮೀಷನರ್‌ಗಳೂ ಸಹಿತ ಈ ರಾಮಚಂದ್ರಾಪುರ ಮಠಾಧಿಪತಿಗಳ ದೇಶಭಕ್ತಿಯನ್ನು, ದೈವ ಭಕ್ತಿಯನ್ನು ಗೌರವಿಸುತ್ತಿದ್ದರು.

ಇವು ಬರುಬರುತ್ತಾ ಅನೇಕ ಮಠಗಳಾಗಿ ರೂಪಾಂತರ ಗೊಂಡವು. ಈ ವಿಧವಾಗಿ 12 ನೆಯ ಪೀಠಾಧಿಪತಿಯ ಕಾಲಕ್ಕೆ ಸುಮಾರು 13 ಶಾಖೆಗಳು ಇದ್ದಂತೆ ಗುರ್ತಿಸಲಾಗಿದೆ. ಕ್ರಿ.ಶ. 1819 ರಲ್ಲಿ ಅಂದಿನ 30 ನೆ ಯ ಪೀಠಾಧಿಪತಿಯ ಕಾಲದಲ್ಲಿ ಈ ಮಠಗಳೆಲ್ಲವುಗಳ ನಡುವೆ ಹೊಂದಾಣಿಕೆಗಾಗಿ ಪ್ರಯತ್ನಿಸಿದರು. 35 ನೆಯ ಪೀಠಾಧಿಪತಿಯಾದ ಶ್ರೀರಾಘವೇಂದ್ರ ಭಾರತಿ ಮಠ ನಿರ್ವಹಣೆಯಲ್ಲಿ ಅನೇಕ ಮಾರ್ಪಾಡುಗಳನ್ನು ಏರ್ಪಾಟು ಮಾಡಿ, ಅನೇಕ ಶಾಖೆಗಳನ್ನು ಒಂದೇ ನಿರ್ವಹಣೆಯಡಿಯಲ್ಲಿ ತಂದರು. ಅವರು ಬಡವರ ಪರ ದಯಾಗುಣವುಳ್ಳವಾಗಿ ಅವರ ಉದ್ಧಾರಕ್ಕಾಗಿ ಶ್ರಮಿಸಿದರು. ಅನೇಕ ವಿದ್ಯಾಲಯಗಳನ್ನು ಸ್ಥಾಪಿಸಿ ಅವುಗಳ ನಿರ್ವಹಣೆಯ ಹೊಣೆಯನ್ನೂ ಸಹವಹಿಸಿಕೊಂಡರು.

ಪ್ರಸ್ತುತ 36 ನೆಯ ಪೀಠಾಧಿಪತಿಯಾಗಿ ಶ್ರೀ ರಾಘವೇಶ್ವರ ಭಾರತಿ ಸ್ವಾಮಿಯವರು ವ್ಯವಹರಿಸುತ್ತಿದ್ದಾರೆ. 15.04.1994ರಲ್ಲಿ ಸನ್ಯಾಸ ದೀಕ್ಷೆಯನ್ನು ತೆಗೆದುಕೊಂಡಿದ್ದಾಗ್ಯೂ 17.04.1997 ರಿಂದ ಸಂಪೂರ್ಣವಾಗಿ ಪೀಠಾಧಿಪತಿಯಾಗಿ ಮುಂದುವರೆದಿದ್ದಾರೆ. ಇವರೂ ಸಹ ಗುರುಗಳ ಆಲೋಚನೆಗೆ ಅನುಗುಣವಾಗಿ ನಡೆದುಕೊಳ್ಳುತ್ತಾ ಅವರ ಆಶಯಗಳನ್ನು ಚಾಚೂ ತಪ್ಪದೇ ಪಾಲಿಸುತ್ತಾ ಪ್ರಜೆಗಳನ್ನು ಸನ್ಮಾರ್ಗದಲ್ಲಿ ನಡೆಸುತ್ತಾ ಹಿಂದೂಮತ ಸಂಪ್ರದಾಯಗಳನ್ನು ಕಾಪಾಡುತ್ತಿದ್ದಾರೆ. ಗೋ ಸಂರಕ್ಷಣೆಯ ಮೇಲೆ ವಿಶೇಷವಾದ ಶ್ರದ್ಧೆಯನ್ನು ತೋರಿಸುತ್ತಿದ್ದಾರೆ.

ಹಿಂದೂಮತದ ವಿಶಿಷ್ಟತೆಯನ್ನು, ಉಪನಿಷತ್ತುಗಳ ಸಾರಾಂಶವನ್ನು ಉಪದೇಶಿಸುವುದಕ್ಕಾಗಿ ತನ್ನ ಶಿಷ್ಯರಲ್ಲಿಯವರನ್ನೇ ತನ್ನ ಪ್ರತಿನಿಧಿಗಳನ್ನಾಗಿಸಿ ಮೊದಲ ಪೀಠಾಧಿಪತಿಗಳಾಗಿ ಶ್ರೀ ಶಂಕರಾಚಾರ್ಯರು ನಿಯಮಿತಗೊಂಡಿದ್ದಾರೆ. ಅವರ ವಾರಸರು ಇಂದಿಗೂ ಅದೇ ಕ್ರಮವನ್ನು ತಪ್ಪದೇ ಅವರ ಆಶಯಗಳನ್ನು ಸಾಂಪ್ರದಾಯಗಳನ್ನು ಪಾಲಿಸುತ್ತಾ, ಸಮಾಜ ಹಿತವನ್ನು ಗೌರವಿಸುತ್ತಿದ್ದಾರೆಂದರೆ ಇದು ನಿಜಕ್ಕೂ ಭಾರತೀಯರ ಅದೃಷ್ಟ.

ಶ್ರೀ ಜಗದ್ಗುರು ಶಂಕರಾಚಾರ್ಯರು ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರನ್ನು ಸಂದರ್ಶಿಸಿ ಅವರ ಸನ್ನಿಧಿಯಲ್ಲಿ ಶ್ರೀ ಚಕ್ರ ಅಷ್ಟಬಂಧನವನ್ನು ಮಾಡಿದ್ದಾರೆಂದು ಹೇಳುತ್ತಾರೆ. ಅಂದಿನಿಂದ ತಿರುಮಲೆಯು ಜನಾಕರ್ಷಣೆ,ಧನಾಕರ್ಷಣೆ ಹೊಂದಿ ಕಲಿಯುಗ ವೈಕುಂಠವಾಗಿ ಪ್ರಸಿದ್ಧಿಯಾಯಿತೆಂಬುದು ಭಕ್ತರ ನಂಬಿಕೆ.

ಶ್ರೀ ಶಂಕರಾಚಾರ್ಯರು ತಮ್ಮ 32 ನೆಯ ವಯಸ್ಸಿನಲ್ಲಿ ಹಿಮಾಲಯ ಪರ್ವತದಲ್ಲಿ ಕೇದಾರನಾಥನನ್ನು ಸಂದರ್ಶಿಸಿ ಅಲ್ಲಿಯೇ ಒಂದು ಗುಹೆಯನ್ನು ಪ್ರವೇಶಿಸಿದವರು ಮರಳಿ ಹೊರಗೆ ಬರಲೇ ಇಲ್ಲ. ಅಲ್ಲಿಯೇ ಅವರು ಕೊನೆಯದಾಗಿ ವಿಶ್ರಾಂತಿಯನ್ನು ತೆಗೆದುಕೊಂಡರು. ಶಿವನಲ್ಲಿ ಅಂತರ್ಲೀನರಾದರು ಎಂದು ಭಾವಿಸಲಾಗುತ್ತಿದೆ.

ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಂ
ನಿರ್ಮೋಹತ್ವೇ ನಿಶ್ಚಲತತ್ತ್ವಂ ನಿಶ್ಚಲತತ್ತ್ವೇ ಜೀವನ್ಮುಕ್ತಿ

ಜ್ಞಾನಗಳು,ಮಹಾನುಭಾವರ ಸಾಂಗತ್ಯವನ್ನು ಯಾವಾಗಲೂ ಹೊಂದಬೇಕು. ಅದರಿಂದ ಮನಸ್ಸಿನಲ್ಲಿರುವ ಕಲ್ಮಷವನ್ನು ಕಳೆದುಕೊಳ್ಳಬೇಕು. ಪರಿಣಾಮವಾಗಿ ಬುದ್ಧಿಯು ನಿಶ್ಚಲ ಸ್ಥಿತಿಯನ್ನು ಪಡೆದುಕೊಳ್ಳುತ್ತದೆ. ಪರಮೇಶ್ವರನ ಮೇಲೆ ಕೇಂದ್ರೀಕೃತವಾಗುತ್ತದೆ. ಕೊನೆಗೆ ಜೀವನ್ಮುಕ್ತಿ ಲಭಿಸುತ್ತದೆ.

ಓಂ ಶಾಂತಿಃ ಶಾಂತಿಃ ಶಾಂತಿಃ

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ‘ಶ್ರೀವಾರಿ ಸೇವೆ’ - ಸ್ವಯಂ ಸೇವಕರ ಮಾರ್ಗದರ್ಶಕ ಸೂತ್ರಗಳು

1. ಶ್ರೀವಾರಿಸೇವೆಗೆ ಒಂದು ವಾರ ಕಾಲ ಸ್ವಯಂ ಸೇವೆಯನ್ನು ಮಾಡಲು ಹತ್ತು ಮಂದಿಗೆ ಕಡಿಮೆಯಿಲ್ಲದ ಸಮುದಾಯಗಳಿಗೆ ಅರ್ಹತೆ ಯುಂಟು.
2. ನಿಸ್ವಾರ್ಥ ಸೇವೆಯನ್ನು ಸಲ್ಲಿಸಲು ಈ ಸದಸ್ಯರಿಗೆ ಆಧ್ಯಾತ್ಮಿಕ ಪರಿಜ್ಞಾನವಿರಬೇಕು. ಲಿಂಗಭೇದವಿಲ್ಲ.ಹಿಂದೂಗಳಿಗೆ ಮಾತ್ರವೇ ಪ್ರವೇಶ.
3. ಆಸಕ್ತಿಯಿರುವ ಸಮೂಹದ ಸದಸ್ಯರು ತಮ್ಮ ಹೆಸರು, ವಿಳಾಸ, ವಯಸ್ಸು, ಪುರುಷ/ಸ್ತ್ರೀ,ವೃತ್ತಿ, ಸ್ಟ್ಯಾಂಪ್ ಸೈಜ್ ಫೋಟೋ, ದೂರವಾಣಿ ಸಂಖ್ಯೆ ಮುಂತಾದ ವಿವರಗಳೊಡನೆ ‘ಪೌರಸಂಬಂಧಾಧಿಕಾರಿ’ ತಿರುಮಲೆ ತಿರುಪತಿ ದೇವಸ್ಥಾನಗಳು, ಕಪಿಲತೀರ್ಥಂ ರಸ್ತೆ, ತಿರುಪತಿ-517501 ಈ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸ ಬೇಕಾದ ಫೋನ್ ನಂಬರುಗಳು - 0877-2263544. 0877 - 2263293.
4. ಶ್ರೀವಾರಿ ಸೇವೆಗೆ ಬರಲು ಆಸಕ್ತಿಯುಳ್ಳವರು ಅನ್‌ಲೈನ್ ಮುಖಾಂತರ ರಿಜಿಸ್ಟ್ರೇಷನ್ ಮಾಡಿಕೊಳ್ಳಬಹುದು.“www.tirumala.org” ವೆಬ್‌ಸೈಟ್‌ನಲ್ಲಿ ಶ್ರೀವಾರಿ ಸೇವೆ ಎನ್ನುವ ಲಿಂಕ್ ಮುಖಾಂತರ ಸೇವೆಗೆ ನೋಂದಣೆ ಮಾಡಿಕೊಳ್ಳಬಹುದು.
5. ಪ್ರಸ್ತುತ ಆನ್‌ಲೈನ್‌ನಲ್ಲಿ 25-40 ವರ್ಷ ಇರುವವರೆಗೆ 3 ದಿನಗಳು, 18-60 ವರ್ಷ ಇರುವವರಿಗೆ ನಾಲ್ಕು ದಿನಗಳು (ಅಥವಾ) 7 ದಿನಗಳು ಶ್ರೀವಾರಿಸೇವೆ ಲಭ್ಯವಿದೆ.
6. ಶ್ರೀವಾರಿ ಸೇವೆಗೆ ಬರುವಾಗ ನಿಮ್ಮ ಒರಿಜಿನಲ್ ಆಧಾರ್ ಕಾರ್ಡ್ ಮತ್ತು ಜೆರಾಕ್ಸ್ ಕಾಪಿ ತಪ್ಪದೇ ತೆಗೆದುಕೊಂಡು ಬರಬೇಕು. ಆಧಾರ್ ಕಾರ್ಡ್ ಇಲ್ಲದೆ ಸೇವೆಯನ್ನು ಸಲ್ಲಿಸಲು ಸಾಧ್ಯವಿಲ್ಲ.
7. ಶ್ರೀವಾರಿ ಸೇವೆಗೆ ಬರುವ ಗ್ರೂಪ್‌ಲೀಡರ್ ಅಥವಾ ಕೋ-ಆರ್ಡಿನೇಟರ್ ವಾಲೆಂಟರ್‌ಗಳ ಪೂರ್ತಿವಿವರಗಳನ್ನು ತಿರುಮಲೆಯಲ್ಲಿರುವ ಶ್ರೀವಾರಿ ಸೇವಾ ಸದನ್‌ನಲ್ಲಿ ನೀಡಬೇಕು.
8. ಮಕ್ಕಳು,ವೃದ್ಧರು,ವ್ಯಾಧಿಗ್ರಸ್ಥರನ್ನು ಜೊತೆಗೆ ಕರೆದುಕೊಂಡು ಬರಬಾರದು. ಹಾಗೊಮ್ಮೆ ಜೊತೆಯಲ್ಲಿ ಕರೆದುಕೊಂಡು ಬಂದರೆ ಅಂತಹವರಿಗೆ ಸೇವೆಯ ಅವಕಾಶ ದೊರೆಯುವುದಿಲ್ಲ.
9. ಶ್ರೀವಾರಿ ಸೇವೆಗೆ ಬರುವ ಟೀಮ್ ಲೀಡರ್‌ಗೆ ವ್ಯಕ್ತಿಗತವಾಗಿ ತಿಳಿದವರನ್ನು ಮಾತ್ರವೇ ಸೇವೆಗೆ ಕರೆದು ಕೊಂಡು ಬರಬೇಕು. ಸಭ್ಯರು ಯಾವುದೇ ತಪ್ಪನ್ನು ಮಾಡಿದರೆ ಲೀಡರ್ ಅದಕ್ಕೆ ಬಾಧ್ಯತೆಯನ್ನು ವಹಿಸಬೇಕು.
10. ಶ್ರೀವಾರಿ ಸೇವಕರನ್ನು ತಿರುಮಲೆಗೆ ಕರೆದುಕೊಂಡು ಬಂದಾಗಿನಿಂದ ನಂತರ ಹಿಂದಿರುಗುವವರೆಗೂ ಟೀಮ್ ಲೀಡರ್ ಪೂರ್ತಿ ಬಾಧ್ಯತೆಯನ್ನು ವಹಿಸಬೇಕು.
11. ಸೇವಕರು ತಮಗೆ ನೀಡಿದ ದಿನಾಂಕದಲ್ಲಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ತಿರುಮಲೆಯಲ್ಲಿನ ಆರ್.ಟಿ.ಸಿ. ಬಸ್ ನಿಲ್ದಾಣದೊಳಗಿರುವ ಶ್ರೀವಾರಿ ಸೇವಾ ಸದನ್‌ನಲ್ಲಿರುವ ಎ.ಇ.ಓ/ ಆಫೀಸರ್ ಆನ್ ಸ್ಪೆಷಲ್ ಡ್ಯೂಟಿ ಇವರ ಬಳಿ ಹಾಜರಾಗಬೇಕು.
12. ಸೇವಾಸದನದಲ್ಲಿ ಸೇವಕರಿಗೆ ಉಚಿತವಾಗಿ ವಸತಿಯನ್ನು ಕಲ್ಪಿಸಲಾಗುತ್ತದೆ. ಪುರುಷ ಸೇವಕರಿಗೆ ತಿರುಮಲೆ ಆರ್.ಟಿ.ಸಿ. ಬಸ್ ನಿಲ್ದಾಣದ ಭವನದಲ್ಲಿ ಸೇವಾಸದನ್‌ನಲ್ಲಿ, ಸ್ತ್ರೀ ಸೇವಕರಿಗೆ ಪಿ.ಎ.ಸಿ. 3 ರಲ್ಲಿ ವಸತಿಯನ್ನು ಕಲ್ಪಿಸಲಾಗುತ್ತದೆ. ಸೇವಕರು ತಮಗೆ ನೀಡಿದ ಲಾಕರ್‌ಗಾಗಿ ಸ್ವಂತ ಬೀಗವನ್ನು ತರಬೇಕಾಗುತ್ತದೆ.
13. ಶ್ರೀವಾರಿ ಸೇವಾ ಸದನ್‌ನಲ್ಲಿ ಸೇವಕರು ಗುರುತಿನ ಕಾರ್ಡ್‌ನ್ನು ಧರಿಸಿ ಡ್ಯೂಟಿಯನ್ನು ನಿಯಮಿಸುತ್ತಾರೆ. ಸೇವಕರು ಪ್ರತಿದಿನ 6.00 ಗಂಟೆ ಗಳ ಕಾಲ ಸೇವೆಯನ್ನು ಸಲ್ಲಿಸಲು ಸಿದ್ಧವಾಗಿರಬೇಕು.
14. ಪ್ರತಿದಿನ ಬೆಳಗ್ಗೆ 9.00 ರಿಂದ 10.00 ಗಂಟೆಯವರೆಗೆ, ಸಾಯಂಕಾಲ 6.00 ರಿಂದ 7.00 ಗಂಟೆಯವರೆಗೆ ಭಜನೆ, ಸತ್ಸಂಗ ಮತ್ತು ಶಿಕ್ಷಣ ತರಗತಿಗಳಲ್ಲಿ ಹಾಜರಾಗಬೇಕು. ಬೆಳಗ್ಗೆ ಸೇವೆಯಲ್ಲಿ ಇದ್ದವರು ಸಾಯಂಕಾಲ, ಸಾಯಂಕಾಲಸೇವೆಯಲ್ಲಿದ್ದವರು ಬೆಳಗ್ಗೆ ಶಿಕ್ಷಣ ತರಗತಿಗಳಿಗೆ ಹಾಜರಾಗಬೇಕು.
15. ಸ್ವಯಂ ಸೇವೆಯಲ್ಲಿ ತೊಡಗಿದ್ದಾಗ ಮಾತ್ರವೇ ಶ್ರೀವಾರಿ ಸೇವಾ ಸ್ಕಾರ್ಫ್ (ಗುರುತಿನ ಹೆಗಲ ವಸ್ತ್ರ) ಧರಿಸಬೇಕು.
16. ತಿರುಮಲೆಯಲ್ಲಿ ಎಲ್ಲ ಹೊತ್ತಿನಲ್ಲಿಯೂ ಗೋವಿಂದ ನಾಮಸ್ಮರಣೆ ಮಾಡುತ್ತ ಭಕ್ತರನ್ನು ‘ಗೋವಿಂದ’ ಎಂದು ಸಂಬೋಧಿಸಬೇಕು.
17. ಶ್ರೀವಾರಿ ಸೇವೆ ಪೂರ್ತಿಯಾಗಿ ಯಾತ್ರಿಕರಿಗೆ ಸಹಾಯಮಾಡಲು ಮಾತ್ರವೇ. ಸೇವೆಗೋಸ್ಕರ ಟೀಮ್ ಲೀಡರ್‌ಗಾಗಲೀ ಅಥವಾ ಸಿಬ್ಬಂದಿಗಾಗಲೀ ಧನ ರೂಪವಾಗಿ, ವಸ್ತು ರೂಪವಾಗಿ, ಯಾವುದೇ ರೀತಿಯಲ್ಲಿ ಸಲ್ಲಿಸಬೇಕಾದ ಅವಶ್ಯಕತೆಯಿಲ್ಲ.
18. ಪ್ರತಿ ಸ್ವಯಂ ಸೇವಕರನ್ನು ಹಿಂದೂವಾಗಿ ಗುರುತಿಸಲು ಯಾವುದೇ ರೀತಿಯಲ್ಲಿ ತಿರುನಾಮ/ತಿಲಕಧಾರಣೆ, ಕುಂಕುಮ/ಚಂದನವನ್ನು ಧರಿಸಬೇಕು.
19. ಸ್ವಯಂ ಸೇವಕರು ಭಕ್ತರಲ್ಲಿ ಸ್ವಾಮಿಯನ್ನು ದರ್ಶಿಸುತ್ತಾ ಅಂಕಿತ ಭಾವದಿಂದ ಸೇವೆಯನ್ನು ಸಲ್ಲಿಸಬೇಕು.
20. ಸ್ವಯಂ ಸೇವಕರು ತಮಗೆ ನೀಡಿದ ಪ್ರದೇಶದಲ್ಲಿ ಮಾತ್ರವೇ ಸೇವೆಯನ್ನು ಸಲ್ಲಿಸಬೇಕು. ಸ್ವಾಮಿಯ ಆಲಯದಲ್ಲಿ ಸೇವೆಗಾಗಿ ನಿರ್ಬಂಧಣೆಯಿಲ್ಲ. ಸ್ವಾಮಿಯ ಆಲಯದಲ್ಲಿ ಸೇವೆಗಾಗಿ ಒತ್ತಡ ಮಾಡುವಂತಿಲ್ಲ.
21. ಶ್ರೀವಾರಿ ಸೇವಾ ಸದನ್‌ನಲ್ಲಿಯಾಗಲೀ /ಪಿ.ಎ.ಸಿ.3 ನಲ್ಲಿ ಶೌಚಾಲಯಗಳನ್ನು ಶುಭ್ರವಾಗಿಡಬೇಕು. ಕೊಠಡಿಯಲ್ಲಿ ನೀರು, ವಿದ್ಯುತ್ ಅನ್ನು ವೃಥ್ಥಮಾಡಬೇಡಿ.
22. ರಾತ್ರಿವೇಳೆಯಲ್ಲಿ ತಮ್ಮ ವಸತಿ ಸಮುದಾಯದಲ್ಲಿ ಪುರುಷ ಸೇವಕರು ಷಾರ್ಟ್ಸ್, ಮತ್ತು ಮಹಿಳಾಸೇವಕರು ನೈಟಿಗಳನ್ನು ಧರಿಸಬಾರದು.
23. ಶ್ರೀವಾರಿ ಸೇವೆಯಲ್ಲಿ ನಿರ್ದೇಶಿಸಿದ ನಿಯಮ ನಿಬಂಧನೆಗಳನ್ನು ಯಾವುದೇ ಪರಿಸ್ಥಿತಿಯಲ್ಲಿಯೂ ಶ್ರೀವಾರಿಸೇವಕರು ಉಲ್ಲಂಘಿಸಿದರೆ 2 ವರ್ಷಗಳವರೆಗೆ ಸೇವೆಗೆ ಅನುಮತಿಸುವುದಿಲ್ಲ.
24. ಸೇವಾಸದನ್ ಮತ್ತು ಪಿ.ಎ.ಸಿ. ನಲ್ಲಿ ಶ್ರೀವಾರಿ ಸೇವಕರು ಅವರ ಕಾರ್ಯಕಲಾಪಗಳನ್ನು ಇಬ್ಬರು ಇಲ್ಲವೇ ಮೂವರು ಶ್ರೀವಾರಿ ಸೇವೆಯ ಕೋ-ಆರ್ಡಿನೇಟರ್ ಪರೀಕ್ಷಿಸುತ್ತಾರೆ. ದಯವಿಟ್ಟು ಅವರಿಗೆ ಸಹಕರಿಸಿ.

**ಡ್ರಸ್ ಕೋಡ್ - ಪುರುಷರು :** ಬಿಳಿ (ಶರ್ಟ್ ಅಥವಾ ಕುರ್ತಾ , ಪ್ಯಾಂಟ್ ಅಥವಾ ಪಂಚೆ ಅಥವಾ ಪೈಜಾಮ);
**ಸ್ತ್ರೀಯರು :** ಮೆರೂನ್ ಬಾರ್ಡರ್ ಹೊಂದಿದ ಆರೆಂಜ್ ಬಣ್ಣದ ಸೀರೆ, ಮೆರೂನ್ ಬಾರ್ಡರ್ ರವಿಕೆ. (ಅಥವಾ) ಆರೆಂಜ್ ಬಣ್ಣದ ಕುರ್ತಾ, ಮೆರೂನ್ ಬಣ್ಣದ ಪೈಜಾಮ, ಮೆರೂನ್ ಬಣ್ಣದ ದಾವಣಿ. ಶ್ರೀವಾರಿ ಸೇವಕರು ತಾವು ಕೋರಿದ ಪ್ರದೇಶಗಳಲ್ಲಿ ಸೇವೆ ಮಾಡುವುದಕ್ಕಾಗಿ www.tirumala.org ಯಿಂದ ಪಡೆಯಬಹುದು.

# ಛಾಂದೋಗ್ಯೋಪನಿಷತ್

- ಶ್ರೀಮತಿ. ಎ. ಗೀತ ವೀರರಾಘವನ್

ಈ ಉಪನಿಷತ್ತು ಅತ್ಯಂತ ಪ್ರಾಚೀನವಾದ ಉಪನಿಷತ್ತು. ಇದು ಸಾಮವೇದಕ್ಕೆ ಸಂಬಂಧಿಸಿದೆ. ಇದರಲ್ಲಿ ಎಂಟು ಅಧ್ಯಾಯಗಳು ಮತ್ತು ನೂರೈವತ್ತನಾಲ್ಕು ಖಂಡಗಳಿವೆ. ಒಂದೊಂದು ಖಂಡದಲ್ಲಿಯೂ ಹಲವಾರು ಗದ್ಯ ಮಂತ್ರಗಳಿವೆ. ಈ ಖಂಡಗಳು ಬೇರೆ ಬೇರೆ ವಿಷಯಗಳನ್ನು ವಿವೇಚಿಸುತ್ತವೆ. ಆರು, ಏಳು ಮತ್ತು ಎಂಟನೆಯ ಅಧ್ಯಾಯಗಳು ಅತ್ಯಂತ ಮಹತ್ವವಾದ ತತ್ವ ಜ್ಞಾನವನ್ನು ನಿರೂಪಿಸುತ್ತದೆ.

ಮೊದಲನೆಯ ಅಧ್ಯಾಯದಲ್ಲಿ ಪ್ರಣವೋಪಾಸನೆ ಅಥವಾ ಉದ್ಗೀತೋಪಾಸನೆಯ ವಿಷಯ ಪ್ರತಿಪಾದಿಸಲಾಗಿದೆ. ಇದರ ಸ್ವರೂಪವನ್ನೂ, ಸಾಮಗಾನದ ಗೂಢ ಸ್ವರೂಪವನ್ನೂ ವರ್ಣಿಸುತ್ತದೆ. ಅನೇಕ ಸಾಮೋಪಾಸಕರ ಉಲ್ಲೇಖ ಇದರಲ್ಲಿದೆ. ಈ ಅಧ್ಯಾಯದ ಹತ್ತನೆಯ ಖಂಡದಲ್ಲಿ ಉಷಸ್ತ ಚಕ್ರಾಯಣನ ಆಖ್ಯಾನ ನಿರೂಪಿಸಲಾಗಿದೆ.

ಕುರುದೇಶದಲ್ಲಿ ಕ್ಷಾಮಪೀಡಿತವಾಗಿ ಆಹಾರ ಸಿಗದೆ ಚಾಕ್ರಾಯಣರ ಮಗನಾದ ಉಷಸ್ತರು ತಮ್ಮ ಚಿಕ್ಕವಯಸ್ಸಿನಲ್ಲಿ ಹೆಂಡತಿಯೊಡನೆ ಬಹಳ ಕಷ್ಟಪಡುತ್ತಿದ್ದರು. ಉಷಸ್ತರು ಅಲ್ಲಿ ಮಾವಟಿಗರ ಹಳ್ಳಿಯ ಕಡೆ ಬರುತ್ತಿದ್ದಾಗ ಒಬ್ಬ ಮಾವಟಿಗನು ತಟ್ಟೆಯಲ್ಲಿ ಹುರುಳಿಯನ್ನು ಇಟ್ಟುಕೊಂಡು ತಿನ್ನುತ್ತಿದ್ದನು. ಆಹಾರವಿಲ್ಲದೆ ಪ್ರಾಣ ಹೋಗುವ ಸ್ಥಿತಿಯಲ್ಲಿದ್ದ ಉಷಸ್ತರು ಆ ಮಾವಟಿಗನನ್ನು ತನಗೆ ಸ್ವಲ್ಪ ಹುರುಳಿ ಕೊಡುವಂತೆ ಬೇಡಿದರು. ಆ ಮಾವಟಿಗನು ತಾನು ತಿನ್ನುತ್ತಿರುವ ತಟ್ಟೆಯಲ್ಲಿರುವಷ್ಟೇ ಹುರುಳಿ ತನ್ನಲ್ಲಿ ಇರುವುದೆಂದನು. ಉಷಸ್ತರು ಅದರಲ್ಲೇ ಸ್ವಲ್ಪವನ್ನು ಕೊಡುವಂತೆ ಕೇಳಿದರು. ಅವನು ಕೊಟ್ಟ ಎಂಜಲು ಹುರುಳಿಯನ್ನೇ ಬ್ರಹ್ಮ ಜ್ಞಾನಿಯಾದ ಉಷಸ್ತರು ಸ್ವಲ್ಪವನ್ನು ತಿಂದರು. ಮಾವಟಿಗನು ನೀರನ್ನು ಕೊಡಲು ಬಂದನು. ಉಷಸ್ತರು ಅದು ಎಂಜಲು ಬೇಡವೆಂದರು. ಆಗ ಮಾವಟಿಗನು ಹುರುಳಿಯೂ ಎಂಜಲೇ ಅಲ್ಲವೇ ಎಂದು ಕೇಳಿದಾಗ ಉಷಸ್ತರು ಆ ಹುರುಳಿಯನ್ನು ತಿನ್ನದಿದ್ದರೆ ತನ್ನ ಪ್ರಾಣ ಹೊರಟು ಹೋಗುತ್ತಿತ್ತೆಂದೂ ಆದರೆ ಈ ನೀರನ್ನು ಕುಡಿಯದಿದ್ದರೆ ಪ್ರಾಣ ಹಾನಿ ಇಲ್ಲವೆಂದರು. ತಾವು ತಿಂದು ಉಳಿದ ಹುರುಳಿಯನ್ನು ಮನೆಗೆ ತೆಗೆದುಕೊಂಡು ಹೋಗಿ ಹೆಂಡತಿಯ ಕೈಯಲ್ಲಿ ಕೊಟ್ಟರು. ಅವಳಿಗೆ ಸ್ವಲ್ಪ ಆಹಾರ ಸಿಕ್ಕಿದ್ದುದರಿಂದ ತಿನ್ನದೆ ಹಾಗೆಯೇ ಇಟ್ಟಳು. ಮಾರನೆಯ ದಿನ ಬೆಳಗ್ಗೆ ಉಷಸ್ತರು ಎದ್ದು ಹೆಂಡತಿಗೆ ನನಗೆ ಪ್ರಾಣ ಉಳಿಸಿಕೊಳ್ಳಲು ಆಹಾರ ಸಿಕ್ಕಿದರೆ, ರಾಜನು ದೊಡ್ಡ ಯಾಗವನ್ನು ಮಾಡುತ್ತಿದ್ದಾನೆ. ನಾನು ಹೋಗಿ ಸ್ವಲ್ಪ ಹಣ ಸಂಪಾದನೆ ಮಾಡಿಕೊಂಡು ಬರಬಹುದು ಎಂದರು. ಹೆಂಡತಿಯು ನೆನ್ನೆ ತಿಂದು ಉಳಿಸಿಕೊಟ್ಟಿದ್ದ ಹುರುಳಿ ಇದೆ ಎಂದಳು. ಹಿಂದಿನ ದಿನದ ಎಂಜಲು ಹುರುಳಿ ಜೊತೆಗೆ ಹಳಸಿಹೋಗಿದ್ದನ್ನು ತಿಂದು ಉಷಸ್ತ ಚಾಕ್ರಾಯಣರು ರಾಜನ ಯಾಗಕ್ಕೆ ಹೋದರು. ಈ ಆಖ್ಯಾನವು ಪ್ರಾಣಕ್ಕೆ ಆಪತ್ತು ಉಂಟಾದಾಗ ಯಾವ ಆಹಾರವನ್ನಾದರೂ ಪ್ರಾಣವನ್ನು ಉಳಿಸಿಕೊಳ್ಳಲು ತಿನ್ನಬಹುದೆಂಬ ಸತ್ಯವನ್ನು ಬ್ರಹ್ಮ ಜ್ಞಾನಿಯಾದ ಉಷಸ್ತ ಚಾಕ್ರಾಯಣರು ಮಾವಟಿಗನ ಎಂಜಲು ಹುರುಳಿಯನ್ನು ತಿಂದುದು ನಿರೂಪಿಸುತ್ತದೆ.

ಹನ್ನೊಂದನೆಯ ಅಧ್ಯಾಯದಲ್ಲಿ ಉಷಸ್ತರು ರಾಜನ ಯಾಗಕ್ಕೆ ಹೋಗಿ ಯಾಗವನ್ನು ನೆರವೇರಿಸಿ ದಕ್ಷಿಣೆಯನ್ನು ಪಡೆದುದನ್ನು ತಿಳಿಸುತ್ತದೆ.

ಈ ಉಪನಿಷತ್ತಿನಲ್ಲಿ ಬ್ರಹ್ಮೋಪಾಸನೆಯನ್ನು ಸುಂದರವಾದ ಆಖ್ಯಾನಗಳೊಡನೆ ನಿರೂಪಿಸಿರುವುದು ತತ್ವ ಜ್ಞಾನೋಪದೇಶವನ್ನು ರಂಜಿಸುವಂತೆ ಮಾಡಿದೆ. ಶಿಲಕ, ದಾಲ್ಭ್ಯ ಮತ್ತು ಜೈವಲಿ ಇವರು ಉದ್ಗೀತದಲ್ಲಿ ಚರ್ಚೆ ನಡೆಸಿ ಲೋಕಕ್ಕೆಲ್ಲಾ ಕಾರಣವಾದ ಪರಬ್ರಹ್ಮನನ್ನು "ಆಕಾಶ" ಎಂಬ ಶಬ್ದದಿಂದ ನಿರ್ದೇಶಿಸಿರುವುದು, ಆ ಆಕಾಶವೇ ಎಲ್ಲಕ್ಕೂ ಕಾರಣ ಎಂದು ನಿರ್ಧಾರಗೊಳಿಸಿದೆ.

ವಿಶ್ವವೇ "ಸಾಮ" ಎಂಬ ಉಪದೇಶವು ಎರಡನೆಯ ಅಧ್ಯಾಯದಲ್ಲಿದೆ. ಇಲ್ಲಿ ಭಕ್ತಿಯ ವಿಷಯದಲ್ಲಿ ಉಪಾಸನೆಗಳನ್ನು ನಿರೂಪಿಸಿದೆ.

ಮೂರನೆಯ ಅಧ್ಯಾಯದಲ್ಲಿ ''ಮಧುವಿದ್ಯೆ''ಯ ನಿರೂಪಣೆ ಇದೆ. "ಸರ್ವಂ ಖಲ್ವಿದಂ ಬ್ರಹ್ಮ" "ತಜ್ಜಲಾನಿತ ಶಾಂತ ಉಪಾಸೀತ" ಎಂದರೆ ಎಲ್ಲವೂ ಬ್ರಹ್ಮನಿಂದ ಹುಟ್ಟಿ, ಬ್ರಹ್ಮನಲ್ಲೇ ಇದ್ದು ಬ್ರಹ್ಮವನ್ನು ಸೇರುವುದರಿಂದ ಎಲ್ಲವೂ ಬ್ರಹ್ಮವೇ ಎಂಬ ಉಪದೇಶ ಇಲ್ಲಿ ನೀಡಿದೆ. ಬ್ರಹ್ಮವು ಮನೋಮಯ, ಪ್ರಾಣ ಶರೀರ, ಸತ್ಯ ಸಂಕಲ್ಪ, ಆಕಾಶಾತ್ಮ, ಸರ್ವಕರ್ಮ, ಸರ್ವಕಾಮ ಎಂದು ಅರಿತು ಆ ಬ್ರಹ್ಮವೇ ನನ್ನ ಆತ್ಮನು ಎಂದು ಉಪಾಸನೆ ಮಾಡಬೇಕೆಂದು ವರ್ಣಿತವಾಗಿದೆ. ಆ ಆತ್ಮನು ಹೃದಯಾಕಾಶದಲ್ಲಿ ನಿಗೂಢನಾಗಿದ್ದಾನೆ. ಅಣುವಿಗಿಂತ ಅಣುವಾಗಿ ಮಹತ್ತಿಗಿಂತಲೂ ಮಹತ್ತಾಗಿರುವನು. ಹದಿನಾರು, ಹದಿನೇಳನೆಯ ಖಂಡಗಳಲ್ಲಿ ಪುರುಷ ವಿದ್ಯೆಯ ಪ್ರಸ್ತಾಪ ಇದೆ. ಪುರುಷನೇ ಯಜ್ಞ ಎಂಬ ಉಪಾಸನೆ ವಿಧಿಸಿದೆ. ಈ ಯಜ್ಞ

ದರ್ಶನವನ್ನು ಅರಿತುಕೊಂಡು ಮಹಿದಾಸ ಐತರೇಯನು ರೋಗಕ್ಕೆ "ಎಲೈ ರೋಗವೇ ನನ್ನನ್ನು ಏಕೆ ಗೋಳು ಹುಯ್ಯುವಿ, ಇಷ್ಟರಿಂದ ನಾನು ಸಾಯುವುದಿಲ್ಲ" ಎಂದನಂತೆ.

ನಾಲ್ಕನೆಯ ಅಧ್ಯಾಯದಲ್ಲಿ ಜ್ಞಾನಶ್ರುತಿ ಪೌತ್ರಾಯಣರ ಕಥೆ ಬರುತ್ತದೆ. ಅವರು ಜ್ಞಾನಶ್ರುತರ ಮಗ ಮತ್ತು ಪುತ್ರರ ಮೊಮ್ಮಗ. ಅವರು ಮಹಾದಾನಿಯಾಗಿದ್ದರು. ಅವರು ತನ್ನ ಮನೆಯಲ್ಲಿ ಹೆಚ್ಚು ಹೆಚ್ಚು ಆಹಾರವನ್ನು ತಯಾರಿಸಿ ಹಸಿದು ಬಂದವರಿಗೆ ಅನ್ನದಾನ ಮಾಡುತ್ತಿದ್ದರು. ಅದಲ್ಲದೆ ಅನೇಕ ಅತಿಥಿ ಗೃಹಗಳ ನಿರ್ಮಾಣ ಮಾಡಿ ಬೇರೆ ಬೇರೆ ಕಡೆಗಳಿಂದ ಬಂದವರು ಅಲ್ಲಿ ತಂಗಿ ತನ್ನ ಅನ್ನದಾನವನ್ನು ಪಡೆಯಲಿ ಎಂದು ಇಚ್ಛಿಸುತ್ತಿದ್ದರು.

ಒಂದು ದಿನ ಕೆಲವು ಹಂಸಗಳು ಅಲ್ಲಿಗೆ ಬಂದವು. ಒಂದು ಹಂಸ ಮತ್ತೊಂದಕ್ಕೆ ಹೇಳಿತು. ನಿನ್ನ ದೃಷ್ಟಿ ಸ್ವಲ್ಪ ಮಂದ ಹುಷಾರಾಗಿರು. ಜ್ಞಾನಶ್ರುತಿಯ ತೇಜಸ್ಸು ಎಲ್ಲೆಡೆ ಹರಡಿದೆ. ಅದರಲ್ಲಿ ನೀನು ಸುಟ್ಟು ಹೋಗಬೇಡ. ಕೆಲವು ಋಷಿಗಳು ಜ್ಞಾನಶ್ರುತಿಯ ಸದ್ಗುಣಗಳಿಂದ ಸಂತೋಷಿಸಿ ಅವರ ಮನೆ ಮುಂದೆ ಹಂಸಗಳ ರೂಪದಲ್ಲಿ ಕಾಣಿಸಿಕೊಂಡರು. ಆಗ ಇನ್ನೊಂದು ಹಂಸ ಉತ್ತರಿಸಿತು. 'ಯಾರ ವಿಷಯವನ್ನು ನೀನು ಹೇಳುತ್ತಿರುವಿ.ಅವರೇನು ಗಾಡಿಯೊಡನೆ ಇರುವ ರೈಕ್ವರೇ? 'ಆಗ ಮೊದಲನೆಯದು ನೀನು ಇಷ್ಟು ಹೇಳುತ್ತಿರುವ ಗಾಡಿಯೊಡನಿರುವ ರೈಕ್ವರು ಹೇಗಿದ್ದಾರೆ? ಎಂದು ಕೇಳಿತು. ಆಗ ಎರಡನೆಯದು ಆ ರೈಕ್ವರಿಗಿರುವ ಜ್ಞಾನ ಎಂತಹುದೆಂದರೆ ಅವರು ತಿಳಿದಿರುವುದನ್ನು ಮಾತ್ರ ಬೇರೆಯಾದರಾದರೂ ತಿಳಿಯಬಹುದು. ಅಂತಹ ಜ್ಞಾನಿರೈಕ್ವರ ವಿಷಯ ನಾನು ಹೇಳಿದ್ದು ಎಂದಿತು.

ಜ್ಞಾನಶ್ರುತಿ ಪೌತ್ರಾಯಣರು ಈ ಹಂಸಗಳ ಸಂವಾದವನ್ನು ಕೇಳಿಸಿಕೊಂಡು ಬೆಳಗಾದೊಡನೆ ತಮ್ಮ ಸಾರಥಿಯನ್ನು ಕರೆದು ಹಂಸಗಳ ಸಂವಾದವನ್ನು ಹೇಳಿ ಆ ರೈಕ್ವರಿಂದ ಜ್ಞಾನೋಪದೇಶ ಪಡೆಯಲು ಇಚ್ಛಿಸಿ ಅವರನ್ನು ಹುಡುಕಲು ಹೇಳಿದರು. ಸಾರಥಿ ಬಹಳ ಹುಡುಕಿದ ಮೇಲೆ ಬಹಳ ದೂರದ ಏಕಾಂತ ಸ್ಥಳದಲ್ಲಿ ಗಾಡಿಯ ಕೆಳಗೆ ಮೈಯನ್ನು ಕರೆದುಕೊಳ್ಳುತ್ತಾ ಕುಳಿತಿದ್ದ ಒಬ್ಬರನ್ನು ಕಂಡು ಅವರು ರೈಕ್ವರೇ? ಎಂದು ಕೇಳಿದನು. ಅವರು ಹೌದೆಂದು ಹೇಳಿದಾಗ ರೈಕ್ವರನ್ನು ಕಂಡೆನೆಂದು ಹಿಂತಿರುಗಿದನು. ಎರಡನೆಯ ಖಂಡದಲ್ಲಿ ಜ್ಞಾನಸ್ರುತಿ ರೈಕ್ವರನ್ನು ಮೊದಲನೆಯ ಸಲ ಕಂಡಾಗ ಉಪದೇಶಿಸಲಿಲ್ಲ. ಮತ್ತೆ ಹೆಚ್ಚು ಹೆಚ್ಚು ದಕ್ಷಿಣೆಗಳೊಡನೆ ಹೋದಾಗ ರೈಕ್ವರು ತನ್ನ ಯೋಗ ದೃಷ್ಟಿಯಿಂದ ಜ್ಞಾನಶ್ರುತಿ ಬ್ರಹ್ಮಾಜ್ಞಾನವಿಲ್ಲದೆ ನಿರ್ವೇದರಾಗಿದ್ದಾರೆಂದು ತಿಳಿದು ಈಗ ಅವರು ಜ್ಞಾನೋಪದೇಶಕ್ಕೆ ಯೋಗ್ಯರಾಗಿದ್ದಾರೆಂದು ಜ್ಞಾನೋಪದೇಶ ಮಾಡಿದರು.

ನಾಲ್ಕನೆಯ ಖಂಡದಲ್ಲಿ ಸತ್ಯಕಾಮ ಜಾಬಾಲನ ಕಥೆ ಪ್ರಸ್ತುತವಾಗಿದೆ. ಸತ್ಯಕಾಮ ತನ್ನ ತಾಯಿ ಜಾಬಾಲಳನ್ನು ತಾನು ಬ್ರಹ್ಮಚರ್ಯ ಆಚರಿಸಿ ವೇದಾಧ್ಯಯನ ಮಾಡಬೇಕಾಗಿರುವುದರಿಂದ ತಮ್ಮ ಗೋತ್ರಯಾವುದೆಂದು ಕೇಳಿದನು. ಅವಳು ಮಗನಿಗೆ ತಾನು ಮನೆಯ ಕೆಲಸಗಳಲ್ಲೇ ಮಗ್ನಳಾಗಿ ತಮ್ಮ ಗೋತ್ರವನ್ನು ತಿಳಿಯಲಿಲ್ಲವೆಂದು ಸತ್ಯಕಾಮನ ಜನ್ಮವಾದ ಕೆಲವೇ ದಿನಗಳಲ್ಲಿ ಅವನ ತಂದೆ ನಿಧನರಾದುದರಿಂದ ತನಗೆ ತಿಳಿಯದೆಂದಳು.ಅವಳು ಮಗನಿಗೆ ನನ್ನ ಹೆಸರು ಜಾಬಾಲ ನೀನು ನನ್ನ ಮಗ. ನಿನ್ನ ಹೆಸರು ಸತ್ಯಕಾಮ. ನೀನು ನಿನ್ನ ಗುರುಗಳಿಗೆ ಸತ್ಯಕಾಮ ಜಾಬಾಲನೆಂದು ಹೇಳು ಎಂದಳು.

ಸತ್ಯಕಾಮ, ಹರಿದ್ರುಮಥರ ಪುತ್ರರಾದ ಗೌತಮರನ್ನು ಸೇರಿ ಪೂಜ್ಯರಾದ ಅವರಲ್ಲಿ ಗುರುಕುಲ ನಡೆಸಿ ವೇದಾಧ್ಯಯನ ಮಾಡಬೇಕೆಂದನು. ಅವರು ಗೋತ್ರವನ್ನು ಕೇಳಿದಾಗ ತನ್ನ ತಾಯಿ ಹೇಳಿದುದನ್ನು ತಿಳಿಸಿದನು. ಅವರು ಒಳ್ಳೆಯ ವಂಶದಲ್ಲಿ ಜನಿಸದಿದ್ದರೆ ಈ ರೀತಿ ಸತ್ಯವನ್ನು ಮಾತಾಡುವುದಿಲ್ಲವೆಂದು ಸತ್ಯಕಾಮನಿಗೆ ಸಮಿತ್ತುಗಳನ್ನು ತರಲು ಹೇಳಿ ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಉಪಕೋಸಲ ವಿದ್ಯೆಯ ಉಪದೇಶ ಮಾಡಿರುವುದು ಈ ಅಧ್ಯಾಯದಲ್ಲಿಯೇ ಇದೆ. ಇಲ್ಲಿ ದೇವಯಾನದ ಮಾರ್ಗದಲ್ಲಿ ಆತ್ಮನು ಬ್ರಹ್ಮಲೋಕ ಸೇರುವ ವರ್ಣನೆ ಬರುತ್ತದೆ.

ಐದನೆ ಅಧ್ಯಾಯದಲ್ಲಿ ಇಂದ್ರಿಯಗಳಿಗೆ ತಮ್ಮಲ್ಲಿ ಯಾರು ಶ್ರೇಷ್ಟರು ಎಂಬ ವಿಚಾರ ಏರ್ಪಟ್ಟು ಪ್ರಾಣವು ಶ್ರೇಷ್ಠವೆಂದು ತೀರ್ಮಾನಿಸಿದವು. ಈ ಅಧ್ಯಾಯದಲ್ಲಿಯೇ ಐದು ಜನ ಮಹಾ ಶ್ರೋತ್ರಿಯರು ವೈಶ್ವಾನರ ಸ್ವರೂಪ ತಿಳಿಯಲು ಉದ್ದಾಲಕರೊಡನೆ ಅಶ್ವಪತಿ ಕೇಕಯ ರಾಜರ ಬಳಿ ಹೋಗಿ ಅವರಿಂದ ಉಪದೇಶ ಪಡೆದ ರೋಚಕವಾದ ಸನ್ನಿವೇಷ ವರ್ಣಿತವಾಗಿದೆ. ಈ ಸಂದರ್ಭದಲ್ಲಿ ಅಶ್ವಪತಿ ತನ್ನ ರಾಜ್ಯದ ಸ್ಥಿತಿಯನ್ನು ಹೇಳಿದ ಮಾತುಗಳು ಎಲ್ಲಾ ಕಾಲದ, ಎಲ್ಲಾ ಜನರೂ ಅರಿತು ಆಚರಿಸಬೇಕು. ಅತ್ಯಂತ ಪ್ರಾಚೀನವಾದ ಉಪನಿಷತ್ತು ಒಂದು ಸುಭಿಕ್ಷ ರಾಜ್ಯವನ್ನು ವರ್ಣಿಸಿರುವುದು ಈ ಲೋಕದ ಕಣ್ಣನ್ನು ತೆರೆಯಬೇಕಾಗಿದೆ. ಅಶ್ವಪತಿ ತನ್ನ ರಾಜ್ಯದಲ್ಲಿ ಕಳ್ಳನಿಲ್ಲ, ಜಿಪುಣನಿಲ್ಲ, ಮದ್ಯಪಾನ ಮಾಡುವವನಿಲ್ಲ, ಅನಾಹಿತಾಗ್ನಿ ಇಲ್ಲ, ಅವಿದ್ವಾಂಸನಿಲ್ಲ, ಸ್ವೈರಿ ಇಲ್ಲ ಇನ್ನೂ ಸ್ವೈರಿಣಿ ಎಲ್ಲಿರುತ್ತಾಳೆ.? ಎನ್ನುತ್ತಾರೆ.

ಆರನೆಯ ಅಧ್ಯಾಯದಲ್ಲಿ ಈ ಉಪನಿಷತ್ತಿಗೆ ಮಕುಟಪ್ರಾಯವಾಗಿರುವ ಸದ್ವಿದ್ಯೆಯನ್ನು ನಿರೂಪಿಸಲ್ಪಟ್ಟಿದೆ. ಇಲ್ಲಿ 'ತತ್ವಮಸಿ' ವಿಶ್ವವಿಖ್ಯಾತವಾದ ಉಪದೇಶದ ನಿರೂಪಣೆ ಇದೆ. ಉದ್ದಾಲಕರು ಶ್ವೇತಕೇತುವಿಗೆ 'ತತ್ವಮಸಿ' ಉಪದೇಶವನ್ನು ಇಲ್ಲಿ ನೀಡಿದ್ದಾರೆ.

ಶ್ವೇತಕೇತು ಉದ್ಧಾಲಕರ ಮಗ ಮತ್ತು ಅರುಣರ ಮೊಮ್ಮಗ. ಉದ್ಧಾಲಕರು ಶ್ವೇತಕೇತುವಿಗೆ ಹನ್ನೆರಡು ವರ್ಷಗಳು ತುಂಬಿದಾಗ ಬ್ರಹ್ಮಚಾರಿಯಾಗಿ ಗುರುವಿನ ಮನೆಯಲ್ಲಿ ತಂಗಿ ಜ್ಞಾನಾರ್ಜನೆ ಮಾಡಬೇಕೆಂದು ತಿಳಿಸಿದರು. ಅಂತೆಯೇ ಶ್ವೇತ ಕೇತುವು ಹನ್ನೆರಡು ವರ್ಷಗಳು ಗುರುಕುಲ ವಾಸ ನಡೆಸಿ ವಿದ್ಯಾರ್ಜನೆ ಮಾಡಿ ಅವನಿಗೆ ಇಪತ್ನಾಲ್ಕು ವರ್ಷಗಳಾದಾಗ ಹಿಂತಿರುಗಿದನು.ಎಲ್ಲಾ ವೇದಗಳ ಅಧ್ಯಯನ ಮಾಡಿ ತಾನು ಎಲ್ಲವನ್ನು ತಿಳಿದೆನೆಂದೂ ಪರಿಪೂರ್ಣನೂ ಎಂಬ ಭಾವನೆ ಯೊಡನೆ ಸ್ವಲ್ಪ ಅಹಂಕಾರದಿಂದ ಮನೆಗೆ ಹಿಂತಿರುಗಿದನು.

ತಂದೆ ಉದ್ಧಾಲಕರು ಮಗನನ್ನು ಪ್ರಶ್ನಿಸಿದರು. ನೀನು ಆ ಆದೇಶವನ್ನು ತಿಳಿದೆಯಾ? ಯಾವುದನ್ನು ಕೇಳುವುದರಿಂದ ಎಲ್ಲವನ್ನೂ ಕೇಳಿದಂತಾಗುವುದೋ, ಯಾವುದರ ಚಿಂತನೆ ಯಿಂದ ಎಲ್ಲವೂ ವೇದ್ಯವಾಗುವುದೋ? ಯಾವುದನ್ನು ಅರಿಯುವುದರಿಂದ ಎಲ್ಲವನ್ನೂ ಅರಿತಂತಾಗುವುದೋ ಆ ಆದೇಶವನ್ನು ಕೇಳಿದೆಯಾ? ಎಂದರು. ಶ್ವೇತಕೇತು ತಂದೆಗೆ ಅಂತಹ ಆದೇಶವಿರುವುದು ಹೇಗೆ ಸಾಧ್ಯ? ಎಂದನು.

ತಂದೆಯ ಉದ್ದೇಶವೇನಾಗಿತ್ತೆಂದರೆ ಚಿತ್ ಅಚಿತ್ ವಿಶಿಷ್ಟ ಪರಬ್ರಹ್ಮ ಎಲ್ಲಾ ಲೋಕದ ಸೃಷ್ಟಿಕರ್ತನನ್ನು ತಿಳಿದರೆ ಎಲ್ಲಾ ಲೋಕಗಳನ್ನೂ ತಿಳಿದಂತೆ ಆಗುತ್ತದೆ. ತಂದೆಯ ಮನಸ್ಸಿನಲ್ಲಿ ಲೋಕದ ಎಲ್ಲಾ ಪದಾರ್ಥಗಳಿಗೆ ಕಾರಣಭೂತನಾದವನು ಒಬ್ಬನೇ ಅವನನ್ನು ಮಗ ಶ್ವೇತಕೇತು ತಿಳಿದಿಲ್ಲವೆಂಬುದು ಅರಿವಾಯಿತು. ಶ್ವೇತಕೇತುವಿಗೆ ಒಂದರ ಜ್ಞಾನ ಇನ್ನೊಂದನ್ನು ಹೇಗೆ ತಿಳಿಸಿ ಕೊಡುತ್ತದೆ? ಇದು ಸರಿಯಲ್ಲ ಎಂಬ ಭಾವನೆ.

ತಂದೆ ಕೆಲವು ಉದಾಹರಣೆಗಳನ್ನು ಕೊಟ್ಟರು. ಒಂದು ಮಣ್ಣಿನ ಉಂಡೆಯಿಂದ ಮಣ್ಣಿನಿಂದ ಮಾಡುವ ಎಲ್ಲಾ ಪದಾರ್ಥಗಳನ್ನೂ ತಿಳಿಯಬಹುದು. ಬೇರೆ ಬೇರೆ ರೂಪಗಳೂ ಹೆಸರುಗಳೂ ಕಾರ್ಯವಾಗಿ ಆ ಮಣ್ಣು ಕಾರಣವಾಗಿರುತ್ತದೆ. ಅದು ಮಣ್ಣು ಎಂಬುದು ಸತ್ಯ. ಹಾಗೆಯೇ ಚಿನ್ನದ ಕಟ್ಟಿಯನ್ನು ತಿಳಿದರೆ ಅದರಿಂದ ಮಾಡುವ ಎಲ್ಲಾ ಆಭರಣಗಳೂ ತಿಳಿದು ಬರುತ್ತದೆ. ಅದು ಎಲ್ಲಾ ಚಿನ್ನವೇ ಎಂಬುವುದು ಸತ್ಯ. ಹಾಗೆಯೇ ಕಬ್ಬಿಣವನ್ನು ತಿಳಿದರೆ ಕಬ್ಬಿಣದಿಂದ ಮಾಡಿದ ಎಲ್ಲಾ ಪದಾರ್ಥಗಳನ್ನೂ ತಿಳಿಯಬಹುದು. ಅವು ಎಲ್ಲಾ ಕಬ್ಬಿಣ ಎಂಬುವುದು ಸತ್ಯ. ಹಾಗೆಯೇ ಈ ಆದೇಶ. ಕಾರಣವನ್ನು ತಿಳಿದರೆ ಕಾರ್ಯ ತಿಳಿದು ಬರುತ್ತದೆ.

ಶ್ವೇತಕೇತು ಈ ಆದೇಶವನ್ನು ತಿಳಿದಿಲ್ಲದಿರುವುದರಿಂದ ಎಲ್ಲಿ ಮತ್ತೆ ತನ್ನನ್ನು ಗುರುಕುಲಕ್ಕೆ ಕಳುಹಿಸಿ ಬಿಡುವರೋ ಎಂಬ ಭಯದಿಂದ ತಂದೆಗೆ ನಮ್ಮ ಆಚಾರ್ಯರಿಗೆ ಈ ಆದೇಶ ತಿಳಿದಿಲ್ಲ. ಇಲ್ಲದಿದ್ದರೆ ಉಪದೇಶಿಸುತ್ತಿದ್ದರು. ಆದುದರಿಂದ ನೀವೇ ನನಗೆ ಉಪದೇಶಮಾಡಿ ಎಂದು ತಂದೆಯನ್ನು ಕೇಳಿ ಕೊಂಡನು. ಅವನಿಗೆ ತನಗೆ ಈ ಆದೇಶ ಅಥವಾ ಬ್ರಹ್ಮಜ್ಞಾನ ತಿಳಿದಿಲ್ಲವೆಂದು ಅರ್ಥವಾಯಿತು.ಕಾರಣವನ್ನು ತಿಳಿದರೆ ಕಾರ್ಯವನ್ನು ತಿಳಿಯಬಹುದು.

ಸೃಷ್ಟಿಗೆ ಮುಂಚೆ ಲೋಕದ ಎಲ್ಲಾ ಹೆಸರುಗಳೂ ರೂಪ ಗಳೂ ಒಂದೇ ಒಂದು "ಸತ್" ಆಗಿದ್ದಿತು. ಆ 'ಸತ್' ಚಿತ್ ಅಚಿತ್ ವಿಶಿಷ್ಟನಾದ ಪರಬ್ರಹ್ಮನು ಏಕಮೇವ ಅದ್ವಿತೀಯ ನಾಗಿ ದ್ದನು. ಆ 'ಸತ್' ಅನೇಕವಾಗಬೇಕೆಂದು ಸಂಕಲ್ಪಿಸಿದನು.

ಜಗತ್ ಸೃಷ್ಟಿಯಾಯಿತು. ಸಕಲ ಪದಾರ್ಥಗಳೂ ಆ 'ಸತ್'ಪರಬ್ರಹ್ಮನನ್ನು ಆತ್ಮವಾಗಿ ಅಂತರ್ಯಾಮಿಯಾಗಿ ಉಳ್ಳ ದಾದವು. ಇಲ್ಲಿ ಉದ್ದಾಲಕರು ಅನೇಕ ರೋಚಕವಾದ ನಿದರ್ಶನಗಳಿಂದ ಶ್ವೇತಕೇತುವಿಗೆ 'ತತ್ವಮಸಿ' ಎಂಬ ಉಪದೇಶವನ್ನು ನೀಡಿದ್ದಾರೆ.

ಏಳನೆಯ ಅಧ್ಯಾಯದಲ್ಲಿ ನಾರದರಿಗೆ ಸನತ್ಕುಮಾರರು ಮಾಡಿದ ಆತ್ಮ ವಿದ್ಯೋಪದೇಶದ ವಿವರಣೆ ಇದೆ.

ನಾರದರು ಸನತ್ಕುಮಾರರನ್ನು ಕಂಡು ಪೂಜ್ಯರಾದ ಅವರಿಗೆ ತಾನು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ,ಇತಿಹಾಸ ಪುರಾಣಗಳು, ವ್ಯಾಕರಣ ಶಾಸ್ತ್ರ, ಗಣಿತಶಾಸ್ತ್ರ,ಖನಿಜ ಶಾಸ್ತ್ರ, ತರ್ಕಧ್ಯಾನ, ಶಿಕ್ಷಾಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಗಂಧರ್ವ ವಿದ್ಯೆ, ಆಯುರ್ವೇದ ಎಲ್ಲವನ್ನೂ ತಿಳಿದಿದ್ದೇನೆ. ಆದರೆ ಬ್ರಹ್ಮಜ್ಞಾನದ ಉಪದೇಶವಾಗಿಲ್ಲ, ಈ ಸಂಸಾರ ಸಾಗರ ವನ್ನು ದಾಟಬೇಕಾದರೆ ಆ ಬ್ರಹ್ಮಜ್ಞಾನ ಅವಶ್ಯಕವೆಂದು ಅನೇಕ ಪೂಜ್ಯರಿಂದ ತಿಳಿದಿದ್ದೇನೆ. ಆ ಜ್ಞಾನವಿಲ್ಲದ ನಾನು ದುಃಖಿತ ನಾಗಿದ್ದೇನೆ. ನನಗೆ ಬ್ರಹ್ಮಜ್ಞಾನವನ್ನು ಉಪದೇಶಿಸಿರಿ ಎಂದು ಪ್ರಾರ್ಥಿಸಿದರು."ಭೂಮವಿದ್ಯೆ" ಎಂದು ಪ್ರಖ್ಯಾತವಾದ ಬ್ರಹ್ಮ ವಿದ್ಯೆಯು ಇಲ್ಲಿ ಪ್ರಸ್ತುತವಾಗಿದೆ.ಎಲ್ಲೆಲ್ಲಿಯೂ ಎಲ್ಲದರಲ್ಲಿಯೂ ಆತ್ಮವನ್ನು (ಪರಬ್ರಹ್ಮನನ್ನು) ಕಾಣುವವರು 'ಸ್ವರಾಟ್' ಆಗು ತ್ತಾರೆ.

ಎಂಟನೆಯ ಅಧ್ಯಾಯದ ಪ್ರಾರಂಭದಲ್ಲಿ "ದಹರ ವಿದ್ಯೆ" ಯ ಉಪದೇಶವಿದೆ. ಈ ಉಪನಿಷತ್ತಿನ ಶಿಖರ ಪ್ರಾಯಾ ವಾದುದು ಈ ಅಧ್ಯಾಯ. ಪ್ರಜಾಪತಿಯು ಇಂದ್ರ ಮತ್ತು ವಿರೋಚನರಿಗೆ ಮಾಡಿದ ಆತ್ಮೋಪದೇಶದ ನಿರೂಪಣೆ ಇಲ್ಲಿದೆ.

ಇಂದ್ರನೂ ವಿರೋಚನನನ್ನು ಪ್ರಜಾಪತಿಯಲ್ಲಿ ಮೂವತ್ತೆರಡು ವರ್ಷಗಳು ಬ್ರಹ್ಮಜ್ಞಾನ ಪಡೆಯಲು ಗುರುಕುಲ ನಡೆಸಿದರು.

ಪ್ರಜಾಪತಿ ಅವರಿಗೆ 'ಕಣ್ಣಿನಲ್ಲಿ ಕಾಣುವವನು ಆತ್ಮ ಅದೇ ಪರಬ್ರಹ್ಮ' ಎಂದು ಉಪದೇಶಿಸಿದರು. ನಾವು ನೀರಿನಲ್ಲಿ ಮತ್ತು ಕನ್ನಡಿಯಲ್ಲಿ ಕಾಣುವುದು ಯಾರನ್ನು? ಎಂದು ಪ್ರಶ್ನಿಸಿದರು. ಪ್ರಜಾಪತಿ ಕಣ್ಣಿನಲ್ಲಿ ಕಾಣುವವನೇ ಎಲ್ಲೆಡೆಯೂ ಕಾಣುವವನು ಎಂದರು.

ಪ್ರಜಾಪತಿ ಅವರಿಗೆ ಒಂದು ಪಾತ್ರೆಯಲ್ಲಿ ನೀರು ತುಂಬಿ ಅದರಲ್ಲಿ ನೋಡಿ ಅವರಿಗೆ ಅರ್ಥವಾಗದಿದ್ದುದು ಕೇಳಬೇಕೆಂದರು. ಅವರು ತಮ್ಮ ಪ್ರತಿಬಿಂಬವನ್ನೇ ಕಂಡೆವೆಂದರು. ಪ್ರಜಾಪತಿ ಅವರಿಗೆ ಚೆನ್ನಾಗಿ ಅಲಂಕರಿಸಿಕೊಂಡು ನೀರಿನಲ್ಲಿ ನೋಡಿರೆಂದರು. ಪ್ರಜಾಪತಿ ಏನನ್ನು ಕಂಡರೆಂದು ಕೇಳಿದಾಗ ಅವರು ಚೆನ್ನಾಗಿ ಅಲಂಕರಿಸಿಕೊಂಡಿರುವ ನಮ್ಮನ್ನೇ ಕಂಡೆವೆಂದರು. ಪ್ರಜಾಪತಿ ಅದೇ ಆತ್ಮವೆಂದರೆ. ಆಗ ಇಬ್ಬರೂ ಹೊರಟುಬಿಟ್ಟರು. ವಿರೋಚನ ಈ ದೇಹವೇ ಆತ್ಮವೆಂಬ ಜ್ಞಾನದೊಡನೆ ಹಿಂತಿರುಗಿ ಅಸುರರಿಗೆ ಅದೇ ತತ್ವವನ್ನು ಬೋಧಿಸಿದನು. ಅದು ಅಸುರೋಪನಿಷತ್ ಆಯಿತು.

ಪ್ರಜಾಪತಿ ಇವರು ಶ್ರವಣ, ಮನನ, ನಿಧಿಧ್ಯಾಸನವಿಲ್ಲದೆ ಹೋಗುತ್ತಿರುವುದನ್ನು ಕಂಡು ಇವರಿಬ್ಬರೂ ಸರಿಯಾದ ಆತ್ಮ ಜ್ಞಾನ ಪಡೆಯದೆ ಹೊರಟು ಹೋಗುತ್ತಿದ್ದಾರೆ ಮತ್ತೆ ಬರಬಹುದೆಂದು ತಿಳಿದರು.

ಇಂದ್ರನು ಇದು ಸರಿಯಲ್ಲವೆಂದು ದಾರಿಯಲ್ಲಿ ಯೋಚಿಸಿದನು ಮತ್ತೆ ಪ್ರಜಾಪತಿಯ ಬಳಿಗೆ ಹೋದನು. ಪ್ರಜಾಪತಿ ಇಂದ್ರನಿಗೆ ಇನ್ನೂ ಮೂವತ್ತೆರಡು ವರ್ಷಗಳು ಶಿಷ್ಯವೃತ್ತಿ ಮಾಡಲು ತಿಳಿಸಿದರು. ಆ ನಂತರ ಆತ್ಮೋಪದೇಶ ಮಾಡಿದರು.

ಈ ಉಪನಿಷತ್ತಿನ ಅಧ್ಯಯನದಿಂದ ತಿಳಿದು ಬರುವ ಉಪಯುಕ್ತ ಅಂಶಗಳು ಈ ರೀತಿಯಾಗಿದೆ.

೧) ಜ್ಞಾನವನ್ನು ಸಂಪಾದಿಸುವುದರಲ್ಲಿ ಅತ್ಯಂತ ಶ್ರದ್ಧೆ ಅವಶ್ಯಕ. ನಮಗೆ ತಿಳಿಯದೇ ಇರುವ ವಿಚಾರಗಳನ್ನು ಶ್ರದ್ಧಾಪೂರ್ವಕ ತಿಳಿದವರ ಬಳಿ ಸಾಗಿ ಅವರಿಂದ ಉಪದೇಶ ರೂಪದಲ್ಲಿ ಪಡೆದುಕೊಳ್ಳಬೇಕು.

೨) ತತ್ವೋಪದೇಶವನ್ನು ಮಾಡುವಾಗ ಉದ್ದಾಲಕರು ಉದೇಶಿಸಿದಂತೆ ಅನೇಕ ಸಾಮತಿಗಳನ್ನೂ ಉದಾಹರಣೆಗಳನ್ನೂ ಕೊಟ್ಟು ಶಿಷ್ಯರ ಮನಸ್ಸಿಗೆ ಅರಿವಾಗುವ ರೀತಿಯಲ್ಲಿ ಮನದಟ್ಟು ಮಾಡಿಸಬೇಕು.

೩.) ಜ್ಞಾನವನ್ನು ಗುರುವಿನ ಮೂಲಕ ಪಡೆದರೆ ಮಾತ್ರ ಅದು ದೃಢವಾಗಿ ಕಾರ್ಯಕಾರಿಯಾಗುತ್ತದೆ.

೪.) ಮನುಷ್ಯರು ಆಧ್ಯಾತ್ಮಿಕ ಜ್ಞಾನವನ್ನು ಸಂಪಾದಿಸಬೇಕಾದುದು ಅತ್ಯಂತ ಅವಶ್ಯಕ.

೫.) ಎಲ್ಲಾ ವಿದ್ಯೆಗಳಿಗಿಂತ ಅತ್ಯಧಿಕವಾದುದು ಬ್ರಹ್ಮವಿದ್ಯೆ. ಅದನ್ನು ಹೊಂದಿರುವವರು ಯಾರೇ ಆದರೂ ಅವರಿಂದ ಅದನ್ನು ಪಡೆಯಬೇಕು.

೬) ಸಮಾಜದಲ್ಲಿ ಉಪನಿಷತ್ ಕಾಲದಲ್ಲಿ ಅತ್ಯುನ್ನತ ಸ್ಥಾನವನ್ನು ನೀಡಲಾಗಿದ್ದ ಸತ್ಯವಚನ, ಅಹಿಂಸೆ, ದಯೆ, ನೀತಿ ನಿಯಮಗಳ ಪರಿಪಾಲನೆಯನ್ನು ಇಂದಿನ ಮಾನವ ಜನಾಂಗ ಮಾಡಬೇಕು. ವ್ಯಕ್ತಿ ಜೀವನವನ್ನು ಪರಿಶುದ್ಧವಾಗಿ ಇಟ್ಟುಕೊಳ್ಳಬೇಕು.




ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ. ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು
ಟೋಲ್ ಫ್ರಿ ನಂಬರ್
18004254141

ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!

ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.



# ಪಿತೃ ಪಕ್ಷ ಮಹಾಲಯ ಅಮಾವಾಸ್ಯೆ

- ಶ್ರೀಮತಿ. ಸುಮಾಚಂದ್ರಶೇಖರ್

"ಮಹಾಲಯ ಅಮಾವಾಸ್ಯೆ" ಪಿತೃಋಣ ತೀರಿಸುವ ಒಂದು ಮಹತ್ವದ ಸಂದರ್ಭ.ನಮ್ಮ ಜನನಕ್ಕೆ ಕಾರಣನಾದ ಮಾತಾಪಿತೃಗಳನ್ನು ವರ್ಷಕ್ಕೊಮ್ಮೆ ಸ್ಮರಿಸಿ, ಪಿಂಡ, ತಿಲ, ತರ್ಪಣಗಳನ್ನು ಸಮರ್ಪಿಸಿ ಆರಾಧಿಸುವ ಪರಮ ಪವಿತ್ರವಿಧಿಯಿದು. ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಮಹಾಲಯ ಅಮಾವಾಸ್ಯೆಗೊಂದು ಮಹತ್ವದ ಸ್ಥಾನವಿದ್ದು. ಅದು ಪಿತೃಪಕ್ಷವೆಂದು ಹೆಸರಾಗಿದೆ.

ಲೋಕವೆನ್ನುವ ಸಂತೆಯಲ್ಲಿ ನೂರಾರು ಜೀವಿಗಳು. ಶ್ರಮಿಕ, ವಣಿಕ, ಧನಿಕ ಹೀಗೆ ಹತ್ತಾರು ಮುಖಗಳು. ಹಲವು ವ್ಯವಹಾರಗಳು. ಆದರೆ ಅವರವರ ಕರ್ಮಕ್ಕೆ ತಕ್ಕಂತೆ ಗಳಿಸುತ್ತಾರೆ.ಗಳಿಸಿದ್ದಕ್ಕೆ ಕ್ಷಣಿಕ ತೃಪ್ತಿ ಪಡುತ್ತಾರೆ. ಬೇಕು, ಬೇಡುಗಳ ಬಯಕ್ಕೆಯಲ್ಲೇ ಮಿಂದೇಳುತ್ತಾರೆ. ಕೊನೆಗೊಮ್ಮೆ ಇಹಲೋಹದ ವ್ಯಾಪಾರ ಮುಗಿಯಿತೆಂದು ಶಾಶ್ವತವಾಗಿ ಹೊರಟು ಬಿಡುತ್ತಾರೆ. ಇಲ್ಲೊಂದು ಸಂಗತಿ ಹುಟ್ಟು, ಸಾವು, ಬದುಕು, ಹುಡುಕು, ಕೆದಕು ಯಾವುದೂ ನಮ್ಮದಲ್ಲ. ನಮ್ಮಿಚ್ಚೆಯಂತೆ ಯಾವುದೂ ನಡೆಯುತ್ತಿಲ್ಲ, ನಡೆಯುವುದೂ ಇಲ್ಲ ಆದಾಗ್ಯೂ ದೇಹಭಾವವೇಕೆ? ಅದರೊಂದಿಗಿನ ಸಂಬಂಧಗಳೆಂಬ ಕುಣಿಕೆಗಳೇಕೆ? ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳುವಂತೆ ಪ್ರತಿಯೊಂದು ಹುಟ್ಟಿಗೂ ಒಂದು ಕಾರಣವಿದೆ. ಕೆಲವೊಂದು ಕಾರಣಗಳು ಆ ಕ್ಷಣದಲ್ಲೇ ವ್ಯಕ್ತವಾಗಬಹುದು ಮತ್ತೆ ಕೆಲ ಕಾರಣಗಳು ಮುಂದಿನ ದಿನಗಳಲ್ಲಿ ಸಂಬಂಧಗಳ ಕುಣಿಕೆಗಳಲ್ಲಿ ಪ್ರಕಟವಾಗಬಹುದು.ಪ್ರಕಟವಾಗುವಿಕೆಗೊಂದು ವೇದಿಕೆ ಸಜ್ಜಾಗಬೇಕು.ಆದರೆ ಅದ್ಯಾವುದೂ ನಮ್ಮಿಚ್ಚೆಗೆ ನಿಲುಕುವುದಿಲ್ಲ.ಎಲ್ಲ ಭಗವಂತನ ಪ್ರೇರಣೆಯೇ!

ವಿರಕ್ತತೆಯಲ್ಲೇ ಅನುರಕ್ತತೆಯಿದೆ

ಹುಟ್ಟು ಸಾವು ಬದುಕಿನ ಎರಡು ಘಟ್ಟಗಳಾದರೂ ಅದರ ನಡುವಿನ ಅಂತರ ಚಿಕ್ಕದೋ, ದೊಡ್ಡದೋ ನಮಗೆ ಗೊತ್ತಿಲ್ಲ. ಆದರೂ ಪ್ರಯಾಣ ಮುಂದುವರಿಸುತ್ತೇವೆ.ಪ್ರಯಾಣದಲ್ಲಿ ಒಂದಿಷ್ಟು ಜ್ಞಾನವನ್ನು ಸಂಪಾದಿಸುತ್ತೇವೆ. ಕಲಿತ, ತಿಳಿದ ಜ್ಞಾನವನ್ನು ಕರ್ಮಾನುಗುಣ್ಯವಾದ ವಿವೇಚನೇಗೆ ತಕ್ಕಂತೆ ವಿನಿಯೋಗಿಸಿದ್ದೇವೆ ಎಂದು ಕೊಳ್ಳುತ್ತೇವೆ.ಎಲ್ಲಿಯವರೆಗೆ ಜೀವಭಾವ ದೇಹದೊಳಗೆ ಇರುತ್ತದೆಯೋ ಅಲ್ಲಿಯವರೆಗೆ ಎಲ್ಲವೂ ನನ್ನದು. ಒಮ್ಮೆ ಆ ಭಾವ ತೊರೆದು ಹೋದರೆ ನನ್ನದೆನ್ನುವುದು ಏನೂ ಇಲ್ಲ.ಬಹುಶಃ ಆ ಕಾರಣಕ್ಕೇ ಮಹಾತ್ಮರು ಹೇಳುವುದು. 'ಹೇ ಮೂಢ, ದೇಹವನ್ನು ಪ್ರೀತಿಸಬೇಡ. ಅದರೊಳಗಿನ ಜೀವವನ್ನು ಪ್ರೀತಿಸು', ಹೌದಲ್ಲವಾ ಎಷ್ಟು ಪ್ರಜ್ಞಾವಂತಿಕೆಯ ನುಡಿಗಟ್ಟುಗಳು!

ಅಂತಹ ಪ್ರಜ್ಞಾವಂತಿಕೆಯಲ್ಲೇ ಒಂದಿಷ್ಟು ಚಿಂತನ ಮಂಥನ ನಡೆಸೋಣ.ಈ ಶರೀರದ ಹುಟ್ಟಿಗೆ ಪಿತೃಗಳು ಕಾರಣವಾಗಿದ್ದಾರೆ. ಅಸ್ತಿತ್ವಕ್ಕೆ ದೇವತೆಗಳು ಕಾರಣರಾಗಿದ್ದಾರೆ. ಜ್ಞಾನದ ಬೆಳಕು ಕಾಣಲಿಕ್ಕೆ ಋಷಿಗಳು ಕಾರಣರಾಗಿದ್ದಾರೆ, ಜೀವರ ಕಾರಣದಿಂದ ಶರೀರದ ಹುಟ್ಟಾಗಿದೆ. ಅವರ ಉಪಕೃತತೆಯ ಕಾರಣ ಪಡೆದ ಶರೀರವಿರುವ ತನಕ ನಾವು ಅವರಿಗೆ ಋಣಿಯಾಗಿರಬೇಕು. ಇನ್ನು ಶರೀರ ಪೋಷಣೆಗೆ, ಅಸ್ತಿತ್ವಕ್ಕೆ

ಅಗತ್ಯವಾದ ಮಳೆ, ಬೆಳೆ ಫಲವನ್ನು ಆ ದೈವವು ಕೊಟ್ಟಿದೆ. ಅಂತಹ ದೈವವನ್ನು ನೆನೆಯಬೇಕು. ಆಹಾರ ದೊರೆತರೆ. ಮಳೆ ಬಂದರೆ. ಬೆಳಕು ಕಂಡರಷ್ಟೇ ಬದುಕಿನ ಯಾನ ಮುಂದು ವರೆಯುವುದಿಲ್ಲ. ಪಾಲನೆ - ಪೋಷಣೆಗೆ ಅಗತ್ಯವಾದ ಜ್ಞಾನ ಸಂಪತ್ತನ್ನು ಅಲೌಕಿಕ ವಿಚಾರಧಾರೆಗಳನ್ನು, ವೇದ ಭಂಡಾರ ವನ್ನು, ಔಷಧೀಯ ಜ್ಞಾನವನ್ನು ನೀಡಿದ ಋಷಿ ಮುನಿಗಳಿಗೆ ನಾವು ಸ್ಪಂದಿಸಬೇಕು. ಜೀವನ ಪರ್ಯಂತ ಈ ಋಣಭಾರ ವನ್ನು ಕಡಿಮೆ ಮಾಡಿಕೊಳ್ಳುವ ನಿಟ್ಟಿನಲ್ಲೇ ನಮ್ಮ ನಡೆ ಸಾಗ ಬೇಕು. ಈ ಪ್ರಕ್ರಿಯೆಯಲ್ಲಿ ಮೂಡಿ ಬಂದದ್ದೇ ತರ್ಪಣ ವಿಧಾನ.

ಯಾವ ಕಾರ್ಯವನ್ನು ಮಾಡಿದರೂ ಶ್ರದ್ಧೆಯಿಂದ ಮಾಡಬೇಕು, ಅದರಲ್ಲೂ ಜೀವ ಸೃಷ್ಟಿಗೆ ಕಾರಣವಾದ ಪಿತೃ ಗಳನ್ನು ಉದ್ದೇಶಿಸಿ ಮಾಡುವ ಯಜ್ಞವೇ ಶ್ರಾದ್ಧ. ಆ ಕಾರಣ ದಿಂದಲೇ 'ಶ್ರದ್ಧಯಾ ದಧಾತಿ ಇತಿ ಶ್ರಾದ್ಧಮ್' ಎನ್ನುವ ಮಾತು ಬಂದಿರುವುದು. ನಮ್ಮೆಲ್ಲಾ ಕರ್ಮಾಚರಣೆ, ಸಂಸ್ಕಾರಗಳ ಪಾಲನೆಯ ಹಿಂದೆ ಸದಾಶಯವಿದೆ.ಲೋಕಕಲ್ಯಾಣ ಭಾವನೆ ಯಿದೆ. ಸಂಸ್ಕಾರಗಳನ್ನು ಪೂರ್ವ ಸಂಸ್ಕಾರ ಮತ್ತು ಉತ್ತರ (ಅಪರ) ಸಂಸ್ಕಾರ ಎಂದು ಗುರುತಿಸಬಹುದು. ಪೂರ್ವ ಸಂಸ್ಕಾರ ಗರ್ಭಾದಾನದಿಂದ ಪ್ರಾರಂಭವಾಗಿ ವಿವಾಹ ದೊಂದಿಗೆ ಮುಕ್ತಾಯವಾಗುತ್ತದೆ. ಅಪರ ಸಂಸ್ಕಾರ ವ್ಯಕ್ತಿಯ ಮೃತಾನಂತರ ಮಾಡುವ ಕ್ರಿಯೆಗಳನ್ನು ಒಳಗೊಂಡಿದೆ, ಪೂರ್ವ ಸಂಸ್ಕಾರ ಮನುಷ್ಯ ಜನ್ಮದ ಶ್ರೇಯಸ್ಸಿಗೆ ಪೂರಕ ವಾಗಿದ್ದರೆ ಅಪರ ಸಂಸ್ಕಾರದಿಂದ ದೇಹ ತೊರೆದ ಜೀವಾತ್ಮನಿಗೆ ಸದ್ಗತಿ ದೊರೆಯುತ್ತದೆ. ಹಾಗಾಗಿ ಅಪರ ಸಂಸ್ಕಾರವನ್ನು ಎಲ್ಲರೂ ಮಾಡಬಹುದು ಎನ್ನುವುದು ವಿದ್ವಾಂಸರ ಅಭಿಮತ.

ಪರಮ ದುರ್ಲಭವಾದ ಮನುಷ್ಯಜನ್ಮದ ಸಾಫಲ್ಯ ತೆಯು ಅದನ್ನು ಪಡೆದ ನಮ್ಮ ಆಚರಣೆಗಳ ಮೇಲೆ ಅವಲಂಬಿತ ವಾಗಿರುತ್ತದೆ. ಪರಮಾತ್ಮ ನಮಗೆ ಈ ಜನ್ಮವನ್ನು ಏತಕ್ಕಾಗಿ ನೀಡಿದ್ದಾನೆ ಎಂದರೆ ಹಿಂದಿನ ಜನ್ಮದ ಪಾಪ ಶೇಷಗಳನ್ನು ಅನುಭವಿಸಿ ಮುಗಿಸಿ ಮತ್ತೆ ಇನ್ನೂ ಹೆಚ್ಚಿನದಾದ ಪುಣ್ಯ ಸಂಪಾದನೆ ಮಾಡಿ ಮೋಕ್ಷವನ್ನು ಪಡೆಯಲಿ ಎಂದು. ಆಚಾರ್ಯ ಶಂಕರರು ನುಡಿದಂತೆ ಪುನರಪಿ ಜನನಂ ಪುನರಪಿ ಮರಣಂ.ಹೀಗೆ ಎಷ್ಟು ಜನ್ಮ ತಾಳಿದರೂ ಸಹ ಮುಗಿಸಲಾಗದಷ್ಟು ಪಾಪವನ್ನು ಒಂದೇ ಜನ್ಮದಲ್ಲಿ ಸಂಪಾದಿಸಿ ಬಿಡುತ್ತೇವೆ. ಈ ಕಠಿಣ ಸಮಸ್ಯೆಗೆ ನಮ್ಮ ಶಾಸ್ತ್ರಗಳು ಸುಲಭ ಪರಿಹಾರ ನೀಡುತ್ತವೆ. ಶಾಸ್ತ್ರಗಳ ಪ್ರಕಾರ ಮೃತರ ಆತ್ಮಗಳಿಗೆ ಶಾಶ್ವತ ಪಿತೃಲೋಕ ಪ್ರಾಪ್ತಿಯಾಗುವಂತೆ ಮಾಡುವುದು ಅವರ ಮಕ್ಕಳ ಕರ್ತವ್ಯ. ಗರುಡಪುರಾಣದಲ್ಲಿ ಭಗವಂತನು ನುಡಿಯು ತ್ತಾನೆ.'ಯಾವನು ಪುತ್ ಎಂಬ ನರಕದಿಂದ ಪಿತೃಗಳನ್ನು ಪಾರುಮಾಡುತ್ತಾನೋ ಅವನೇ ಪುತ್ರ'.ಆದುದರಿಂದ ಯಾವುದೇ ಜಾತಿಬೇಧವಿಲ್ಲದೆ ಕರ್ಮಾಧಿಕಾರ ಇದ್ದಲ್ಲಿ ಪಿತೃಗಳಿಗೆ ಶ್ರಾದ್ಧ, ತರ್ಪಣ ಹಾಗೂ ದಾನಗಳನ್ನು ಮಾಡಿ ತಮ್ಮ ಋಣ ತೀರಿಸಲೇ ಬೇಕು.

ಪಿತೃಗಳಿಗೆ ನಾವು ಸಲ್ಲಿಸುವ ವಂದನಾರ್ಪಣೆಯೇ ಪಿತೃಪಕ್ಷದ ವಿಶೇಷ. ನಾವು ಏನೇ ಸಾಧನೆ ಮಾಡಲಿ; ನಮ್ಮ ಜನ್ಮಕ್ಕೆ, ಇಂದಿನ ಜೀವನಕ್ಕೆ ನಮ್ಮ ಪಿತೃಗಳ ಕೊಡುಗೆ ಅಪಾರ. ಆದುದರಿಂದ ವರ್ಷಕ್ಕೊಮ್ಮೆ ಅವರೆಲ್ಲರನ್ನೂ ನೆನೆದು ನಮ್ಮ ಕೃತಜ್ಞತೆ ಸಲ್ಲಿಸಬೇಕಾಗುತ್ತದೆ. ಈ ಕರ್ಮಾಂಗಕ್ಕೆ ಯಾವುದೇ ಜಾತಿ - ಧರ್ಮಗಳ ಭೇದವಿಲ್ಲ! ಪಿತೃಪಕ್ಷವು ಸರ್ವರಿಗೂ ಅನ್ವ ಯಿಸುವ ಆಚರಣೆಯಾಗಿದೆ.

ಇಂಥ ವಿಶೇಷ ಕರ್ತವ್ಯವನ್ನು ಪಾಲಿಸಬೇಕಾದ ಸಂದರ್ಭದಲ್ಲಿ ಗಮನಿಸಬೇಕಾದ ಅಂಶ ಕಾಲ.ಯಾವ ಕಾಲ ದಲ್ಲಿ ಪಿತೃಗಳಿಗೆ ಸದ್ಗತಿ ನೀಡುವ ಕಾರ್ಯಗಳನ್ನು ಮಾಡ ಬೇಕು? ಸಾಮಾನ್ಯವಾಗಿ ವಾರ್ಷಿಕ ಶ್ರಾದ್ಧ ರೂಢಿಯಲ್ಲಿ ಇಟ್ಟು ಕೊಂಡವರು ಮೃತರ ಶ್ರಾದ್ಧವನ್ನು ಅವರ ಮೃತಮಾಸದ ಆ ತಿಥಿಯಂದು ಪಿಂಡಗಳನ್ನು ಸಮರ್ಪಿಸಿ ಆಚರಿಸುತ್ತಾರೆ. ಆದರೆ ಅಂಥ ಸಮಯದಲ್ಲಿ ಶ್ರಾದ್ಧ ಮಾಡುವವರು ಪಿತೃ, ಮಹಾಪಿತೃ, ಪ್ರಪಿತಾಮಹ ಅಂದರೆ ತಂದೆ, ಅಜ್ಜ ಹಾಗೂ ಮುತ್ತಜ್ಜನಿಗೆ ಅಥವಾ ತಾಯಿ, ಅಜ್ಜಿ ಹಾಗೂ ಮುತ್ತಜ್ಜಿಗೆ ಪಿಂಡಾದಿಗಳನ್ನಿಟ್ಟು ಶ್ರಾದ್ಧ ಮಾಡುತ್ತಾರೆ. ಆದರೆ ಭಾದ್ರಪದ ಮಾಸದ ಕೃಷ್ಣಪಕ್ಷದಲ್ಲಿ ಮಾತ್ರ ಕುಟುಂಬದಲ್ಲಿ ಮೃತರಾದ ಪ್ರತಿಯೊಬ್ಬರಿಗೂ ತರ್ಪಣ ಕೊಡಬೇಕು.ಕಾರಣ ಮಾಸಗಳಲ್ಲಿ ಅತ್ಯಂತ ಭದ್ರಮಾಸ ಎಂದು ಕರೆಯಲ್ಪಡುವುದು ಈ ಭಾದ್ರಪದ. ಅದರಲ್ಲಿಯೂ ಕೃಷ್ಣಪಕ್ಷ ಪ್ರಾರಂಭಗೊಳ್ಳುವುದು ಉತ್ತರಭಾದ್ರಾ ನಕ್ಷತ್ರದಿಂದ, ಅಂದರೆ ಮನುಷ್ಯಜನ್ಮ ಮುಗಿಸಿದ ಉತ್ತರದಲ್ಲಿ ಆ ಆತ್ಮಕ್ಕೆ ಶಾಶ್ವತ ಭದ್ರ ಸ್ಥಾನವನ್ನು ಪಿತೃಲೋಕದಲ್ಲಿ ಸ್ಥಾಪಿಸಲು ಹಾಗೂ ಅವರಿಗೆ ತರ್ಪಣಾದಿಗಳನ್ನು ಕೊಟ್ಟು ಶುಭವನ್ನು ಪಡೆಯಲು ಈ ಪಕ್ಷವು ಸೂಕ್ತ ಸಮಯ.ವರ್ಷಕ್ಕೊಮ್ಮೆ ಏಕೆ ಎಂಬುದು ಸಾಮಾನ್ಯರ ಅನುಮಾನ. ಶಾಸ್ತ್ರಗಳ ಪ್ರಕಾರ ಭೂಲೋಕದಲ್ಲಿ ವಾಸ ಮಾಡುವ ನಮ್ಮ ಒಂದು ವರ್ಷ ಪಿತೃ ಲೋಕದವರಿಗೆ ಒಂದು ದಿವಸ. ಹೀಗಾಗಿ ವರ್ಷಕ್ಕೊಮ್ಮೆ ಪಿತೃಪಕ್ಷದಲ್ಲಿ ಪೂರ್ವಿಕರನ್ನು ಆರಾಧಿಸಿದರೆ ಪ್ರತಿದಿನ ಪಿತೃಗಳನ್ನು ಆರಾಧಿಸಿದಂತೆ. ಇನ್ನು

ಭಾದ್ರಪದ ಮಾಸದ ಕೃಷ್ಣಪಕ್ಷದಲ್ಲಿಯೇ ಏಕೆ? 'ನಿರ್ಣಯ ಸಿಂಧು' ಗ್ರಂಥದಲ್ಲಿ ತಿಳಿಸಿದಂತೆ 'ಆಷಾಢಮಾಸದ ಹುಣ್ಣಿಮೆಯ ನಂತರ ಐದನೆಯ ಪಕ್ಷದಲ್ಲಿ ಪಿತೃಗಳು ಪ್ರತಿದಿನ ಅನ್ನ ಹಾಗೂ ನೀರನ್ನು ಬಯಸುತ್ತಾರೆ. ಇಲ್ಲಿ ಪಕ್ಷ ಎಂದರೆ 15 ತಿಥಿಗಳು. ಅಲ್ಲಿಗೆ ಆಷಾಢಮಾಸದ ಹುಣ್ಣಿಮೆಯ ನಂತರ ಐದನೆಯ ಪಕ್ಷ ಈ ಭಾದ್ರಪದ ಕೃಷ್ಣಪಕ್ಷ. ಆದುದರಿಂದ ಈ ಪಕ್ಷವನ್ನು ಪಿತೃಪಕ್ಷ ಎಂದು ಕರೆದಿದ್ದಾರೆ. ಆದುದರಿಂದ ಪಿತೃಗಳನ್ನು ತೃಪ್ತಿ ಪಡಿಸಲು ಅವರು ಬಯಸುವ ಅನ್ನವನ್ನು ಪಿಂಡಗಳ ಸಮರ್ಪಣೆ ಮೂಲಕ ಹಾಗೂ ಅವರು ಬಯಸುವ ನೀರನ್ನು ತರ್ಪಣಗಳ ಮೂಲಕ ನೀಡಿ ಪಿತೃಗಳ ಆಶೀರ್ವಾದಕ್ಕೆ ಪಾತ್ರರಾಗಬೇಕು.

ಮನೆಯಲ್ಲಿ ತಿಲತರ್ಪಣ ನೀಡುವುದನ್ನು ಶಾಸ್ತ್ರಗಳು ನಿಷೇಧಿಸಿವೆ.ಭಾನುವಾರ, ಶುಕ್ರವಾರ, ಭರಣಿ, ಕೃತ್ತಿಕಾ ಹಾಗೂ ಮಖಾ ನಕ್ಷತ್ರಗಳಿರುವ ದಿನಗಳಲ್ಲಿ ಕೂಡ ತಿಲತರ್ಪಣ ವನ್ನು ನಿಷೇಧಿಸಲಾಗಿದೆ. ಆದರೆ ಪಿತೃಪಕ್ಷದಲ್ಲಿ ಮಾತ್ರ ಯಾವುದೇ ನಿಷಿದ್ಧ ತಿಥಿ-ವಾರ ನಕ್ಷತ್ರಗಳಿದ್ದರೂ ತಿಲತರ್ಪಣ ಮಾಡ ಬಹುದು.

ತರ್ಪಣಕ್ಕೆ ಉತ್ತಮ ಸ್ಥಳಗಳೆಂದರೆ ಪವಿತ್ರ ನದೀ ತೀರ ಗಳು ಹಾಗೂ ಗೋಕರ್ಣಾದಿ ತೀರ್ಥಕ್ಷೇತ್ರಗಳು. ಪಿತೃ ಪಕ್ಷದಲ್ಲಿ ಅವಶ್ಯವಾಗಿ ತರ್ಪಣದ ಅಧಿಕಾರವುಳ್ಳವರು ಗೋಕರ್ಣ, ಶ್ರೀರಂಗಪಟ್ಟಣ ಮುಂತಾದ ಕ್ಷೇತ್ರಗಳು ಅಥವಾ ಕಾವೇರಿ, ಗಂಗಾ ಇಂಥ ಪವಿತ್ರ ನದೀ ತೀರಗಳಲ್ಲಿ ಪಿತೃಗಳಿಗೆ ಪಿಂಡ ಪ್ರದಾನ, ತರ್ಪಣಾದಿಗಳನ್ನು ಅರ್ಪಿಸುವುದು ಉತ್ತಮ. ವಿವಾಹ ವಾಗಿ ಇನ್ನೂ ಒಂದು ವರ್ಷ ಮುಗಿಯದವರು ತರ್ಪಣ ಮಾಡ ಕೂಡದು. ಪಿತೃ ಅಂದರೆ ಬರಿ ಪುರುಷರು ಅಂತ ಅಲ್ಲ, ಮಾತಾ ಸ್ವರೂಪರು ಪಿತೃ ಎಂದೇ ಭಾವ. ಈ ಸಮಸ್ತ ಪಿತೃಗಳನ್ನು ವಸು-ರುಧ್ರ-ಆದಿತ್ಯ ಎಂಬ ದೇವತಾ ಶ್ರೇಷ್ಟರು ನಿಯಂತ್ರಿಸುತ್ತಾರೆ. ಜೀವವು ತನ್ನ ಕರ್ಮಾನುಸಾರ ತಾನು ಹೋಗಬೇಕಾದಲ್ಲಿಗೆ ಹೋಗುತ್ತದೆ. ನಾವು ಪಿಂಡ ಹಾಕುವುದು ಪಿತೃ ದೇವತೆಗಳಿಗೆ. ಇದೊಂದು ದೇವತಾಗಣ. ಅದರಲ್ಲಿ ಒಟ್ಟು ನೂರು ದೇವತೆಗಳು. ಅದರಲ್ಲಿ ಮೂರು ಪ್ರದಾನ ಪಿತೃಗಳು. ಜೀವಿತ ಕಾಲದಲ್ಲಿ ತತ್ವಾಭಿಮಾನಿ ದೇವತೆಗಳನ್ನು ಹೇಗೆ ಪೂಜಿಸುತ್ತವೋ ಹಾಗೆಯೇ ಸತ್ತ ನಂತರ, ಈ ಸ್ಥೂಲ ಶರೀರದಿಂದ ಈಚೆ ಬಂದ ಮೇಲೆ, ಜೀವವನ್ನು ರಕ್ಷಿಸುವ ದೇವತಾಗುಣ-ಪಿತೃಗಣ. ಈ ಪಿತೃಗಳನ್ನು ನಿಯಂತ್ರಿಸುವವರು



ವಸು ರುದ್ರ ಆದಿತ್ಯರು. ಈ ಪಿತೃದೇವತೆಗಳನ್ನು ನಮ್ಮ ಪೂರ್ವ ಜರು ತೀರಿಕೊಂಡ ದಿನದಂದು ಆರಾಧಿಸುವುದು ಸಂಪ್ರ ದಾಯ. ಇಲ್ಲಿ ಪಿತೃಗಳಿಗೆ ಪಿಂಡಪ್ರದಾನ ಮಾಡುವ ಕಾರಣ ವೇನೆಂದರೆ, ಒಂದು ವೇಳೆ ನಮ್ಮ ಹಿರಿಯರಿಗೆ ಅವರ ದಾರಿ ಯಲ್ಲಿ ಬಾಧಕವಾಗಿದ್ದರೆ, ಅದನ್ನು ಪರಿಹರಿಸಿ ಎನ್ನುವ ಪ್ರಾರ್ಥ ನೆಯೇ ಪಿಂಡಪ್ರದಾನ. 'ಪ್ರಾರಬ್ದ ಕರ್ಮದಿಂದ ಅವರನ್ನು ಕಾಪಾಡಿ' ಎನ್ನುವ ಪಿತೃ - ದೇವತೆಗಳ ಪೂಜೆ. ಇನ್ನು ಕಾಗೆ ಮುಟ್ಟುವುದು ಎಂದರೆ ಪಿತೃ ದೇವತೆಗಳು ನಮ್ಮ ಪೂಜೆಯನ್ನು ಸ್ವೀಕರಿಸಿದ ಶಕುನ ಸಂಕೇತ.

ಪ್ರಾಚೀನ ಋಷಿಗಳು - ನಮ್ಮ ಉದ್ಧಾರಕ್ಕೆ ಅನೇಕ ವಿಷಯಗಳನ್ನು ಹೇಳಿದ್ದಾರೆ. ಪುತ್ರರಿರಬೇಕು-ಅವರಿಗೆ ಸಂಸ್ಕಾರ ಕೊಟ್ಟು ದೇವತಾ - ಪಿತೃಕಾರ್ಯದಲ್ಲಿ ಅಧಿಕಾರ ಬರುವಂತೆ ಮಾಡಬೇಕು. ಅವರವರ ಯೋಗ್ಯತಾನುಸಾರ ಶಾಸ್ತ್ರವಿಧಿಯಂತೆ ಪಕ್ಷ ಮಾಸ ಆಚರಿಸಬೇಕು. ಹೆಣ್ಣು ಮಕ್ಕಳು ಪರರ ಮನೆಯ ಬೆಳಗಳು ಕುಲದಿಂದ ದೂರಾಗುವುದರಿಂದ ಗಂಡುಮಕ್ಕಳಿಗೆ ಕರ್ಮ ಭಾರ ಹೆಚ್ಚು ಅನ್ವಯ ವೇದದಲ್ಲಿ ಲಿಂಗ ವೈಷಮ್ಯ ಇಲ್ಲವೇ ಇಲ್ಲ. ಅವರವರ ಕಾರ್ಯಭಾರದಂತೆಯೇ ಜೀವನ ರೂಪಿಸಿದ್ದರು. ನಮ್ಮ ಹಿಂದಿನವರು. ಕಾಲಧರ್ಮದಿಂದ ನಾವಿಂದು ಅದನ್ನು ಉಪೇಕ್ಷೆಗೆ ತಳ್ಳಿರುವುದು ದೌರ್ಭಾಗ್ಯವಷ್ಟೇ.

ಒಂದು ಬಾರಿಯಾದರೂ ಕಾಶಿ-ಗಯಾಕ್ಕೆ ಹೋಗಿ ಮೃತ ತಂದೆತಾಯಿಯನ್ನು ಉದ್ದೇಶಿಸಿ ವಿಷ್ಣುಪಾದದಲ್ಲಿ ಪಿಂಡಪ್ರದಾನ ಮಾಡುವುದು, ಇಂಥ ಸತ್ಕಾರ್ಯದಲ್ಲಿ ತಾನೂ ತೊಡಗಿ, ಇತರರಿಗೂ ಅನುಕೂಲ ಮಾಡುವುದು. ಇಂಥವರು ಪುತ್ರರು ಎನಿಸುವರು ತಂದೆ ತಾಯಿಗಳ ಶ್ರಾದ್ಧ ಮಾಡುವ ಅಧಿಕಾರ ಪುತ್ರನಿಗೆ (ಮಗನಿಗೆ) ಮಾತ್ರ ಶುತಿ-ಸ್ಮತಿಗಳು ಅಧಿಕಾರವನ್ನು ನೀಡಿದೆ. ಪ್ರತಿಯೊಂದು ದಾನ ಕೊಡುವಾಗಲೂ, ಶಾದ್ಧದಲ್ಲಿ ಯವೋದಕ, ತಿಲೋದಕಗಳನ್ನು ಬಿಡುವಾಗಲೂ, ದತ್ತಮಾಡು

ವಾಗಲೂ, ತಾಂಬೂಲ ದಕ್ಷಿಣೆ ಕೊಡುವಾಗಲೂ 'ತುಳಸಿದಳ' ವನ್ನು ಸೇರಿಸಿಕೊಂಡೇ ಕೊಡಬೇಕು. ಪರಮಾತ್ಮನಿಗೆ ಅರ್ಪಸಿರುವ ತುಳಸಿಯ ವಾಸನೆಯಿಂದ ಮಾತ್ರವೇ ಪಿತೃ ಗಳು ಸಂತೋಷವನ್ನು ಹೊಂದುತ್ತಾರೆ. ಚಕ್ರಪಾಣಿಯಾದ ಮಹಾವಿಷ್ಣುವಿನ ಲೋಕವನ್ನು; ಮುಕ್ತಿ ಮಾರ್ಗವನ್ನು ಹೋಗಿ ಸೇರುತ್ತಾರೆ. ಶ್ರಾದ್ಧ ಕಾಲದಲ್ಲಿ ತುಳಸಿ ಯನ್ನು ಕೊಟ್ಟು, ಅದನ್ನು ತಲೆಯಲ್ಲಿ ಧರಿಸುವುದರಿಂದ ಕರ್ತೃ, ಕರ್ತೃವಿನ ತಂದೆ ಅಥವಾ ತಾಯಿ ಭೋಜನ ಮಾಡಿದವರು ಮೂವರೂ ಮುಂದೆ ವಿಷ್ಣುಲೋಕದಲ್ಲಿ ಪ್ರಕಾಶಿತರಾಗುತ್ತಾರೆ. ಶ್ರಾದ್ಧ ಕರ್ಮದಲ್ಲಿ ಬ್ರಾಹ್ಮಣರಿಗೆ ಯಾವನು ಉತ್ತಮವಾದ ಹೊಸ ವಸ್ತ್ರವನ್ನು ಕೊಡುತ್ತಾನೆಯೋ ಅವನು ನಿಶ್ಚಯವಾಗಿಯೂ ದೀರ್ಘ ಕಾಲದ ಆಯುಷ್ಯವನ್ನೂ, ಸಂಪತ್ತನ್ನೂ, ತನ್ನ ಇಷ್ಟವಾದ ಧನ ಕನಕಾದಿ ಸಕಲ ಐಶ್ವರ್ಯಗಳನ್ನೂ; ತೇಜಸ್ಸಿನಿಂದ ಕೂಡಿದ ಒಳ್ಳೆಯ ರೂಪವನ್ನೂ ಹೊಂದುತ್ತಾನೆ. ಧರ್ಮವನ್ನರಿತವನು ಎಲ್ಲ ವಿಪ್ರರನ್ನು ಶುದ್ಧಿಗೊಳಿಸುವ ಯಜ್ಞೋಪವೀತವನ್ನು ಶ್ರಾದ್ಧಕಾಲದಲ್ಲಿ ಕೊಡಬೇಕು. ಅದರಿಂದ ಸರ್ವವ್ಯಾಪ್ತಿಯಾದ ಪರಬ್ರಹ್ಮನಾದ ಶ್ರೀ ಹರಿಯನ್ನೇ ಅಂದರೆ ವಿಶ್ವದಲ್ಲಿರುವ ಎಲ್ಲ ವಸ್ತುಗಳನ್ನೂ ದಾನ ಮಾಡಿದ ಶ್ರೇಷ್ಟ ಫಲ ಉಂಟಾಗುತ್ತದೆ. ಈ ಮೇಲಿನ ಎಲ್ಲ ವಸ್ತುಗಳೂ ಗರುಡ ಪುರಾಣ, ಪದ್ಮ ಪುರಾಣ, ಮಹಾಭಾರತ- ರಾಮಾಯಣ, ನಾರದೀಯ ಪುರಾಣದಲ್ಲಿ ಉಲ್ಲೇಖಿತವಾಗಿವೆ.

ಪಿಂಡ ವಿಸರ್ಜನೆ ಮಾಡುವ ಸ್ಥಳ ಶ್ರಾದ್ಧದ ವಿಸರ್ಜಿತ ಪಿಂಡವನ್ನು ನೆಲದಲ್ಲಿ ಹೂಳಬಹುದು. ನದಿತೀರದಲ್ಲಿ ಮಾಡಿ ದಾಗ ಹರಿಯುವ ಪ್ರವಾಹದಲ್ಲಿ ಬಿಡಬಹುದು. ಗೋವುಗಳಿಗೆ ಕೊಡಬಹುದು. ಬ್ರಾಹ್ಮಣರ ಎಲೆಗೆ ಬಡಿಸಿದ ಅನ್ನವನ್ನು ನೆಲ ದಲ್ಲಿಯೇ ಹೂಳಬೇಕು. ಹಸುಗಳಿಗೆ ಕೊಡಬಾರದು. ನದಿಯಲ್ಲಿ ಹಾಕಬಾರದು. ಪಿಂಡದೊಂದಿಗೆ ಬೆರಸಬಾರದು. ಪಿಂಡದ ಜೊತೆಯಲ್ಲಿ ಭೂ ಸ್ಥಾಪನೆ ಮಾಡಬಾರದು.

ಈ ಪಕ್ಷದಲ್ಲಿ ಪಿತೃಗಳಿಗೆ ಯಾವ ವಿಧಾನವನ್ನು ಆಚರಿಸಬೇಕೆಂಬುದು ವರ್ಣಕ್ರಮಗಳನ್ನು ಆಧರಿಸಿ ಸ್ವಲ್ಪ ವಿಭಿನ್ನವಾಗಿದೆ. ಇಲ್ಲಿ ಪದ್ಧತಿಗಳ ಭೇದಗಳು ಬಹಳವಾಗಿ ಕಂಡು ಬರುವುದು. ಆದರೆ 'ಶಾಸ್ತ್ರಾತ್ ರೂಢಿಃ ಗರೀಯಸೀ' ಎಂಬ ಶಾಸ್ತ್ರವಾಕ್ಯದಂತೆ ಹಿಂದಿನಿಂದ ಆಚರಣೆ ಮಾಡಿ ಕೊಂಡು ಬಂದದನ್ನು ಬಿಡಬಾರದು. ವೇದಾಧಿಕಾರ ಇಲ್ಲದವರು ಪಿತೃ ಗಳಿಗೆ ಪ್ರಿಯವಾದ ಭಕ್ಷ್ಯಗಳನ್ನು ತಯಾರಿಸಿ ಮನೆಯ ದೇವರ ಮುಂದೆ ಬಾಳೆ ಎಲೆಗಳನ್ನು ಹರಡಿ ಅದರಲ್ಲಿ ಆ ಭಕ್ಷ್ಯಗಳನ್ನು ಬಡಿಸಬೇಕು. ಮನೆಯ ತುಂಬ ಧೂಪವನ್ನು ಹಾಕಿ ಪಿತೃಗಳನ್ನು ನೆನೆದು, ಅವರು ಈ ಎಲ್ಲ ಭಕ್ಷ್ಯ ಭೋಜ್ಯಗಳನ್ನು ಸ್ವೀಕರಿಸಿ ತಮ್ಮನ್ನು ಹರಸಬೇಕೆಂದು ಪ್ರಾರ್ಥಿಸಬೇಕು. ಯದ್ಭಾವಂ ತದ್ಭಾವಂ ತದ್ಭವತಿ ಎಂಬಂತೆ ಇದನ್ನೇ ಹಿರಿಯರಿಗೆ ಎಡೆ ನೀಡುವುದು ಎನ್ನುತ್ತಾರೆ. ಇದರಿಂದ ಪಿತೃಗಳು ತೃಪ್ತರಾಗು ತ್ತಾರೆ. ತರ್ಪಣಗಳನ್ನು ಕೊಡುವಾಗ ಯಾರ್ಯಾರಿಗೆ ಮತ್ತು ಯಾರಿಗೆ ಮೊದಲು ತರ್ಪಣ ಕೊಡಬೇಕು ಇತ್ಯಾದಿಗಳ ಬಗ್ಗೆ ಶಾಸ್ತ್ರಗಳಲ್ಲಿ ಹೀಗೆ ತಿಳಿಸಲಾಗಿದೆ.

ಕುಟುಂಬದಲ್ಲಿ ಮೃತಪಟ್ಟವರಲ್ಲಿ ಕ್ರಮವಾಗಿ ಮೊದಲು ತಂದೆ, ತಾಯಿ, ಹೆಂಡತಿ, ಅತ್ತೆ, ಮಾವ, ಮಗ, ಸಹೋದರರು, ದೊಡ್ಡಪ್ಪ, ಚಿಕ್ಕಪ್ಪ ಹಾಗೂ ಅವರ ಹೆಂಡತಿ, ತಾಯಿಯ ತಮ್ಮ ಅಥವಾ ಅಣ್ಣ, ಅವರ ಹೆಂಡತಿಯರು, ಮಗಳು, ಅಕ್ಕ, ತಂಗಿ ಹಾಗೂ ಅವರ ಮಕ್ಕಳಿಗೆ, ಭಾವ, ಮೈದುನ ಮುಂತಾದವರು ಹಾಗೂ ವಿಶೇಷವಾಗಿ ಗುರುಗಳು. ಕುಲಪುರೋಹಿತರು ಸೇರಿದಂತೆ ಯಾರು ನಮಗೆ ತಿಳಿದಂತೆ ಮೃತರಾಗಿದ್ದಾರೋ ಅವರಿಗೆ - ಹೀಗೆ ಸರ್ವರಿಗೂ ಕ್ರಮವಾಗಿ ತರ್ಪಣಗಳನ್ನು ಕೊಡಬೇಕು. ಇನ್ನೂ ಅನಾರೋಗ್ಯ ವೃದ್ಧಾಪ್ಯ ಇತ್ಯಾದಿ ಕಾರಣ ಗಳಿಂದಾಗಿ ಇಷ್ಟೆಲ್ಲ ವಿಸ್ತಾರವಾಗಿ ತರ್ಪಣಗಳನ್ನು ಮಾಡಲು ಅಶಕ್ತರಾದವರು ಸಂಕ್ಷಿಪ್ತವಾಗಿಯೂ ಆಚರಿಸಬಹುದು.

ಈ ತರ್ಪಣಾದಿಗಳನ್ನು ಆಚರಿಸುವಾಗ ಶುದ್ಧತೆಗೆ ಪ್ರಾಮುಖ್ಯತೆ ನೀಡಬೇಕು. ಈ ಸಂದರ್ಭದಲ್ಲಿ ದರ್ಭೆಗೆ ಅತ್ಯಂತ ಅವಶ್ಯಕ ಸ್ಥಾನವಿದೆ. ದರ್ಭೆಯಿಂದ ತಯಾರಿಸಿದ ಪವಿತ್ರವನ್ನು ಉಂಗುರದ ಬೆರಳಿಗೆ ಧರಿಸಿಯೇ ತರ್ಪಣಾದಿಗಳನ್ನು ಕೊಡ ಬೇಕು. ಪಿಂಡ ಹಾಕಿ ಕರ್ಮಾಂಗ ಮಾಡುವವರು ಶುದ್ಧವಾದ ಸ್ಥಳ, ವಸ್ತ್ರ, ನೀರು, ಎಳ್ಳು ಹಾಗೂ ಅಕ್ಕಿಯನ್ನು ಬಳಸಬೇಕು. ಪರಿಶುದ್ಧ ಮನಸ್ಸಿನಿಂದ ತರ್ಪಣಗಳನ್ನು ನೀಡಬೇಕು. ಮನೆ ಯಲ್ಲಿ ಹಿರಿಯರ ದಿನದ ಆಚರಣೆಯ ಸಂದರ್ಭದಲ್ಲಿ ಅವಾಚ್ಯ ಶಬ್ಧಗಳ ಬಳಕೆ, ಕೂಗುವುದು, ಕಿರುಚುವುದು ಮಾಡಬಾರದು. ಈ ಸಂದರ್ಭದಲ್ಲಿ ಘಂಟಾನಾದಕ್ಕೆ ನಿಷೇಧವಿದೆ.

ಈ ಪಕ್ಷದಲ್ಲಿ ಪಿತೃಗಳ ದಾನಗಳಿಗೆ ಮಹತ್ವವಿದೆ. ನಾವು ಕೊಡುವ ದಾನವು, ಅದನ್ನು ಪಡೆದವರು ಸಂತೋಷವಾಗಿ ಬಳಸುವಂತಿರಬೇಕು ಎಂಬುದು ಗಮನಿಸಬೇಕಾದ ಮುಖ್ಯ ಅಂಶ. ಅಶಕ್ತರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ದಕ್ಷಿಣೆ ಕೊಟ್ಟು ನಮಸ್ಕರಿಸಿದರೂ ಅದು ಶುಭಪ್ರದ.

# ಮನೋಬಲವನ್ನು ತಿಳಿದುಕೊಳ್ಳಿ

ಮೂಲ - ವೈಷ್ಣವಾಂಘ್ರಿ ಸೇವಕ್‌ದಾಸ್
ಅನುವಾದ - ಡಿ.ಎಸ್. ಭೂಮಿಕ

ಧನಬಲ ಎಲ್ಲರಿಗೂ ಗೊತ್ತಿರುವುದೇ ಹಣವಿದ್ದರೆ ಬೇಕಾಗಿರುವುದೆಲ್ಲವನ್ನು ಕೊಂಡು ಕೊಳ್ಳಬಹುದೆಂದು ಚಿಕ್ಕ ಮಕ್ಕಳಿಗೂ ಗೊತ್ತಿರುತ್ತದೆ. ಆದ್ದರಿಂದಲೇ ಹಣಬಲವನ್ನು ಹೊಂದಲಿಕ್ಕೆ, ಹಣವನ್ನು ಬೆಳಸಿಕೊಳ್ಳಲು, ಹಣಬಲದ ಕುರಿತು ಇನ್ನು ಹೆಚ್ಚಾಗಿ ತಿಳಿದು ಕೊಳ್ಳಲು ಮನುಷ್ಯನು ಸದಾ ಪ್ರಯತ್ನಿಸುತ್ತಲೇ ಇರುತ್ತಾನೆ ಧನಬಲವಿದ್ದರೆ ವಿದ್ಯಾರ್ಥಿಗಳು ವಿದೇಶಗಳಲ್ಲಿ ಓದು ಮುಂದುವರಿಸಬಹುದು. ಇಷ್ಟವಿದ್ದಷ್ಟು ಕಾಲ ಓದಬಹುದು. ಅದೇ ಇಲ್ಲದಿದ್ದರೆ ಓದನ್ನು ಮಧ್ಯದಲ್ಲೇ ನಿಲ್ಲಿಸಬೇಕಾಗಿ ಬರುತ್ತದೆ. ಅಥವಾ ನಾವು ಅಂದುಕೊಂಡಷ್ಟು ಓದಲಾಗದೇ ತುಂಡು ತುಂಡಾಗಿ ಓದನ್ನು ಬಗೆಹರಿಸಿಕೊಳ್ಳ ಬೇಕಾಗುತ್ತದೆ.ಎಷ್ಟೋ ಪ್ರಯಾಸಪಟ್ಟು ಓದಿ ಕೊಂಡವರೂ ಇದ್ದಾರೆ. ಧನ ಬಲದ ಕುರಿತು ತಿಳಿದಿರುವುದರಿಂದಲೇ, ಅದರ ಪ್ರಭಾವವನ್ನು ಪೂರ್ತಿಯಾಗಿ ಅರಿತು ಕೊಂಡಿರುವುದ ರಿಂದಲೇ, ಅದರ ಪ್ರಭಾವವನ್ನು ಪೂರ್ತಿಯಾಗಿ ಅರಿತು ಕೊಂಡಿರುವುದರಿಂದಲೇ ಪ್ರತಿಯೊಬ್ಬರೂ ಈ ಧನದಿಂದ ತುಂಬಾ ಜಾಗರೂಕರನಾಗಿರುತ್ತಾನೆ. ಧನವನ್ನು ಜಾಗ್ರತೆ ಯಿಂದ ನೋಡಿಕೊಳ್ಳುತ್ತಾನೆ.ಧನಬಲ ಹೊರಟು ಹೋಯಿ ತೆಂದರೆ ಏನೂ ಮಾಡಲಾಗುವುದಿಲ್ಲ.ಆದರೂ ದೇಹಬಲ ಕ್ಕಿಂತಲೂ,ಧನ ಬಲಕ್ಕಿಂತಲೂ, ಬುದ್ಧಿ ಬಲಕ್ಕಿಂತಲೂ ಬಲ ಶಾಲಿಯಾದುದೊಂದಿದೆ. ಅದೇ ಮನೋಬಲ. ಇದರ ಕುರಿತು ಸಾಮಾನ್ಯವಾಗಿ ಯಾರಿಗೂ ತಿಳಿಯದು.

ಪ್ರಪಂಚದಲ್ಲಿ ಎಷ್ಟೋ ಅದ್ಭುತಗಳನ್ನು ಸಾಧಿಸಿ, ತಮ್ಮ ಹೆಸರು ಚರಿತ್ರೆಯಲ್ಲಿ ಸ್ಥಿರ ಸ್ಥಾಯಿಯಾಗಿ ನಿಲ್ಲುವಂತೆ ಮಾಡಿ ಕೊಂಡ ಮಹನೀಯರು ತಿಳಿದೋ ತಿಳಿಯದೋ ಮನೋ ಬಲವೆಂಬುದನ್ನು ಅರ್ಥಮಾಡಿಕೊಂಡಿರುವರೆಂದು ತಪ್ಪದೇ ತಿಳಿದುಕೊಳ್ಳಬೇಕು. ಆದ್ದರಿಂದಲೇ ಭಗವದ್ಗೀತೆ ಮನೋ ಬಲದ ಕುರಿತು ಹೇಳುವುದರೊಂದಿಗೇ ಆರಂಭಗೊಳ್ಳುತ್ತದೆ. ಆದ್ದರಿಂದಲೇ ಭಗವದ್ಗೀತೆ ಆತ್ಮದ ಬಗ್ಗೆ ಹೇಳುತ್ತಿದೆಯೆಂದರೆ ಯಾವುದೋ ತತ್ತ್ವೋಪದೇಶ ಮಾಡುತ್ತಿದೆಯೆಂದರ್ಥವಲ್ಲ. ನಿನ್ನಲ್ಲಿರುವ ಅಪಾರವಾದ ಆತ್ಮಬಲದ ಬಗ್ಗೆ ನಿನಗೆ ತಿಳಿಸುವ ಅಪೂರ್ವವಾದ ವರವನ್ನು ನಿನಗೆ ಕೊಡುತ್ತಿದೆ ಎಂದರ್ಥ. ಇದಕ್ಕೆ ಶಾಸ್ತ್ರಗಳಲ್ಲಿ ಒಂದು ಕಥೆಯೂ ಉಂಟು.ಒಂದು ಬಾರಿ ಒಬ್ಬ ಜ್ಯೋತಿಷಿ ಒಬ್ಬ ದರಿದ್ರನ ಮನೆಗೆ ಹೋಗಿ ಆತನ ದೀನ ಸ್ಥಿತಿಯನ್ನು ಕಂಡು ಅದಕ್ಕೆ ಕಾರಣವನ್ನು ತಿಳಿಸಿದ್ದಾನೆ. ವಾಸ್ತವದಲ್ಲಿ ಆತನಿಗೆ ವಾರ ಸತ್ವವಾಗಿ ಎಷ್ಟೋ ಧನ ಬಂದಿದೆ ಯೊಂದೂ, ಆತನ ತಂದೆ ಅದರ ಬಗ್ಗೆ ಆತನಿಗೆ ಏನನ್ನು ಹೇಳದೇ ಸತ್ತು ಹೋಗಿದ್ದಾನೆಂದೂ ಆ ಜ್ಯೋತಿಷಿಯು ಹೇಳಿದ್ದಾನೆ. ಅಲ್ಲದೇ ಜ್ಯೋತಿಷಿಯು "ಆ ಸಂಪತ್ತೆಲ್ಲಾ ಇಲ್ಲೇ ಇದೆ. ನೀನು ದಕ್ಷಿಣಕ್ಕೆ ಹೋದರೆ ಜೇನುನೊಣಗಳು, ಹುಳ ಹುಪ್ಪಡಿಗಳು ಕಡಿದು ಸಾಯಿಸುತ್ತವೆ. ಪಶ್ಚಿಮಕ್ಕೆ ತೆರಳಿದರೆ ಅಲ್ಲಿ ಒಂದು ದೊಡ್ಡ ದೆವ್ವ ನಿನ್ನ ಕಾರ್ಯಕ್ಕೆ ಅಡ್ಡಿಯುಂಟು ಮಾಡುತ್ತದೆ. ಇನ್ನು ಉತ್ತರಕ್ಕೆ ತೆರಳಿದರೆ ಅಲ್ಲಿರುವ ದೊಡ್ಡ ಸರ್ಪವು ನಿನ್ನನ್ನು ಅಲ್ಲೇ ಕಡಿದು ಸಾಯಿಸಿಬಿಡುತ್ತದೆ. ಆದರೆ ಪೂರ್ವಕ್ಕೆ ತೆರಳಿ ದರೆ ಮಾತ್ರ ನಿನಗೆ ನಿಧಿಯು ಕೈಗೆಟ್ಟುಕುತ್ತದೆ" ಎಂದಿದ್ದಾನೆ. ಅಂದರೆ ಧನ ಎಲ್ಲಿ ದೊರೆಯುವುದೆಂಬ ಸುದ್ದಿ ತಿಳಿದರೆ ದರಿದ್ರನು ಆ ಮಾರ್ಗಕ್ಕೆ ತೆರಳುವ ಅವಕಾಶಗಳು ಬಹಳ. ಹಾಗೆಯೇ ಶ್ರೀಮದ್ಭಗವದ್ಗೀತೆ ಆತ್ಮಬಲವನ್ನು ಹೊಂದುವ, ಆತ್ಮಬಲದ ಕುರಿತು ವಿವರುಗಳನ್ನು ತಿಳಿಸಿದೆ. ಅಂದರೆ ಎಲ್ಲರೂ ಅದನ್ನು ತಾತ್ವಿಕ ಉಪದೇಶವನ್ನಾಗಿ ಸ್ವೀಕರಿಸಿದ್ದಾರೆ ಅದಕ್ಕಾಗಿಯೇ ಪ್ರತಿಯೊಬ್ಬರ ಸಂಪತ್ತು ಅವರ ವರಿಗೆ ದಕ್ಕದೇ ಹೋಗಿದೆ.ಅಂದರೆ ಧನವಿರುವ ದರಿದ್ರ ರಾಗಿಯೇ ಉಳಿದಿದ್ದಾರೆ.



"ಆತ್ಮವು ಯಾವುದೇ ಆಯುಧದಿಂದ ತುಂಡಾಗ ಲಾರದು, ಅಗ್ನಿಯಿಂದ ಸುಡಲಾಗದು. ನೀರಿನಿಂದ ತೋಯ ಲಾರದು, ವಾಯುವಿನಿಂದ ಆರಿಹೋಗದು" (ಭಗವದ್ಗೀತೆ 2.23)

"ಆತ್ಮ ಬೇಧಿಸಲಾರದ್ದು, ಕರಗಿಹೋಗಲಾರದ್ದು, ದಹಿಸಲಾರದ್ದು, ಬತ್ತಿಸಲಾರದ್ದು, ಅದು ನಿತ್ಯವಾದುದು, ಸರ್ವತ್ರ ಇರುವಂತುಹುದು. ಬದಲಾಗದ್ದು, ಕದಲರಾರದ್ದು, ಸನಾತನವಾದುದ್ದು " (ಭಗವದ್ಗೀತೆ 2.24)

ಈ ವಿಧವಾಗಿ ಗೀತಾಚಾರ್ಯರು ಆತ್ಮದ ಮಹಿಮೆಯನ್ನು ತಿಳಿಸಿಕೊಟ್ಟಿದ್ದಾರೆ. ಮನುಷ್ಯ ಸತ್ತನೊಡನೆ ಎಲ್ಲರೂ ಅಳುತ್ತಾರೆ.ಆತ್ಮ ಈ ಶರೀರದಿಂದ ಆತ್ಮ ಹೊರಟು ಹೋಗಿದೆ. ಎಂದು ಎಲ್ಲರೂ ಅನುತ್ತಾರೆ. ಅಂದರೆ ಶರೀರದಿಂದ ಆತ್ಮ ಹೊರಟು ಹೋಗುತ್ತಲೇ ಅಳು ಬರುತ್ತದೆ. ಅಂದರೆ ಶರೀರದಲ್ಲಿ ಆತ್ಮವಿರುವಾಗ ಆನಂದವಿರುತ್ತದೆಯೇ? ಖಂಡಿತಾ ಇಲ್ಲ. ಏಕೆಂದರೆ ಅದು ಹೊರಟು ಹೋದ ನಂತರವೇ ಅದರ ಉಪಸ್ಥಿತಿ ತಿಳಿದುಬರುತ್ತದೆ. ಹಾಗೆಯೇ ಧನ ನಷ್ಟವಾದಗಲೇ ಅದರ ಬೆಲೆ ನಮಗೆ ತಿಳಿಯುವುದು. ನಿಜದಲ್ಲಿ ನಮಗೆ ಕಾಣಸಿಗುವ ದೇಹಬಲ, ಮನೋಬಲ, ಬುದ್ಧಿ ಬಲ ಕೇವಲ ನಮ್ಮ ಮನೋಬಲದ ಶೇಕಡ 10 ರಷ್ಟು ಮಾತ್ರವೇ ಉಳಿದ 90 ಶೇಕಡ ಆತ್ಮಬಲಕ್ಕೆ ಹೊಂದಿಕೊಂಡೇ ಇರುತ್ತದೆ. ಅದು ಮನುಷ್ಯನಿಗೆ ದೊರಕಲಾರದೇ ಹೋಗುತ್ತದೆ. ಆತ್ಮಬಲವನ್ನು ಗುರುತಿಸುವುದಾದರೂ ಹೇಗೆ ಎನ್ನುವುದೇ ನಮಗೀಗ ಉಂಟಾಗುವ ಪ್ರಶ್ನೆ? ಮನಸ್ಸಿಗೆ ಬರುವ ಅನುಮಾನಗಳು, ಬುದ್ಧಿಗಿರುವ ಪರಿಮಿತವಾದ ಆಲೋಚನೆಗಳನ್ನು ಬಿಟ್ಟು ಬಿಟ್ಟು ಆತ್ಮ ಸ್ವರೂಪದಿಂದ ನಮಗೆ ಅಗತ್ಯವಿರುವುದೇನೆಂದು ನಿರ್ಣಯಿಸಿಕೊಂಡು, ಅದನ್ನು ಸಾಧಿಸಬೇಕೆಂದೇ ತೀವ್ರವಾದ ತಪಸ್ಸನ್ನು ಬೆಳೆಸಿಕೊಳ್ಳುವುದೇ ಆತ್ಮ ಬಲವನ್ನು ಜಾಗೃತಗೊಳಿಸಿಕೊಳ್ಳುವ ಏಕೈಕ ಮಾರ್ಗ ಭೂಮಿಯಲ್ಲಿ ಬೀಜವನ್ನು ಬಿತ್ತಿ, ಅದಕ್ಕೆ ಸರಿಯಾಗಿ ನೀರು ಹಾಕಿದರೆ ಮಾತ್ರ ದಿನಗಳೆದಂತೆ ಮೊಳಕೆ ತಪ್ಪದೇ ಕಾಣಿಸಿಕೊಳ್ಳುತ್ತದೆ. ಭೂಮಿ ಆತ್ಮದಂತೆ. ಅದು ಚೈತನ್ಯದಲ್ಲಿ ನೆಲೆಗೊಂಡಿದೆ. ಯಾವಾಗ ತೀವ್ರವಾದ ಸಂಕಲ್ಪದಿಂದ ಒಂದು ಲಕ್ಷ್ಯವನ್ನು ಇರಿಸಿ ಕೊಂಡು ಯಾವುದೇ ಸಂದೇಹವಿರಿಸಿಕೊಳ್ಳದೇ. ಇರುತ್ತೇವ್ರೋ, ಯಾವಾಗ ಅವಶ್ಯವಾದ ಕಾರ್ಯಗಳನ್ನು ಮಾಡುತ್ತೇವೆಯೋ ಆಗ ಆತ್ಮಬಲ ಜಾಗೃತಕೊಂಡು ಛಾಂಧಿ ತಲಕ್ಷ್ಯ ತಪ್ಪದೇ ನೆರವೇರುತ್ತದೆ. ಈ ಕಾರ್ಯದ ಸಕ್ರಮವನ್ನು ಚಿಕ್ಕ ಚಿಕ್ಕ ಗುರಿಗಳಿಗೆ ಮೊದಲುಗೊಂಡು ವಿಜಯವನ್ನು ಸಾಧಿಸಿ ನಂತರ ದೊಡ್ಡ ದೊಡ್ಡ ಗುರಿ ಸಾಧನೆಗಳಲ್ಲಿ ಆತ್ಮಬಲ ಮಹತ್ತರವಾಗಿ ಜಾಗೃತಗೊಳ್ಳುತ್ತದೆ. ಗೀತೆಯು ನಮಗೆ ಪ್ರಸಾದಿಸುವ ಅದ್ವಿತೀಯವಾದ ವರವೇ ಈ ಆತ್ಮಬಲ.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಾಪನೆ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ 0877 - 2264543 ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk@tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು



# ಆರೋಗ್ಯಕ್ಕೆ ಪ್ರಕೃತಿಯ ದೇಣಿಗೆ ಹುಣಸೇ ಹಣ್ಣು

ಮೂಲ. ಡಾ।। ಸಿ. ಮಧುಸೂದನ ಶರ್ಮ

- ಅನುವಾದ : ಶ್ರೀಮತಿ.

ಭಗವದತ್ತವಾದ ಷಡ್ರಸಗಳಿಂದ ಕೂಡಿದ ಷಡ್ರಸೋಪೇತ ವಾದ ಆಹಾರವನ್ನು ನಾವು ಭುಂಜಿಸುವುದರ ಮೂಲಕ ನಮಗದು ಶಕ್ತಿಯನ್ನು ಕೊಡುವುದೊಂದೇ ಅಲ್ಲದೇ ನಮ್ಮ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವನ್ನು ಸಂರಕ್ಷಣೆ ಮಾಡುತ್ತದೆ.

ಪ್ರತಿನಿತ್ಯ ನಮ್ಮ ಆಹಾರಗಳಲ್ಲಿ, ಅಡುಗೆಗಳಲ್ಲಿ ಬಳಸುವ ಈ ಹುಣಸೇಹಣ್ಣು ಆಮ್ಲರಸ ಅಂದರೆ ಹುಳಿ ಪ್ರಧಾನವಾಗಿರುವುದೆಂಬ ವಿಷಯವು ನಮಗೆಲ್ಲಾ ವಿಹಿತವಾದದ್ದೇ. ಈ ಹುಣಸೇಹಣ್ಣು ಭಗ ವಂತನು ವಿವಿಧ ಬಗೆಯ ರೋಗ ನಿವಾರಣೆ ಹಾಗೂ ರೋಗ ನಿರೋಧ ಕವಾದ ಅತ್ಯಂತ ಅದ್ಭುತವಾದ ಔಷಧ ರಸಾಯನಿಕ ಪದಾರ್ಥಗಳನ್ನು ನಿಕ್ಷೇಪಿಸಿ ಮಾನವತೆಗೆ ನೀಡಿದ್ದಾನೆ.

ಸಂಸ್ಕೃತದಲ್ಲಿ ಆಮ್ಲೀಕವೆಂದೂ ಇಂಗ್ಲೀಷಿನಲ್ಲಿ ಟಾಮರಿಂಡ್ ಎಂದೂ ಹಿಂದಿಯಲ್ಲಿ ಇಮಲೀ ಎಂದು ವ್ಯವಹರಿಸಲ್ಪಡುವ ಈ ಹುಣಸೇಹಣ್ಣಿನ ಶಾಸ್ತ್ರೀಯ ನಾಮಧೇಯ ಡಾಮರಿಂಡಸ್ ಇಂಡಿಕಾ. ಇದು ಸಿಸಾಲ್ಪಿನೇಸಿಯೆಂಬ ಮರದ ಕುಟುಂಬಕ್ಕೆ ಸೇರಿದೆ.

ಹುಣಸೇ ಹುಣ್ಣಿನಲ್ಲಿ ಪೊಟ್ಯಾಷಿಯಂ ಬೈ ಕಾರ್ಬೋನೇಟ್, ಟಾರ್ಟಾರಿಕ್ ಆಸಿಡ್ ಪುಷ್ಕಳವಾಗಿರುವುದರಿಂದ ಮೂತ್ರ ವಿಸರ್ಜನಾ ವ್ಯವಸ್ಥೆಯಲ್ಲಿ ಕಲ್ಲುಗಳುಂಟಾಗುವ ಹಾಗೂ ಉಂಟಾದ ಕಲ್ಲುಗಳ ಪ್ರಮಾಣ ಕಡಿಮೆ ಮಾಡುವಲ್ಲಿ ಹುಣಸೇಹಣ್ಣು ಬಹಳಾ ಪರಿಣಾಮ ಕಾರಿಯಾಗುವುದೆಂದು ಹೈದರಾಬಾದಿನಲ್ಲಿರುವ ಜಾತೀಯ ಪೋಷಕ ಆಹಾರ ಸಂಸ್ಥೆಯವರು ತಮ್ಮ ಸಂಶೋಧನೆಗಳಿಂದ ತಿಳಿಯ ಪಡಿಸಿ ದ್ದಾರೆ.

ಫ್ಲೋರೈಡ್ ಅಂಶವು ಇದರಲ್ಲಿ ಅಧಿಕವಾಗಿರುವುದರಿಂದ ಆಹಾರಗಳಿಂದುಂಟಾಗುವ ಭಯಂಕರವಾದ ವ್ಯಾಧಿಗಳಿಂದ ರಕ್ಷಣೆ ನೀಡುವಲ್ಲಿ ಹುಣಸೇ ಹಣ್ಣು ಪ್ರಧಾನ ಪಾತ್ರವಹಿಸುತ್ತದೆಂದು ವೈದ್ಯ ಗಣ್ಯರ ಅಭಿಪ್ರಾಯ.

ದೈನಂದಿನ ಜೀವನದಲ್ಲಿ ನಮಗೆ ಎದರಾಗುವ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಹುಣಸೇಹಣ್ಣನ್ನು ಯಾವ ರೀತಿ ಔಷಧಿಯಾಗಿ ಸದ್ವಿನಿಯೋಗ ಮಾಡಿಕೊಂಡು ಆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದೆಂದು ಪ್ರಸ್ತುತ ತಿಳಿದು ಕೊಳ್ಳೋಣ.

### ಪೈತ್ಯದ ದುರಿತಕ್ಕೆ

ಹುಣಸೇಹಣ್ಣನ್ನು ಸ್ವಲ್ಪವೇ ನೀರಿನಲ್ಲಿ ತೋಯಿಸಿ ಗಾಯದ ಮೇಲಿಡಬೇಕು.

ಚೇಳು, ಜೇನು ನೊಣಗಳು, ಇತರೆ ವಿಷಕೀಟ ಗಳು ಕಡಿದಲ್ಲಿ ಸಹಾ ಇದೇ ರೀತಿಯಲ್ಲಿ ಮಾಡಿದರೆ ಅದರಿಂದುಂಟಾಗುವ ಉರಿ, ನೋವು, ಸೆಳೆತ, ನವೆ, ಕೆರೆತಗಳು ಕಡಿಮೆಯಾಗುತ್ತವೆ.

### ಬೇಸಿಗೆಯ ತಾಪದ ನಿವಾರಣೆಗೆ

ದಿನವೂ ಒಂದು ಬಾರಿ 100 ಮಿ.ಲೀ. ನೀರಿನಲ್ಲಿ 10 ಗ್ರಾಂ ಹುಣಸೇಹಣ್ಣು, ಹಾಕಿ ಒಂದು ತಾಸು ನೆನೆಸಿ, ಹಿಸುಕಿ ಆ ನೀರನ್ನು ಶೋಧಿಸಿ ಒಂದು ನಾಲ್ಕು ಎಳಸಿನ ನಾಲ್ಕು ಬೀಜಗಳನ್ನು ಕುಟ್ಟಿ ಪುಡಿ ಮಾಡಿ ಹಾಕಿ, ಒಂದು ಟೀ ಸ್ಪೂನ್ ಬೆಲ್ಲ ಕಲಿಸಿ ಕರಗಿಸಿ ಸೇವಿಸುತ್ತಿರಬೇಕು.

### ಹುಣಸೇ ಗೊಜ್ಜಿನಿಂದ

ಹುಣಸೇಹಣ್ಣನ್ನು ತಕ್ಕಷ್ಟು ಬಿಸಿ ನೀರಿನಲ್ಲಿ ಹಾಕಿ ಸ್ವಲ್ಪಡಿ ಹೊತ್ತು ನೆನೆಸಿ ಮಿಕ್ಸಿಯಲ್ಲಿ ಹಾಕಿ ಪೇಸ್ಟಿನಂತೆ ಮಾಡಿ ವಿವಿಧ ವ್ಯಾಧಿಗಳಿಗೆ ಉಪ ಯೋಗಿಸಬಹುದು.

- 3 ತಿಂಗಳಗಳವರೆಗೆ ಪ್ರತಿ ತಿಂಗಳು ಮುಟ್ಟು ಕಾಣುತ್ತಲೇ ಗುಲಗಂಜಿಯಷ್ಟು ಪೇಸ್ಟನಲ್ಲಿ ಮೆಣಸಿನ

ರಾಳಷ್ಟು ಸುಣ್ಣವನ್ನು ಹುದುಗಿಸಿ ನುಂಗಿ ಮೂರು ದಿನಗಳೂ ಪೌಷ್ಠಿಕವಾದ ಆಹಾರವನ್ನು ತಿನ್ನುವುದರಿಂದ ಮುಟ್ಟಿನ ನೋವು ಮಾಯಾವಾಗುತ್ತದೆ.

ಈ ಪೇಸ್ಟ್‌ನಲ್ಲಿ ಕೊಂಚ ಬೆಲ್ಲ ಕಾಲಂ ಭಾಗ ಅರಶಿನ ಪುಡಿ, ಕಲಿಸಿ ಒಂದು ತಾಸು ಬಿಟ್ಟು ತೊಳೆಯುವುದರಿಂದ ಸೊಂಟನೋವು ಮೊಣಕಾಲು ನೋವು, ಬೆನ್ನು ನೋವುಗಳು ಮಾಯಾವಾಗುತ್ತವೆ.

ಈ ಪೇಸ್ಟಿನಲ್ಲಿ ತಕ್ಕಷ್ಟು ನಿಂಬೆರಸ, ಜೇನು ಕಲಿ, ಹೆಚ್ಚು ಒಂದರ್ಧ ತಾಸು ಬಿಟ್ಟು ತೊಳೆಯುವುದರಿಂದ ಮುಖದ ಮೇಲೆ ಬರುವ ಕಲಿಮೆಚ್ಚೆಗಳು, ಬಿಳಿ ಮಚ್ಚೆಗಳು ತಗ್ಗಿ ಹೋಗುತ್ತವೆ.

**ಹಸಿರು ಕಾಮಿಣಿಗೆ**

ರಾತ್ರಿ ಹೊತ್ತು 60 ಮಿ.ಲೀ. ನೀಲಿನಲ್ಲಿ 10 ಗ್ರಾಂ ಹುಣಸೇ ಹಣ್ಣು 2 ಕೆ.ಜಿ. ಸುಣ್ಣವನ್ನು ಕಲಿಸಿ ಮುಂಜಾನೆ ಅದನ್ನು ಶೋಧಿಸಿ ಅದಲಿಂದ ಬಂದ ನೀರನ್ನು ಸೇವಿಸುತ್ತಾ ಮಜ್ಜಿಗೆ ಮತ್ತಿತರ ದ್ರವ ಪದಾರ್ಥಗಳನ್ನು ಹೆಚ್ಚಾಗಿ ಬಳಸುತ್ತಾ ಪದ್ಯದಲ್ಲಿದ್ದರೆ ಬಾಯಲ್ಲಿ ನೀರೂರುವುದು, ವಾಂತಿ ಬಂದಂತಾಗುವುದು, ಮುಂತಾದ ಸಮಸ್ಯೆಗಳು ತಗ್ಗುವುದಲ್ಲದೇ ಜಠರಾಗ್ನಿ ಚೇತನಗೊಂಡು,ಅಗ್ನಿದೀಪ್ತಿ ಬೆಳಗಿ ಹಸಿವು ಇಮ್ಮಡಿಸುತ್ತದೆ. ಹಸಿರು ಕಾಮಿಣಿ ಶೀಘ್ರ ಗುಣಮುಖವಾಗುತ್ತದೆ.

**ಹುಣಸೇ ಬೀಜದಿಂದ**

**ನವೆಗೆ:** ಹುಣಸೇ ಬೀಜವನ್ನು ನಿಂಬೆರಸದೊಂದಿಗೆ ತೇದು ಆ ಗಂಧವನ್ನು ನವೆಯಿರುವ ಭಾಗಕ್ಕೆ ಲೇಪನ ಮಾಡುತ್ತಿದ್ದರೆ ಶೀಘ್ರದಲ್ಲೇ ಗುಣವಾಗುತ್ತದೆ.

ಹುಣಸೇ ಬೀಜಗಳನ್ನು ಒಂದು ಬಾಣಲೆಯಲ್ಲಿ ಹಾಕಿ ಒಂದು ರಾತ್ರಿಯೆಲ್ಲಾ ನೆನೆಸಿ ಮೆತ್ತಗೆ ಹಿಸುಕಿದರೆ ಮೇಲಿನ ತೊಗಟೆ ಹೊರಟು ಹೋಗುತ್ತದೆ.ಒಳಗಿರುವ ಬೀಜವನ್ನು ಚೆನ್ನಾಗಿ ಒಣಗಿಸಿ ಅದನ್ನು ತಲಿತಲಿಯಾಗಿ ಪುಡಿ ಮಾಡಿಟ್ಟುಕೊಳ್ಳಬೇಕು.ಈ ಹುಣಸೇ ಬೀಜದ ಪುಡಿ ಆಯುರ್ವೇದ ವಿಕ್ರಯಾಲಯಗಳನ್ನು ಕಡಿಮೆ ದರಕ್ಕೆ ದೊರೆಯುತ್ತದೆ.

**ಹೊಟ್ಟೆಯುಬ್ಬರ,ಉರಿ ಕ್ರಮಿಸಲು:** 25 ಗ್ರಾಂ ಹುಣಸೇ ಬೀಜದ ಪುಡಿ,25 ಗ್ರಾಂ ಜೀಲಿಗೆಯನ್ನು ಹಾಕಿದ ಪುಡಿ, 25 ಗ್ರಾಂ ಕಲ್ಲುಸಕ್ಕರೆ ಕಲಿಸಿಟ್ಟುಕೊಂಡು ದಿನವೂ 3 ಬಾಲಿ ಬಾಲಿಯೊಂದಕ್ಕೆ 1-2 ಗ್ರಾಂ ಪುಡಿಯನ್ನು 50-100 ಗ್ರಾಂ ಮಿ.ಲೀ. ನೀಲಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ದುಬ್ಬರ, ಹೊಟ್ಟೆ ಉಲಿತದ ಸಮಸ್ಯೆ ತಗ್ಗುತ್ತದೆ.

**ಮಲದ್ವಾರದ ಜಾರುವಿಕೆಗೆ:** ನಿತ್ಯ ರಾತ್ರಿಯ ಸಮಯ ಹುಣಸೇ ಬೀಜದ ಪುಡಿಯನ್ನು ತಕ್ಕಷ್ಟು ನೀರು ಹಾಕಿ ಪೇಸ್ಟಿನಂತೆ ಮಾಡಿ ಮಲದ್ವಾರದ ಸುತ್ತಿ ಲೇಪಿಸಿ ಬ್ಯಾಂಡೇಜಿನ ಪಟ್ಟೆ ಕಟ್ಟುವುದರಿಂದ ಗಂಧ ಸೀಳುಗಳು ಮುಚ್ಚಿ ಹೋಗಿ ಸಮಸ್ಯೆ ಶಮನಗೊಳ್ಳುತ್ತದೆ.

ಇದೇ ಔಷಧಿಯನ್ನು ಸ್ತ್ರೀಯರ ಗರ್ಭಚೀಲ ಜಾರುವ ಪ್ರಾಥಮಿಕ ಹಂತದಲ್ಲಿರುವಾಗ ಬಳಸಿದರೆ ಶೀಘ್ರಗುಣ ಹೊಂದಬಹುದು.

**ಬಿಳಿಸೆರಗಿಗೆ:** ದಿನವೂ ಬೆಳಗ್ಗೆ, ಸಾಯಂಕಾಲ ಆಹಾರ ಸೇವನೆಯ ಅರ್ಧಗಂಟೆ ಮೊದಲು 2-3 ಗ್ರಾಂ ಹುಣಸೇ ಬೀಜದ ಪುಡಿಯನ್ನು 100 ಮಿ.ಲೀ. ಅಕ್ಕಿ ತೊಳೆದ ನೀಲಿ ನೊಂದಿಗೆ ಸೇವಿಸುತ್ತಿದ್ದರೆ ಸ್ತ್ರೀಯಲಿಗೆ ಸಂಬಂಧಿಸಿದ ಈ ಸಮಸ್ಯೆಗೆ ಉತ್ತಮ ಪಲಿಹಾರ ದೊರಕುತ್ತದೆ.

**ಮೊಣಕಾಲು ನೋವಿಗೆ:** 100 ಗ್ರಾಂ ಹುಣಸೇಬೀಜದ ಪುಡಿ, 100 ಗ್ರಾಂ ಅಚ್ಚುಬೆಲ್ಲ ಪುಡಿಯನ್ನು ಕಲಿಸಿಟ್ಟುಕೊಂಡು ದಿನವೂ ಒಂದೆರಡು ಬಾಲಿ ಬಾಲಿಯೊಂದಕ್ಕೆ 2-3 ಗ್ರಾಂ ಪುಡಿಯನ್ನು 100 ಮಿ.ಲೀ. ಉಗುರು ಬೆಚ್ಚಗಿನ ಹಾಲಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಉತ್ತಮ ಪ್ರಯೋಜನ ದೊರಕುತ್ತದೆ.



## ಮಾತೃಶ್ರೀ ತರಿಗೊಂಡ ವೆಂಗಮಾಂಬ ನಿತ್ಯಾನ್ನ ಪ್ರಸಾದ ಭವನ

**ಸ್ವಾಮಿಯ ಆಲಯದ ಈಶಾನ್ಯಕ್ಕೆ ಮೂಲೆಯ ಸರಿಯಾಗಿ ಮೂರಂತಸ್ತಿನ ವಿಶಾಲವಾದ ಎತ್ತರವಾದ ಪ್ರಸಾದ ವಿತರಣ ಭವನ ಭಕ್ತರಿಗೆ ಕಂಡು ಬರುತ್ತದೆ. ಇದೇ "ಮಾತೃಶ್ರೀ ತರಿಗೊಂಡ ವೆಂಗಮಾಂಬ ನಿತ್ಯಾನ್ನ ಪ್ರಸಾದ ಭವನ" ಈ ಭವನದಲ್ಲಿ ಭಕ್ತರಿಗೆ ಬೆಳಗ್ಗೆ 7 ಗಂಟೆಯಿಂದ 11 ರ ವರೆಗೆ ಅನ್ನಪ್ರಸಾದ ವಿತರಣೆ ನಡೆಯುತ್ತದೆ. ಭಕ್ತಾದಿಗಳು ಈ ಭವನಕ್ಕೆ ಭೇಟಿ ನೀಡಿ ಅಲ್ಲಿ ಸಾವಿರಾರು ಮಂದಿ ಭಕ್ತರಿಗೆ ವಿತರಣೆಯಾಗುವ ಪ್ರಸಾದ ವಿತಾರಣಾ ಮಹಾಯಜ್ಞವನ್ನು ಕಾಣಬಹುದು. ತಾವೂ ಪ್ರಸಾದವನ್ನು ಸ್ವೀಕರಿಸಬಹುದು.**

**ಹಿಂದೆ ಇದೇ ಸ್ಥಳದಲ್ಲಿ ಮಾತೃಶ್ರೀ ತರಿಗೊಂಡ ವೆಂಗಮಾಂಬಯವರು ತಿರುಮಲೆಯ ಭಕ್ತರಿಗೆ ನಿತ್ಯ ಅನ್ನದಾನವನ್ನು ಮಾಡುವವರೆಂದೂ, ಆದ್ದರಿಂದಲೇ ಅದೇ ಜಾಗದಲ್ಲಿ ಆಕೆಯ ಹೆಸರಿನಲ್ಲಿ ಈ ಅನ್ನಪ್ರಸಾದ ಭವನವು ನೆಲೆಗೊಂಡಿದೆ. ಈ ಭವನದಲ್ಲಿ ನಿತ್ಯವೂ ನಡೆಯುವ ಅನ್ನಪ್ರಸಾದ ವಿತರಣೆಗೆ ಸಂಬಂಧಿಸಿದ ಆ ಅನ್ನದಾತರೆಲ್ಲರೂ ಆನಂದನಿಲಯನನ್ನು ದರ್ಶಿಸಿ ಆನಂದದಿಂದ ಇರಬೇಕೆಂದು ಹಾರೈಸೋಣ.**

## ನಮ್ಮ ದೇವಾಲಯ

# ಶ್ರೀ ಆದಿವರಾಹ ಗೋವಿಂದ

- ಮೂಲ: ಮುದ್ದು ಕೃಷ್ಣಯ್ಯ
- ಅನುವಾದ: ಶ್ರೀಮತಿ. ಗೀತಾ


ವೈಕುಂಠವನ್ನು ತೊರೆದು ಶ್ರೀನಿವಾಸನು ಅಡವಿಯ ಒಂದು ಪೊದೆಯಲ್ಲಿ ತಲೆಮರೆಸಿಕೊಂಡಿದ್ದಾನೆ.ಆದರೆ ಒಂದು ದಿನ ಪೊದೆಯಿಂದ ಹೊರಬಂದು ವಿಹಾರ ಮಾಡುತ್ತಿದ್ದಾನೆ. ಆ ಸಮಯದಲ್ಲಿ ದೂರದಲ್ಲಿ ವರಾಹಸ್ವಾಮಿ ತನ್ನ ಪರಿವಾರ ದೊಂದಿಗೆ ಬರುವುದನ್ನು ನೋಡಿದ್ದಾನೆ.ಕಂಡೊಡನೆ ಭಯ ಗೊಂಡು ಪೊದೆಯೊಳಕ್ಕೆ ಸೇರಿಕೊಂಡಿದ್ದಾನೆ.

ವರಾಹಸ್ವಾಮಿಯೂ ಸಹ ಶ್ರೀಮನ್ನಾರಾಯಣನೇ. ಎರಡು ಅವತಾರಗಳನ್ನೆತ್ತಿ ಇಲ್ಲಿಯ ವೇಂಕಟಾಚಲದಲ್ಲೇ ಇದ್ದಾನೆ.ವರಾಹಸ್ವಾಮಿ ಸಮುದ್ರದಲ್ಲಿರುವ ದೈತ್ಯನಿಂದ ಭೂಮಿ ಯನ್ನು ರಕ್ಷಿಸಿ ನಂತರ ಈ ಪರ್ವತದ ಮೇಲೆ ತನ್ನ ನಿವಾಸ ವನ್ನು ನಿರ್ಮಿಸಿಕೊಂಡಿದ್ದಾನೆ. ಆದ್ದರಿಂದಲೇ ಈ ಪರ್ವತಕ್ಕೆ 'ವರಾಹಾಚಲ' ವೆಂದು ನಾಮಧೇಯ. ದ್ವಿದಳ ದವಸ ಧಾನ್ಯ ಗಳನ್ನು ಅಪಹರಿಸಲು ಬಂದ ದೈತ್ಯರನ್ನು ಸಂಹರಿಸಿ, ತಿರುಗಿ ತನ್ನ ನಿವಾಸಕ್ಕೆ ತೆರಳುತ್ತಿದ್ದಾನೆ.

ಆಗ ನೋಡಿದ ಶ್ರೀನಿವಾಸನನ್ನು ಪೊದೆಯಿಂದ ಹೊರ ಬರುವಂತೆ ವರಾಹನು ಕರೆದಿದ್ದಾನೆ. ಆಗ ಬಯಲಿಗೆ ಬಂದ ಶ್ರೀನಿವಾಸನು ಈ ಎರಡೂ ಭಗವದ್ರೂಪಗಳ ಸಮಾಗಮ ಮಹಾ ವಿಶೇಷವೇ ಸರಿ.ಒಬ್ಬ ವ್ಯಕ್ತಿ ಎರಡು ರೂಪಗಳಲ್ಲಿ ಬಂದು ಒಂದೇ ಪ್ರದೇಶದಲ್ಲಿ ಕಲೆತದ್ದು, ಪ್ರಶ್ನೋತ್ತರಗಳಿಂದ ಸಂಭಾಷಿಸಿದ್ದು ಮತ್ತೊಂದು ಮಹಾವಿಶೇಷ. ಆಗ ವರಾಹ ದೇವನನ್ನು ಶ್ರೀನಿವಾಸನು ನನಗೆ 100 ಅಡಿಯ ಜಾಗ ಬೇಕೆಂದು ಕೇಳಿದ್ದಾನೆ. ಸುಮ್ಮನೆ ಕೊಡಲಾಗದೆಂದೂ ಏನಾ ದರೂ ಸಂಭಾವನೆ ಅಗತ್ಯವೆಂದು ಹೇಳಿದ್ದಾನೆ ವರಾಹಸ್ವಾಮಿ.

ಆ ಮಾತಿಗೆ ಶ್ರೀನಿವಾಸನು ಕೊಡಲು ನನ್ನ ಬಳಿ ಪ್ರಸ್ತುತ ಏನೂ ಇಲ್ಲವೆಂದೂ ಆದರೆ ಮುಂದಿನ ದಿನಗಳಲ್ಲಿ ನನ್ನ ದರ್ಶನಕ್ಕಾಗಿ ಭಕ್ತರು ಬರುವರೆಂದೂ,ಆಗ ಮೊಟ್ಟಮೊದಲ ದರ್ಶನ ನಿನ್ನದೆಂದೂ,ಬಳಿಕವೇ ನನ್ನ ದರ್ಶನವೆಂದೂ ಹೇಳಿದ್ದಾನೆ. ನೈವೇದ್ಯವೂ ಸಹಾ ಮೊದಲು ನಿನಗೆ ನಂತರವೇ ನನಗೆ ಎಂದಿದ್ದಾನೆ ಶ್ರೀನಿವಾಸ.ಅದಕ್ಕೆ ಸಮ್ಮತಿಸಿ ನೂರು ಅಡಿ ಸ್ಥಳವನ್ನು ಶ್ರೀನಿವಾಸನಲ್ಲಿ ಕೊಟ್ಟಿದ್ದಾನೆ. ಇವರಿಬ್ಬರ ಸಂಭಾ ಷಣೆ ನಮ್ಮ ಕಣ್ತೆರೆಯಿಸಲು ಮಾತ್ರ. ವರಾಹ ಮತ್ತು ಶ್ರೀನಿವಾಸ ಇದ್ದರೂ ಒಂದೇ. ಬೇರೆ ಬೇರೆಯವರಲ್ಲ. ಶ್ರೀಮನ್ನಾರಾಯಣನ ಎರಡು ರೂಪವೇ ಸರಿ.

ನಾವು ಈ ಭೂಮಿ ನಂದು, ನನ್ನ ಹಣದಿಂದ ಕೊಂಡದ್ದು ಎಂದೋ, ಪಿತ್ರಾರ್ಜಿತವೆಂದೋ, ಈ ಮನೆನಂದೆಂದು, ನಾನು ಕಟ್ಟಿಸಿದ್ದೆಂದೂ ಎಂಬ ಭ್ರಮೆಯಲ್ಲಿರುತ್ತೇವೆ. ಆದರೆ ಈ ಭೂಮಿ ಸಮಸ್ತವೂ ಭಗವಂತನಾದ ವರಾಹಸ್ವಾಮಿಯದು ಎಂದು ಆಲೋಚಿಸುವುದಿಲ್ಲ. ಈ ಭೂಮಂಡಲವನ್ನು ಸಮುದ್ರದಿಂದ,



ರಾಕ್ಷಸರಿಂದ ರಕ್ಷಿಸಿ ನಮ್ಮ ನಿವಾಸಕ್ಕೆ ಅನುಕೂಲ ಮಾಡಿ ಕೊಟ್ಟರೇ ಈ ವರಾಹಸ್ವಾಮಿ.

ಆ ಪರಮಾತ್ಮ ಕೊಟ್ಟ ಭೂಮಿಯ ಮೇಲೆ ನಾವಿದ್ದೇವೆಂದೂ ಅನಿಸಿಕೆಯೊಂದಿದ್ದರೆ ಸಾಕು. ಶ್ರೀನಿ ವಾಸನು ಸಹ ವರಾಹಸ್ವಾಮಿಗೆ ಧನವನ್ನೇನು ಕೊಡಲಿಲ್ಲ. ಮೊದಲ ಅಭಿಷೇಕ, ಪೂಜೆ ನೈವೇದ್ಯಗಳು ವರಾಹಸ್ವಾಮಿಗೇ ತದ ನಂತರವೇ ತನಗೆಂದಿದ್ದಾನೆ. ನಮ್ಮ ವಿಷಯದಲ್ಲಾ ಅಷ್ಟೇ. ಇದು ಭಗವಂತನದು. ನಮಗೆ ಅನುಭವಿಸಲು ಅವಕಾಶವನ್ನು ದೇವನು ಕಲ್ಪಿಸಿ ಕೊಟ್ಟಿದ್ದಾನೆಂದು ಸ್ಮರಿಸುತ್ತಾ ಅದೇ ಅನು ಸಂಧಾನದಲ್ಲಿ ಬಾಳಬೇಕು. ಬೆಳಗ್ಗೆ ಸ್ನಾನಮಾಡುವ ಮೊದಲು ಮೃತ್ತಿಕಾ ಸ್ನಾನವನ್ನು ಮಾಡಬೇಕೆಂದು ಶಾಸ್ತ್ರವಿದೆ. ಆಹಾರ ಪದಾರ್ಥಗಳನ್ನು ಸ್ವಾಮಿಗೆ ಮೊದಲು ನಿವೇದನೆ ಮಾಡಿ ಅನಂತರ ಭುಂಜಿಸಬೇಕು ಮೊದಲು ನೈವೇದ್ಯವು ನಿನಗೆ ಅಂದರೆ ಅದೇ ಅರ್ಥ. ನೈವೇದ್ಯ ಮಾಡಿದರೆ ಅದರಲ್ಲಿರುವ ಸಾರವನ್ನು ತೆಗೆದು ಕೊಂಡು ದೋಷಪರಿಹಾರ ಮಾಡುತ್ತಾನೆ ಆ ಸ್ವಾಮಿ. ಇದೇ ಇದರಲ್ಲಿರುವ ಅಂತರಾರ್ಥ.

ಮುಂಬುರುವ ದಿನಗಳಲ್ಲಿ ಆ ಕ್ಷೇತ್ರದಲ್ಲಿ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿದ್ದಾನೆ ವೇಂಕಟೇಶ್ವರಸ್ವಾಮಿ. ಪ್ರಸ್ತುತ ಆ ದಿನದ ನಿಯಮಾನುಸಾರವಾಗಿ ಇಂದಿಗೂ ತಿರುಮಲೆಯಲ್ಲಿ ಶ್ರೀ ಭೂವರಹಾ ಸ್ವಾಮಿಗೆ ಮೊಟ್ಟ ಮೊದಲು ಪೂಜಾ ನಿವೇದನೆಗಳನ್ನು ಸಕ್ರಮವಾಗಿ ಜರುಗಿಸುತ್ತಾರೆ. ಈ ವರಾಹಸ್ವಾಮಿಯನ್ನು ಮೊದಲು ದರ್ಶನ ಮಾಡಿದರೆ ಶ್ರೀ ವೇಂಕಟೇಶ್ವರನು ಎಷ್ಟೋ ಸಂತೋಷಿಸುತ್ತಾನೆ ಸಹಾ.

ಶ್ರೀ ವರಹಾಸ್ವಾಮಿಗೆ ಸಂಬಂಧಿಸಿದ ಪ್ರಾಚೀನ ಶಾಸನಗಳಷ್ಟೇನೂ ಇಲ್ಲದಿದ್ದರೂ ಕ್ರಿ.ಶ. 1380 ರ ಶಾಸನದಲ್ಲಿ ಶ್ರೀ ವರಾಹಸ್ವಾಮಿಯು 'ವರಹನಾಯನಾರ್' ಎಂದು ಕರೆಯಲ್ಪಟ್ಟಿದ್ದಾರೆ. ಅನಂತರ 1476 ನ ಶಾಸನಗಳಲ್ಲಿ ಈ ವರಹಾಸ್ವಾಮಿಯನ್ನು 'ಜ್ಞಾನಾಪ್ಪಿರಾನ್' ಎಂದು ಹೆಸರಿಸಲಾಗಿದೆ.

ಶ್ರೀ ವರಾಹಸ್ವಾಮಿಗೆ ಪ್ರತಿನಿತ್ಯ ಮೂರು ಬಾರಿ ವೈಖಾನಸಾಗಮ ಪ್ರಕಾರದಂತೆ ಅರ್ಚನೆಗಳು, ನಿವೇದನೆಗಳು ಜರುಗಿಸಲಾಗುತ್ತವೆ. ನೈವೇದ್ಯಗಳನ್ನು ಕೂಡಾ ಶ್ರೀನಿವಾಸನಿಗಿಂತಲು ಮೊದಲೇ ಶ್ರೀ ವರಾಹಸ್ವಾಮಿಗೆ ನಿವೇದಿಸಲಾಗುತ್ತದೆ. ಪ್ರತಿ ಶುಕ್ರವಾರ ಬೆಳಗ್ಗೆ ಮುಂಜಾನೆ ಅಭಿಷೇಕ ಮಾಡಲಾಗುತ್ತದೆ.

### ಆಲಯ ನಿರ್ಮಾಣ ಶೈಲಿ

ಸ್ವಾಮಿ ಪುಷ್ಕರಿಣಿ ವಾಯುವ್ಯ ಮೂಲೆಯಲ್ಲಿ ಪೂರ್ವಕ್ಕೆ ಮುಖವಾಗಿ ಮುಂದಕ್ಕೆ ಚಾಚಿಕೊಂಡಂತೆ ವರಾಹಸ್ವಾಮಿಯ ದೇವಾಲಯವು ನಾಲ್ಕು ಭಾಗಗಳಾಗಿ ಮುಖಮಂಟಪ, ಅರ್ಧ ಮಂಟಪ, ಅಂತರಾಳ, ಗರ್ಭಾಲಯವಾಗಿ ನಿರ್ಮಾಣ ಗೊಂಡಿವೆ. ಶಿಲ್ಪ ಶೋಭಿತವಾದ ರಮಣೀಯ ಸ್ತಂಭಗಳಿಂದ ನಿರ್ಮಾಣಗೊಂಡ ಶ್ರೀ ವರಾಹಸ್ವಾಮಿ ಆಲಯದ ಮುಖ



ಮಂಟಪದೊಳಗೆ ಪ್ರತಿ ಬ್ರಹ್ಮೋತ್ಸವದ ಮೊದಲ ದಿನ ಶ್ರವಣ ನಕ್ಷತ್ರದ ದಿನ ಚಕ್ರಸ್ನಾನ ಸಂದರ್ಭದಲ್ಲಿ ಶ್ರೀದೇವಿ ಭೂದೇವಿ ಸಮೇತನಾದ ಶ್ರೀನಿವಾಸನು ಚಕ್ರತ್ತಾಳ್ವಾರರೊಂದಿಗೆ ಸವಾರಿ ಹೊರಡುತ್ತಾರೆ. ಈ ಮುಖಮಂಡಪದ ಆವರಣದಲ್ಲಿಯೇ ಶ್ರೀ ವರಾಹಸ್ವಾಮಿ ಆಲಯಕ್ಕೆ ಬಂದು ಪ್ರದಕ್ಷಿಣೆಯ ಮಾರ್ಗವಿದೆ.

ಮುಖಮಂಡಪದಿಂದ ಮುಂದಕ್ಕೆ ಬಂದರೆ ಅರ್ಧ ಮಂಟಪ. ಇದೇ ಶ್ರೀ ವರಾಹಸ್ವಾಮಿ ಗರ್ಭಾಲಯಕ್ಕೆ ಸುತ್ತೂ ನಿರ್ಮಿತಗೊಂಡು ಪ್ರದಕ್ಷಿಣಾಮಾರ್ಗವಾಗಿ ಕೂಡಾ ಉಪಯೋಗವಾಗುತ್ತದೆ. ಅರ್ಧಮಂಟಪವನ್ನು ದಾಟಿ ಮುಂದಕ್ಕೆ ಬಂದರೆ ಚಿಕ್ಕ ಅಂತರಾಳವಿದೆ. ಈ ಅಂತರಾಳದ ಹೊರ ದ್ವಾರದ ಎರಡೂ ಬದಿಯಲ್ಲಿ ಶಂಖಚಕ್ರಗದಾಧಾರಿಗಳಾದ ಜಯ ವಿಜಯರಿದ್ದಾರೆ. ಇವರನ್ನು ದಾಟಿ ಒಳಕ್ಕೆ ಪ್ರವೇಶಿಸಿದರೆ ಐದಾರು ಅಡಿಯ ಚುತರಸ್ರ ಅಂತರಾಳವಿದೆ. ಈ ಅಂತರಾಳದೊಳಗಿನ ಗರ್ಭಾಲಯದಲ್ಲಿ ಶ್ರೀ ಭೂವರಾಹಸ್ವಾಮಿ ವಿಗ್ರಹ ಎರಡಡಿ ಎತ್ತರವಿದೆ ಮೇಲಿನ ಎರಡು ಹಸ್ತಗಳಲ್ಲಿ ಶಂಖಚಕ್ರಗಳು, ಎಡತೊಡೆಯ ಮೇಲೆ ಭೂದೇವಿಯನ್ನು ಕೂಡಿಸಿಕೊಂಡಂತೆ ಇದೆ. ಈ ಮೂಲ ಮೂರ್ತಿ ಜೊತೆಗೆ ಒಂದು ಅಡಿಯೆತ್ತರದ ಪಂಚಲೋಹ ವರಾಹ ಮೂರ್ತಿ, ಇಂಚಿಂಚು ಎತ್ತರವಾದ ಶ್ರೀವೇಂಕಟೇಶ್ವರ ಮೂರ್ತಿ ಕೆಲವು ಸಾಲಗ್ರಾಮಗಳೂ ಇವೆ.

ಈ ವರ್ಷ 2019 ಏಪ್ರಿಲ್ 23 ರಿಂದ 27 ರ ವರೆಗೆ ಈ ಆಲಯದಲ್ಲಿ ಮಹಾಸಂಪ್ರೋಕ್ಷಣ ಕಾರ್ಯಕ್ರಮಗಳು ವೈಭವೋಪೇತವಾಗಿ ನಡೆಯುತ್ತವೆ. ಹಾಗೆ ತಿರುಮಲೆ ಕ್ಷೇತ್ರದಲ್ಲಿ ನೆಲೆಸಿರುವ ಮೊಟ್ಟಮೊದಲ ದೈವ ಶ್ರೀ ವರಾಹಸ್ವಾಮಿ. ಅದರಿಂದಾಗಿಯೇ 'ತಿರುಮಲ' ಆದಿವರಾಹ ಕ್ಷೇತ್ರವೆಂದು ಪ್ರಸಿದ್ಧಿ ಪಡೆದಿದೆ. ಆದ್ದರಿಂದ ಇಷ್ಟು ಪ್ರಸಿದ್ಧಿ ಪ್ರಾಶಸ್ತ್ಯವಿರುವ ಶ್ರೀ ವರಾಹ ಸ್ವಾಮಿಯನ್ನು ಮೊದಲು ದರ್ಶಿಸಿ ವರಾಹ ಸ್ವಾಮಿಯನ್ನು ದೊಂದೇ ಅಲ್ಲದೇ ಶ್ರೀ ವೇಂಕಟೇಶ್ವರ ಸ್ವಾಮಿಯ ಆಶೀರ್ವಾದಗಳನ್ನು ಸಹಾ ಪಡೆದು ಕೃತಾರ್ಥರಾಗೋಣ.

ಧಾರಾವಾಹಿಕ

## 1. ತಿರುಮಲೆ ಕ್ಷೇತ್ರ

"ಸತ್ಯಂ ಸತ್ಯಂ ಪುನಸ್ಸತ್ಯಂ ನ ದೇವೋ ವೇಂಕಟೇಶ್ವರಾತ್
ಬ್ರಹ್ಮಾಂಡೇ ನಾಸ್ತಿ ಯತ್ಕಿಂಚಿತ್ ನ ಭೂತಂ ನ ಭವಿಷ್ಯತಿ"

ಶ್ರೀ ವೇಂಕಟಾಚಲಮಹಾತ್ಮೆ (ಭವಿಷ್ಯೋತ್ತರ ಪುರಾಣ)

ಸತ್ಯವಾಗಿಯೂ ಹೇಳುತ್ತಿದ್ದೇನೆ..! ಒಮ್ಮೆ ಅಲ್ಲ, ಎರಡು ಬಾರಿ ಅಲ್ಲ. ಪದೇ ಪದೇ ಹೇಳುತ್ತಿರುವ ಸತ್ಯವಾದ ಮಾತು! ಏನಾ ಸತ್ಯವಾದ ಮಾತು!

ಅಂದರೇ, ಶ್ರೀ ವೇಂಕಟೇಶ್ವರನಂತಹಾ ದೇವರು ಈ ಬ್ರಹ್ಮಾಂಡದಲ್ಲೇ ಎಲ್ಲೂ ಇಲ್ಲ. ಇರುವುದೂ ಇಲ್ಲ. ಈಗ ಮಾತ್ರಾ ಅಲ್ಲ. ಅತ್ತ ಕಳೆದು ಹೋಗಿರುವ ಭೂತಕಾಲದಲ್ಲೂ, ಇತ್ತ ಮುಂಬರುವ ಭವಿಷ್ಯತ್ಕಾಲದಲ್ಲೂ ಇಲ್ಲ. ಇರುವುದೂ ಇಲ್ಲ.

ಆದ್ದರಿಂದ ಶ್ರೀ ವೇಂಕಟೇಶ್ವರಸ್ವಾಮಿಯು ಕಲಿ ಯುಗದ ಪ್ರತ್ಯಕ್ಷ ದೈವವೆಂದು ಸ್ತುತಿಸಲ್ಪಡುತ್ತಿದ್ದಾನೆ.

ಶ್ಲೋ॥ ಕೃತೇತು ನರಸಿಂಹೋ ಭೂತ್ ತ್ರೇತಾಯಾಂ ರಘುನಂದನಃ
ದ್ವಾಪರೇ ವಾಸುದೇವ ಶ್ಚ ಕಲೌ ವೇಂಕಟನಾಯಕಃ-

ಕೃತಯುಗದಲ್ಲಿ ನರಸಿಂಹ, ತ್ರೇತಾಯುಗದಲ್ಲಿ ಶ್ರೀರಾಮ,ದ್ವಾಪರದಲ್ಲಿ ಶ್ರೀ ಕೃಷ್ಣ, ಕಲಿಯುಗದಲ್ಲಿ ಶ್ರೀ ವೇಂಕಟೇಶ್ವರ .. ಈ ನಾಲ್ಕು ಅವತಾರಗಳು ನಾಲ್ಕು ಯುಗಗಳಲ್ಲಿ ಪ್ರಸಿದ್ಧಿ ಪಡೆದಿವೆ.

ಚೆನ್ನಾಗಿದೆ!

ಇವುಗಳಲ್ಲಿ ಮೊದಲ ಮೂರು ಅವತಾರ ಗಳು, ಶ್ರೀ ಮಹಾವಿಷ್ಣುವಿನ ದಶಾವತಾರಗಳಲ್ಲಿ ಇರುವುವೇ! ಆದರೆ ವಿಚಿತ್ರ! ಏನೆಂದರೆ ಕಲಿಯುಗದಲ್ಲಿ ವೇಂಕಟೇ ಶ್ವರನು ಅವತಾರವೆಂದು ಪ್ರತ್ಯೇಕವಾಗಿ ಹೇಳಿರುವುದು. ವಿಚಿತ್ರ ವಾಗಿದೆ ಅಲ್ಲವೆ?

ಆಯಾಯುಗಗಳಲ್ಲಿ ಆಯಾ ರಾಕ್ಷಸರನ್ನು ಸಂ ಹರಿಸಿ ಧರ್ಮವನ್ನು ಕಾಪಾ ಡುವುದಕ್ಕಾಗಿ ತಳೆದ ಅವ ತಾರಗಳು ಮಾತ್ರವೇ! ಆದರೆ ಶ್ರೀನಿವಾಸನ ಅವತಾರ ಆ ರೀತಿ ಸಂಭವಿಸಲಿಲ್ಲ. ಶ್ರೀ ವೈಕುಂಠದಿಂದ ತಾನೇ ಸ್ವತಹಾ ಇಳಿದು ಬಂದ ದಿವ್ಯಮಂಗಳ ಅರ್ಚಾಮೂರ್ತಿ ಶ್ರೀ ವೇಂಕಟೇಶ್ವರ.

## 2. ಶ್ರೀ ವೇಂಕಟೇಶ್ವರಾವತಾರ:

ಮಹಾವಿಷ್ಣುವು ಪ್ರತ್ಯಕ್ಷವಾಗಿ ಶ್ರೀ ವೈಕುಂಠದಿಂದ "ಶ್ರೀ ವೇಂಕಟೇಶ್ವರ ಸ್ವಾಮಿ" ಅವತಾರವಾಗಿ ಈ ಭೂಮಿಗೆ ಇಳಿದು ಬರುವುದಕ್ಕೆ ಈ ಕಲಿಯುಗದ ಲಕ್ಷಣಗಳೇ ಕಾರಣವಾದುವು.

ಇತರ ಯುಗಗಳಲ್ಲಿನ ಮನುಷ್ಯರಿಗಿಂತಲೂ ಕಲಿಯುಗ ದಲ್ಲಿನ ಮನುಷ್ಯ ಅಲ್ಪಾಯುಷಿ ಅಲ್ಲದೇ ಬಲಹೀನನೂ ಹೌದು. ಅದರ ಜೊತೆಗೆ ಈರ್ಷ್ಯೆ,ಅಸೂಯೆ,ದ್ವೇಷ,ಲೋಭ, ಅಹಂಕಾರ ದಂತಹಾ ಕೆಟ್ಟ ಲಕ್ಷಣಗಳಿಂದ ಕಲಿಯುಗದಲ್ಲಿನ ಮನುಜನ ಮನಸ್ಸು ಕಲುಷಿತವಾಗಿ ಹೋಗುತ್ತಿದೆ, ಚಂಚಲವಾಗುತ್ತಿದೆ. ಇಷ್ಟೊಂದು ಲೋಪ ದೋಷಗಳನ್ನು ಹೊಂದಿರುವ ಇಂದಿನ ಮನುಷ್ಯ ಇತರ ಯುಗಗಳಂತೆ ನೇರವಾಗಿ ವೈಕುಂಠದಲ್ಲಿನ ಭಗವಂತನ ಹತ್ತಿರಕ್ಕೆ ಹೋಗಲಾರದ ಅಸಮರ್ಥನಾಗಿದ್ದಾನೆ.

ಆದ್ದರಿಂದಲೇ ಭಗವಂತನು ಕಲಿಯುಗದಲ್ಲಿನ ಭಕ್ತರನ್ನು ಉದ್ಧರಿಸುವುದಕ್ಕಾಗಿ ಶ್ರೀ ವೈಕುಂಠವನ್ನೇ ಬಿಟ್ಟು "ಶ್ರೀ ವೇಂಕಟೇಶ್ವರ" ಎಂಬ ಹೆಸರಿನಿಂದ ಭೂಲೋಕಕ್ಕೆ ಇಳಿದು ಬಂದ.

ಆದ್ದರಿಂದಲೆ ಆ ಸ್ವಾಮಿಗೆ "ಕಲೌ ವೇಂಕಟ ನಾಯಕಃ" ಎಂದು ಹೆಸರು ಬಂದಿದೆ. ಕಾಲುಷ್ಯ ಪೂರಿತವಾದ ಈ ಕಲಿ ಯುಗದಲ್ಲಿ ಭಕ್ತರನ್ನು ರಕ್ಷಿಸಿ ಅವರ ಕೋರಿಕೆಗಳನ್ನು ಈಡೇರಿ ಸುವ "ಒಬ್ಬನೇ ಒಬ್ಬ ನಾಯಕ, ಒಂದೇ ಒಂದು ದಿಕ್ಕು, ಗತಿ ನಾನೇ"ಎನ್ನುತ್ತಾ ಆ ಭಗವಂತ ಶ್ರೀ ವೇಂಕಟೇಶ್ವರನೆಂಬ ಹೆಸರಿ ನಿಂದ ಅರ್ಚಾ ಮೂರ್ತಿಯಾಗಿ ಅವತರಿಸಿದ್ದಾನೆ.

## 3. ಭೂಲೋಕ ವೈಕುಂಠವೆಂಬ ತಿರುಮಲೆ

ಆ ರೀತಿ ಅವತರಿಸುತ್ತಾ, ವೈಕುಂಠದಲ್ಲಿನ ಗಿರಿಗಳಿಂದ, ತರುಗಳಿಂದ, ಸರಸ್ಸುಗಳಿಂದ, ಉಭಯದೇವಿಯರಾದ ಶ್ರೀದೇವಿ,ಭೂ ದೇವಿಯರೊಂದಿಗೆ, ಗರುಡ, ಮೊದಲಾದ ಸೇವಕರೊಂದಿಗೆ ಶ್ರೀ ಮಹಾವಿಷ್ಣುವು ಧರೆಗಿಳಿದು




ಮೂಲ: ಜೆ. ಬಾಲಸುಬ್ರಹ್ಮಣ್ಯಂ
ಅನುವಾದ : ಶ್ರೀಮತಿ ಬಿ. ಪದ್ಮಜ



ಬಂದ. ಆ ವೈಕುಂಠದಿಂದ ಬಂದು ಈ ವಸುಧೆಯಲ್ಲಿ ಇದೋ ಇಲ್ಲಿ "ಶ್ರೀ ವೇಂಕಟೇಶ್ವರ"ನೆಂಬ ಹೆಸರಿನಿಂದ ದರ್ಶನ ನೀಡುತ್ತಾ ನಿಂತಿರುವ ಪವಿತ್ರವಾದ ಸ್ಥಳ "ಭೂಲೋಕ ವೈಕುಂಠವೆಂದೇ" ಪ್ರಸಿದ್ಧಿಯಾಗಿದೆ. ಅದೇ "ತಿರುಮಲೆ" ಎಂಬ ಪುಣ್ಯಕ್ಷೇತ್ರ.

### 4. ಅತಿಲೋಕ ಸುಂದರ ಆ ಆನಂದನಿಲಯ

ಶ್ರೀ ವೇಂಕಟೇಶಮತಿ ಸುಂದರ ಮೋಹನಾಂಗಂ
ಶ್ರೀ ಭೂಮಿಕಾಂತ ಮರವಿಂದ ದಳಾಯತಾಕ್ಷಮ್
ಪ್ರಾಣಪ್ರಿಯಂ ಪವಿತ್ರಸತ್ಕರುಣಾಂಬುರಾಶಿಂ
ಬ್ರಹ್ಮೇಶ ವಂದ್ಯ ಮಮೃತಂ ವರದಂ ಭಜಾಮಿ

ಆನಂದನಿಲಯನು ಎಲ್ಲರನ್ನೂ ಸಮ್ಮೋಹಗೊಳಿಸುವ ಅತಿಲೋಕ ಸುಂದರ. ಆ ಸ್ವಾಮಿಗೆ ಪದ್ಮದಂತಹಾ ಕಣ್ಣುಗಳಿವೆ. ಆ ದೇವದೇವನು ಶ್ರೀದೇವಿ ಭೂದೇವಿಯರೊಂದಿಗೆ ಇರುತ್ತಾನೆ. ಅತ್ಯಂತ ಪ್ರಾಣಪ್ರದನಾದವನು, ಕರುಣಾ ಸಮುದ್ರನೂ ಹೌದು. ಆ ಸ್ವಾಮಿಯನ್ನು ಬ್ರಹ್ಮದೇವ, ಶಿವನೂ ಕೀರ್ತಿಸುತ್ತಿರುತ್ತಾರೆ. ಮೋಕ್ಷಪ್ರದಾತ! ಇಂತಹಾ ದೇವದೇವನಾದ ಶ್ರೀ ವೇಂಕಟೇಶ್ವರನನ್ನು ಭಜಿಸುತ್ತೇನೆ.

ಇಂತಹ ಸುಂದರನಾದ ದೇವನು "ನಾನು ವೈಕುಂಠವನ್ನಾದರೂ ಬಿಟ್ಟಿರುತ್ತೇನಾಗಲೀ, ನನ್ನ ಭಕ್ತರನ್ನು ಬಿಟ್ಟು ಒಂದು ಕ್ಷಣವೂ ಇರಲಾರೆ" ಎನ್ನುತ್ತಾ ಶ್ರೀ ವೈಕುಂಠದಿಂದ ಇಳಿದು ಬಂದು ಭೂಲೋಕದಲ್ಲಿ ಈ ವೇಂಕಟಾಚಲದಲ್ಲಿ ಅದ್ಭುತ ಸಾಲಿಗ್ರಾಮ ಶಿಲಾಮೂರ್ತಿಯಾಗಿ ವಕ್ಷಃಸ್ಥಳ ಶ್ರೀ ಮಹಾಲಕ್ಷ್ಮಿಯೊಂದಿಗೆ ಸ್ವಯಂಭೂವಾಗಿ ಉದ್ಭವಿಸಿದ್ದಾನೆ. ಆ ವಕ್ಷಃಸ್ಥಳ ಲಕ್ಷ್ಮಿಯಿಂದಾಗಿಯೇ ಆ ಸ್ವಾಮಿ "ಶ್ರೀನಿವಾಸನಾಗಿದ್ದಾನೆ."

### ವಿಚಿತ್ರ ಭಂಗಿ

ಶಿರಸ್ಸಿನಲ್ಲಿ ಕಿರೀಟದೊಂದಿಗೆ, ಯಜ್ಞೋಪವೀತದೊಂದಿಗೆ, ಸೊಂಟದಲ್ಲಿ ನಂದಕ ಖಡ್ಗದೊಂದಿಗೆ, ಮೇಲಿನ ಎರಡೂ ಕೈಗಳಲ್ಲಿ ಶಂಖಚಕ್ರಗಳನ್ನು ಧರಿಸಿ ಕೆಳಗೆ ಬಲಗೈಯನ್ನು ವರದಮುದ್ರೆಯಲ್ಲಿ, ಇರಿಸಿ ತನ್ನ ಪಾದಗಳನ್ನು ತೋರಿಸುತ್ತಾ ಶರಣುಬೇಡಿ ಎಂದು ಆದೇಶಿಸುತ್ತಿರುವಂತಿದೆ. ಹಾಗೆಯೆ ಕೆಳಗಿನ ಎಡಗೈಯನ್ನು ಸೊಂಟದ ಮೇಲೆ ಇರಿಸಿ ಕೊಂಡು ಮೊಣಕಾಲನ್ನು ತೋರಿಸುತ್ತಿದ್ದಾನೆ. ವಿಚಿತ್ರವಾದ ಈ ಭಂಗಿಯಲ್ಲಿ, ತಾನು ನಿಂತಿರುವ ಈ ಸ್ಥಳವೇ ಸಾಕ್ಷಾತ್ತು ಶ್ರೀ ವೈಕುಂಠವೆಂದೂ, ಅಷ್ಟೇ ಅಲ್ಲದೇ ನನ್ನ ಈ ಪಾದಗಳನ್ನು ಮೊರೆಹೋದವರಿಗೆ "ಸಂಸಾರ ಸಾಗರ ಸಮುತ್ತರಣೈಕ ಸೇತೋ" ಎನ್ನುವಂತೆ ಅಗಾಧವಾದ ಸಂಸಾರ ಸಮುದ್ರವನ್ನು ಮೊಣಕಾಲವರೆಗೇ ನಿಲ್ಲಿಸಿ ಸುಲಭವಾಗಿ ದಾಟಿಸುತ್ತೇನೆ, ಎನ್ನುತ್ತಾ "ಕಟಿಹಸ್ತದೊಂದಿಗೆ" ನಿಮ್ಮ ವರಗಳನ್ನೆಲ್ಲಾ ಅನುಗ್ರಹಿಸುತ್ತೇನೆಂದು "ವರದಹಸ್ತದೊಂದಿಗೆ" ತೋರಿಸುತ್ತಾ ಒಂದು ರೀತಿಯ ಸೊಗಸಾದ ಭಂಗಿಯಲ್ಲಿ ನಿಂತಿದ್ದಾನೆ ಈ ಶ್ರೀನಿವಾಸ.

### ಪಂಚ ವಿಗ್ರಹಗಳು (ಪಂಚ ಬೇರಗಳು)

ಆನಂದನಿಲಯದ ಗರ್ಭಗುಡಿಯಲ್ಲಿ ಸಾಲಿಗ್ರಾಮ ಶಿಲಾಮೂರ್ತಿಯಾಗಿ ಇರುವ ಮೂಲ ವಿಗ್ರಹದೊಂದಿಗೆ ಇನ್ನೂ ನಾಲ್ಕು ರೀತಿಯ ಉತ್ಸವಮೂರ್ತಿಗಳು ಇವೆ. ಇವನ್ನು ಮೂಲಮೂರ್ತಿಯೊಂದಿಗೆ ಸೇರಿಸಿ ಪಂಚವಿಗ್ರಹಗಳು ಎನ್ನುತ್ತಾರೆ ಅಥವಾ ಪಂಚಬೇರಗಳು ಎನ್ನುತ್ತಾರೆ ಈ ಸ್ವಾಮಿಯ ದರ್ಶನಕ್ಕಾಗಿಯೇ ಭಕ್ತರು ಸುದೂರ ಪ್ರಾಂತ್ಯಗಳಿಂದ ಯಾತ್ರೆಗೆ ಬರುತ್ತಾರೆ. ಈ ಮೂಲವಿಗ್ರಹಕ್ಕೇ ಪ್ರತೀದಿನ ಪ್ರಧಾನವಾಗಿ ಸುಪ್ರಭಾತ, ಎರಡು ಬಾರಿ ತೋಮಾಲ ಸೇವೆ ಎಂಬ ಪುಷ್ಪಾಲಂಕರಣ ಸೇವೆ, ಬೆಳಿಗ್ಗೆ ಸಹಸ್ರನಾಮಾರ್ಚನೆ, ಮಧ್ಯಾಹ್ನ, ಸಂಜೆ ಅಷ್ಟೋತ್ತರಶತನಾಮಾರ್ಚನೆ, ಮೂರು ಹೊತ್ತಿನ ನೈವೇದ್ಯಗಳು ನಡೆಯುತ್ತವೆ.

ಪ್ರತೀ ಮಂಗಳವಾರ ಅಷ್ಟದಳ ಪಾದಪದ್ಮಾರಾಧನೆ, ಗುರುವಾರ ತಿರುಪ್ಪಾವಡಸೇವೆ, ನೇತ್ರದರ್ಶನ, ರಾತ್ರಿ ಪೂಲಂಗೀ ಸೇವೆ, ಶುಕ್ರವಾರ ಬೆಳಿಗ್ಗೆ ಸುಗಂಧ ಪರಿಮಳದ್ರವ್ಯಗಳೊಂದಿಗೆ ಅಭಿಷೇಕ ಸೇವೆ ನಡೆಯುತ್ತದೆ. ಶ್ರೀ ಸ್ವಾಮಿಗೆ ಅರ್ಚನೆಗಳೂ, ನೈವೇದ್ಯಗಳು, ನಡೆದ ಕೂಡಲೇ ವಕ್ಷಃಸ್ಥಳದಲ್ಲಿರುವ "ವ್ಯೂಹ ಲಕ್ಷ್ಮಿಗೂ"ಪೂಜೆಗಳನ್ನು ನಡೆಸುತ್ತಾರೆ. ಇನ್ನು ಎರಡನೆಯ ವಿಗ್ರಹ "ಭೋಗಾಶ್ರೀನಿವಾಸಮೂರ್ತಿ"ಇದು ಮೂಲಮೂರ್ತಿಯ ನಕಲು. ಇದು ಬೆಳ್ಳಿಯ ಪ್ರತಿಮೆಯಾಗಿದೆ. ಈತ

ನನ್ನು ಮನವಾಳ ಪೆರುಮಾಳ್ ಎಂದು ಕರೆಯುತ್ತಾರೆ. ಸುಮಾರು ಒಂದೂವರೆ ಅಡಿಗಳ ಎತ್ತರವಿರುವ ಈ ಬೆಳ್ಳಿಯ ಮೂರ್ತಿಗೆ ಪ್ರತೀ ದಿನ ಬೆಳಗ್ಗೆ ಆಕಾಶಗಂಗೆಯ ತೀರ್ಥಾಭಿಷೇಕ ನಡೆಯುತ್ತದೆ. ರಾತ್ರಿ ಪವಡಿಸುವ ಸೇವೆ "ಏಕಾಂತ ಸೇವೆ" ನಡೆಯುತ್ತದೆ. ಈ ಸ್ವಾಮಿಗೆ ಪ್ರತೀ ಬುಧವಾರ ಬಂಗಾರದ ಬಾಗಿಲ ಬಳಿ ಸಹಸ್ರಕಲಶಾಭಿಷೇಕ ನಡೆಯುತ್ತದೆ.

ಇನ್ನು ಮೂರನೆಯ ವಿಗ್ರಹ "ಕೊಲುವು ಶ್ರೀನಿವಾಸ ಮೂರ್ತಿ" (ಆಸ್ಥಾನ ಶ್ರೀನಿವಾಸಮೂರ್ತಿ) ಮೂಲಮೂರ್ತಿಗೆ ಇದು ಪಂಚಲೋಹದ ನಕಲು ಪ್ರತಿಮೆ ಇದೂ ಸಹಾ ಒಂದೂವರೆ ಅಡಿಗಳಿದ್ದು ಪ್ರತೀದಿನವೂ ಬಂಗಾರದ ಬಾಗಿಲ ಒಳಗೆ ಬಂಗಾರದ ಸಿಂಹಾಸನದಲ್ಲಿ ದರ್ಬಾರು, ಆಸ್ಥಾನ ನಡೆಯುತ್ತದೆ. ಪಂಚಾಂಗ ಶ್ರವಣದ ನಂತರ ಆದಾಯವ್ಯಯ ಗಳು, ಮೊದಲಾದ ಲೆಕ್ಕಗಳನ್ನು ಆಲಿಸುವ ಸ್ವಾಮಿ ಈತ. ಇನ್ನು ನಾಲ್ಕನೆಯ ಮೂರ್ತಿ "ಉಗ್ರಶ್ರೀನಿವಾಸ ಮೂರ್ತಿ" ಶ್ರೀದೇವಿ ಭೂದೇವಿಯರೊಂದಿಗೆ ಇರುವ ಈ ಉಗ್ರಶ್ರೀನಿವಾಸ ಮೂರ್ತಿಗೆ ಹಿಂದಿನ ಕಾಲದಲ್ಲಿ ಉತ್ಸವಗಳು ನಡೆಯುತ್ತಿದ್ದವು. ಈಗ ಆ ಪದ್ಧತಿಯಿಲ್ಲ. ಕೇವಲ ಕಾರ್ತೀಕ ಕೈಶಿಕದ್ವಾದಶಿಯಂದು ಮಾತ್ರಾ ಬೆಳಗಿನ ಜಾವ ಸೂರ್ಯೋದಯಕ್ಕೆ ಮೊದಲೇ ಉತ್ಸವವನ್ನು ಸಂಪೂರ್ಣಗೊಳಿಸಿಕೊಂಡು ಆಲಯದೊಳಗೆ ಪ್ರವೇಶಿಸುತ್ತಾರೆ.

ಇನ್ನು ಐದನೆಯ ಮೂರ್ತಿ "ಉತ್ಸವ ಶ್ರೀನಿವಾಸ ಮೂರ್ತಿ". ಇವರನ್ನು ಮಲೆಯಪ್ಪಸ್ವಾಮಿ ಎಂದೂ ಕರೆಯುತ್ತಾರೆ. ಇವರು ಶ್ರೀದೇವಿ ಭೂದೇವಿ ಸಮೇತವಾಗಿರುವ ಉತ್ಸವ ಮೂರ್ತಿ. ಈ ಮೂರ್ತಿಗಳು ಮಲೆಯಪ್ಪ ಎಂಬ ಬೆಟ್ಟದ ಅಡಿಯಲ್ಲಿ ದೊರೆತದ್ದರಿಂದ ಈತನನ್ನು ಮಲೆಯಪ್ಪಸ್ವಾಮಿ ಎಂದೇ ಕರೆಯುತ್ತಾರೆ. ಆಲಯದ ಎಲ್ಲಾ ಉತ್ಸವಗಳಲ್ಲೂ ಪಾಲ್ಗೊಳ್ಳುತ್ತಾ, ಭಕ್ತರಿಗೆ ಸನ್ನಿಹಿತನಾಗಿ ದರ್ಶನ ನೀಡುತ್ತಿರುತ್ತಾನೆ.

ಇವುಗಳೇ ಅಲ್ಲದೇ ಆನಂದನಿಲಯದ ಗರ್ಭಗುಡಿಯಲ್ಲಿ ಸುದರ್ಶನ ಚಕ್ರತ್ತಾಳ್ವಾರ್ ಅನಂತ, ಶ್ರೀಸೀತಾ ರಾಮ ಲಕ್ಷ್ಮಣರು, ಶ್ರೀರುಕ್ಮಿಣೀ ಶ್ರೀ ಕೃಷ್ಣರು, ಸುಗ್ರೀವ ಹನುಮಂತರು, ಗರುಡದೇವರು, ವಿಷ್ವಕ್ಸೇನ ಮೊದಲಾದ ಉತ್ಸವಮೂರ್ತಿಗಳೂ ಇದ್ದು ಆಯಾ ವೇಳೆಯಲ್ಲಿ ಮೆರವಣಿಗೆಯಲ್ಲಿ ಭಾಗ ವಹಿಸುತ್ತಿರುತ್ತಾರೆ. ಇವುಗಳಲ್ಲಿ ಕೆಲವನ್ನು ಈಗ ತೀರ್ಥ, ಶಠಾರಿಗಳನ್ನು ನೀಡುವ ಸ್ಥಳದಲ್ಲಿ ಕಾಣಬಹುದು.

(- ಸಶೇಷ)

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾತೋರಣ. ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀ ವೆಂಕಟೇಶ್ವರ ಧ್ಯಾನಮಂದಿರ (ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

# ಶರಣು ಶರಣು ಗಣನಾಥ



ಜಯ ಜಯ ಜಯ
ಶ್ರೀ ಗಣನಾಥ ಜಗವಂದಿತ ಗಣನಾಥ।
ಗಣಗಳ ಅಧಿಪತಿ ಗಣನಾಥ
ವಿಘ್ನ ವಿನಾಶಕ ಗಣನಾಥ
ಪಾರ್ವತಿ ನಂದನ ಗಣನಾಥ
ಪಾಶಾಂಕುಶಧಾರ ಗಣನಾಥ
ಪ್ರಥಮ ಪೂಜಿತ ಗಣನಾಥ
ಪ್ರಥಮ ವಂದಿತ ಗಣನಾಥ
ಮುನಿಗಣ ವಂದಿತ ಗಣನಾಥ

ಮೂಷಿಕ ವಾಹನ ಗಣನಾಥ
ವಿದ್ಯಾ ಬುದ್ಧಿ ಗಣನಾಥ
ಮೋದಕಪ್ರಿಯ ಗಣನಾಥ
ವ್ಯಾಸಭಾರತ ಕೇಳುತ ಗಣನಾಥ
ವೇಗದಿ ಬರೆದೆ ಗಣನಾಥ
ಗರಿಕೆ ಕೊಟ್ಟರೆ ಗಣನಾಥ
ಕೊಡುವೆ ವರಗಳ ಗಣನಾಥ
ವಂದಿಪೆ ನಿರ್ಮ ಪಾದವ ಗಣನಾಥ
ಕರುಣೆಯ ತೋರೋ ಗಣನಾಥ॥

**ಓಂ ಗಂ ಗಣಪತಯೇ ನಮಃ;**

ಭಗವಂತನಿಗೆ ಪೂಜೆ, ಅರ್ಚನೆ, ಭಜನೆ, ಯಜ್ಞಯಾಗ ಮಾಡುವ ಮುನ್ನ ಪ್ರಥಮ ಪೂಜೆ ಗಣನಾಥನಿಗೆ, ಪ್ರಥಮ ವಂದನೆ ಗಣನಾಥನಿಗೆ, "ವಕ್ರತುಂಡ ಮಹಾಕಾಯ ಸೂರ್ಯ ಕೋಟಿ ಸಮಪ್ರಭ ನಿರ್ವಿಘ್ನಮ್ ಕುರೂ ಮೇ ದೇವ ಸರ್ವ ಕಾರ್ಯೇಷು ಸರ್ವದಾ", ಸೊಂಡಿಲು ಮಹಾಕಾಯ ಹೊಂದಿರುವ, ಕೋಟಿ ಸೂರ್ಯ ಕಿರಣಗಳ ಕಾಂತಿಮಯ ದೇವ ನಾನು ಮಾಡುವ ಎಲ್ಲ ಕಾರ್ಯಗಳಲ್ಲಿ ಸದಾ ವಿಘ್ನಗಳನ್ನು ತೊಲಗಿಸಿ, ಕರುಣಿಸು ಎಂದು ಪ್ರಾರ್ಥನೆ.

## ಪುರಾಣ ಕಥೆ

ನೈಮಿಷಾರಣ್ಯದಲ್ಲಿ ಸೂತಮುನಿ ಗಣಪತಿ ಪುರಾಣ ಪುಣ್ಯಕಥೆಯನ್ನು ಶೌನಕಾದಿ ಮುನಿಗಳಿಗೆ ವಿವರಿಸಿದರು. ಗಜಾಸುರನ ಸಂಹರಿಸಿ ಪರಮೇಶ್ವರ ಕೈಲಾಸಕ್ಕೆ ಬರುವ ಸುದ್ದಿ ಕೇಳಿ ಶಿವಗಣಗಳು, ಪಾರ್ವತಿದೇವಿ ಸಂತಸಗೊಂಡರು. ಪಾರ್ವತಿದೇವಿ ಪ್ರತಿಮೆಯೊಂದನ್ನು ಮಾಡಿ ಅದಕ್ಕೆ ಪ್ರಾಣ ಪ್ರತಿಷ್ಠೆ ಮಾಡಿದಾಗ ಮಗುವಿನ ಜನನವಾಯಿತು. ಮಗುವನ್ನು ಸಿಂಹದ್ವಾರದಿ ಕಾವಲು ಇರಲು ಆಜ್ಞೆ ಕೊಟ್ಟು ಜಗದಂಬೆ ಅಂತಃಪುರಕ್ಕೆ ಹೋದರು. ಪರಮೇಶ್ವರ ಕೈಲಾಸಕ್ಕೆ ಬಂದಾಗ ಪ್ರವೇಶವನ್ನು ತಡೆಯಲು, ಪರಮೇಶ್ವರ ಬಾಲಕನ ಶಿರಸ್ಸನ್ನು ಖಂಡಿಸಿದರು. ಜಗದಂಬೆಯ ಆಗ್ರಹಕ್ಕೆ ಲೋಕಗಳೆಲ್ಲ ಅಲ್ಲಕಲ್ಲೋಲವಾದವು ಶಿವಗಣ ಉತ್ತರಕ್ಕೆ ತಲೆ ಮಾಡಿ ಮಲಗಿರುವ ಆನೆಯ ತಲೆ ತಂದರು. ಪರಮೇಶ್ವರ ಆನೆಯ ತಲೆಯನ್ನು ಮಗುವಿಗೆ ಜೋಡಿಸಿ ಪ್ರಾಣ ಪ್ರತಿಷ್ಠೆ ಮಾಡಿ ಗಜಾನನ ಎಂದು ನಾಮಕರಣ ಮಾಡಿದರು. ಗಣಗಳಿಗೆಲ್ಲ ಅಧಿಪತಿ ಎಂದು ಘೋಷಿಸಿದರು. ಆನೆಯ ತಲೆ ವಿಜ್ಞಾನಕ್ಕೆ ಸಂಕೇತ. ಬುದ್ಧಿಯುಕ್ತ ಮಂಗಳಕರ. ಭಾದ್ರಪದ ಶುಕ್ಲ ಚತುರ್ಥಿಯಂದು ಶ್ರೀ ಗಣನಾಥನ ಜನನವಾದುದರಿಂದ ವ್ರತವ ಆಚರಿಸಲಾಗುವುದು. ಗಣಾಧಿಪತ್ಯ: ದೇವತೆಗಳು ವಿಘ್ನವನ್ನು ಅಳಿಸಲು, ಶುಭ ಕಾರ್ಯಗಳು. ಯಜ್ಞ ಯಾಗಾದಿಗಳು ಅತಂಕವಿಲ್ಲದೆ ನಡೆಯಲು ಅಧಿಪತಿಯನ್ನು ನಿಯಮಿಸಲು ಪ್ರಾರ್ಥಿಸಿದರು. ಪರಮೇಶ್ವರ ಗಣಪತಿಯನ್ನು ಕಾರ್ತಿಕೇಯರನ್ನು ಭೂಪ್ರದಕ್ಷಿಣೆ ಮಾಡಿ ಸರ್ವ ತೀರ್ಥಗಳಲ್ಲಿ ಸ್ನಾನ ಮಾಡಿ ಮೊದಲು ಬಂದವರಿಗೆ ಅಧಿಪತ್ಯ ಎಂದು ಹೇಳಿದರು. ಗಣಪತಿ ನಾರಾಯಣ ಮಂತ್ರ ಜಪಿಸುತ್ತ ಪಾರ್ವತಿ ಪರಮೇಶ್ವರರಿಗೆ ಪ್ರದಕ್ಷಿಣೆ ಮಾಡಿದರು. ಕಾರ್ತಿಕೇ ಯರಿಗೆ ಎಲ್ಲೆಲ್ಲೂ ಗಣಪತಿ ಮೊದಲೇ ಸ್ನಾನ ಮಾಡಿ ಭೂಪ್ರದಕ್ಷಿಣೆ ಮಾಡುತ್ತಾ ಕಂಡರು. ಹಿಂತಿರುಗಿ ಅಗ್ರಜನಾದ ಗಣಪತಿಗೆ ಪಟ್ಟವ ಕೊಡಲು ಕಾರ್ತಿಕೇಯ ಒಪ್ಪಿದರು. ಅಂದಿನಿಂದ ಗಜಾನನ ವಿಘ್ನಾಧಿಪತಿ ಆದರು.

**ಎಸ್. ವೆಂಕಟರಾಘವನ್**

**ಚಂದ್ರನ ಪರಿಹಾಸ:** ಚಂದ್ರ ಗಣಪತಿಯನ್ನು ಪರಿಹಾಸ ಮಾಡಿದಾಗ ಪಾರ್ವತಿ ದೇವಿ ಶಾಪವ ಕೊಟ್ಟರು. ಚತುರ್ಥಿ ಚಂದ್ರನ ನೋಡಿದವರಿಗೆ ನೀಲಾಪ ನಿಂದೆಗಳು ಬರುವುದು. ಇದರ ಪರಿಣಾಮದಿಂದ ಋಷಿ ಪತ್ನಿಗಳು, ಕೃಷ್ಣ ಪರಮಾತ್ಮರೂ ಅಪನಿಂದೆ ಗೊಳಗಾದರು. ನಿವಾರಣೆ ಕೇಳಿಕೊಂಡಾಗ ಜಗದಂಬೆ ಭಾದ್ರಪದ ಚತುರ್ಥಿಯೆಂದು ಯಾರು ವಿನಾಯಕ ವ್ರತ ಆಚರಿಸಿ ವ್ರತ ಕಥೆ ಕೇಳುತ್ತಾರೋ ಅವರಿಗೆ ಈ ದೋಷ ಬರುವುದಿಲ್ಲ ಎಂದು ಹೇಳಿದರು.

**ಮೂಷಿಕಾಸುರ ವಾಹನವಾದ:**

ಮೂಷಿಕಾಸುರ ಶುಕ್ರಾಚಾರ್ಯರ ಪ್ರಮೇಯದಿಂದ ದೇವತೆಗಳ ಮೇಲೆ ಯುದ್ಧ ಘೋಷಣೆ ಮಾಡಿದನು.ದೇವತೆಗಳು ಗಣನಾಥನ ಶರಣು ಬೇಡಿದರು. ಗಣಪತಿ ಮೂಷಿಕಾಸುರ ನೊಡೆ ಭೀಕರ ಯುದ್ಧ ಮಾಡಿದರು. ಶಸ್ತ್ರಗಳಿಂದ ಮೂಷಿಕಾಸುರ ಸೋಲದಿರಲು ಗಣಪತಿ ದಂತವನ್ನು ಪ್ರಯೋಗಿಸಿ ಮೂಷಿಕಾಸುರನನ್ನು ಸೋಲಿಸಿದರು. ಪ್ರಾಣಭೀತಿಯಿಂದ ಗಣಪತಿಯನ್ನು ಶರಣು ಬೇಡಿ ಪ್ರಾಣಭಿಕ್ಷೆಯಾಚಿಸಿದನು. ಗಣಪತಿ ಕರುಣಿಸಿ. ಮೂಷಿಕಾಸುರನನ್ನು ವಾಹನವಾಗಲು ಅಜ್ಞಾಪಿಸಿದರು.ಮೂಷಿ ಕಾಸುರನ ಮಡದಿ ಪ್ರಿಯಂವದ ಪತಿಯಿಂದ ದೂರವಾಗದೆ ಗಣಪತಿಗೆ ಛತ್ರವಾದಳು. ಅಂದಿನಿಂದ ಗಣನಾಥನು ಏಕದಂತರಾದರು ಮತ್ತು ಮೂಷಿಕಾಸುರ ಗಣಪತಿಯ ವಾಹನವಾಯಿತು. **ಮಹಾಭಾರತ ಬರೆದರು:** ಮಹರ್ಷಿವೇದ ವ್ಯಾಸರು ಮಹಾಭಾರತವ ಬರೆಯಲು ಗಣಪತಿಯನ್ನು ಆಶ್ರಯಿಸಿದರು. ನಿಲ್ಲಿಸದೆ ಹೇಳಿದರೆ ಬರೆಯುವೆ ಎಂದಾಗ ವ್ಯಾಸರು ಹೇಳುತ್ತಾ ನಿಲ್ಲಿಸದೆ ಪೂರ್ಣ ಭಾರತವನ್ನು ಗಣಾಧಿಪತಿ ಸುನಾಯಾಸವಾಗಿ ಬರೆದರು. ಘಂಟವ ಹಿಡಿದು ವೇಗದಿ ಬರೆಯುವುದರಲ್ಲಿ ಗಣನಾಥರದೇ ಅಗ್ರಸ್ಥಾನ. **ಪುರಾಣಗಳಲ್ಲಿ ಗಣಪತಿಯ ಮಹಿಮೆ:** ಬ್ರಹ್ಮವೈವರ್ತಪುರಾಣ, ಅಗ್ನಿ ಪುರಾಣ ಮತ್ತು ವಾಮನ ಪುರಾಣದಲ್ಲಿ ಗಣಪತಿಯ ಮಹಿಮೆಯನ್ನು ವರ್ಣಿಸಲಾಗಿದೆ. ಕುರುಕ್ಷೇತ್ರ ಯುದ್ಧ ಹಿನ್ನಲೆ ಕೃಷ್ಣ ಪರಮಾತ್ಮನ ಸೂಚನೆ ಮೇರೆಗೆ ಧರ್ಮರಾಜ ಗಣಪತಿ ಆರಾಧನೆ ಮಾಡಿ. ಪಾಂಡವರು ಯುದ್ಧದಲ್ಲಿ ವಿಜಯ ಸಾಧಿಸಿದರು. ವಿನಾಯಕ ವ್ರತ ಪುಣ್ಯದಾಯಕ ಮತ್ತು ಕೇಳಿದ ವರ ಕೊಡುವ ದೇವರು. ಮನೆಯಲ್ಲಿ ವಿನಾಯಕ ಪ್ರತಿಮೆಯೊಂದಿಗೆ ಫಲ, ಪುಷ್ಪ,ಏಕವಿಂಶತಿ (ಇಪ್ಪತ್ತೊಂದು) ಪತ್ರಿಗಳಿಂದ ಷೋಡಶೋಪಚಾರ ಪೂಜೆ ಮಾಡಬೇಕು. ಪೂಜೆಯ ನಂತರ ಕಥಾ ಶ್ರವಣ ಮಾಡಬೇಕು. ಕಡುಬು, ಪಾಯಸ ಇತ್ಯಾದಿ ಭಕ್ಷ್ಯಗಳನ್ನು ನೈವೇದ್ಯ ಮಾಡಬೇಕು. ವರಸಿದ್ಧಿ ವಿನಾಯಕ ಪೂಜೆಯನ್ನು ಭಕ್ತಿಯಿಂದ ಆಚರಿಸಿ ಧನ್ಯರಾಗೋಣ.

.......... ಮಂಗಳಂ ಗಣನಾಥ, ಮಂಗಳಂ ವಿಘ್ನ ವಿನಾಯಕ, ಜಯ ಮಂಗಳಂ ಶುಭ ಮಂಗಳಂ................



## ಆಸ್ಥಾನ ಮಂಟಪ

**ತಿರುಮಲೆಯ ಸ್ವಾಮಿ ದೇವಸ್ಥಾನದ ಎದುರಲ್ಲಿ ಶ್ರೀ ಬೇಡಿ ಆಂಜನೇಯ ಸ್ವಾಮಿಯ ಗುಡಿಯಿದೆ. ಈ ಗುಡಿಯ ಹಿಂಬದಿಯಲ್ಲಿ ಬಹಳಾ ಎತ್ತರವಾದ ವಿಶಾಲವಾದ ಭವನವಿದೆ. ಅದೇ ಆಸ್ಥಾನಮಂಟಪ. ಪ್ರತಿನಿತ್ಯ ಈ ಮಂಟಪದಲ್ಲಿ ಪುರಾಣ - ಪ್ರವಚನಗಳು , ಸಂಗೀತ ಕಾರ್ಯಕ್ರಮಗಳು. ಹರಿಕಥಾಶ್ರವಣಗಳು ನಡೆಯುತ್ತವೆ. ಈ ಭವನದಲ್ಲಿ ಇವೆಲ್ಲವುಗಳನ್ನು ಕೇಳಿ ಆಧ್ಯಾತ್ಮಿಕ ಉತ್ತೇಜವನ್ನು ಹೊಂದಿರಿ.**

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ (ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ಜೊತೆಗೆ ದೂರವಾಣಿ ಸಂಖ್ಯೆ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

( ದೂರವಾಣಿ ಸಂಖ್ಯೆಯನ್ನು ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ: ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಒ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸುವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ. ತಾವು ಹಳೆಯ ಚಂದಾದಾರರಾಗಿದ್ದರೆ ಚಂದಾ ಪುನರುದ್ಧಾರ - ಪುನರ್ವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿ ವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳಬೇಕು.

ಇ. ನಿಮಗೆ ಬೇಕಾದ ಭಾಷೆಯನ್ನು ಖಚಿತವಾಗಿ ನಮೂದಿಸಬೇಕು.

ಇವೆಲ್ಲ ವಿವರಗಳನ್ನೂ ಸರಿಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**


Edited and Published on behalf of T.T.Devasthanams by Dr. K. Radha Ramana, M.A., M.Phil., Phd., Chief Editor, T.T.D. and Printed at T.T.D. Press by Sri R.V. Vijaya Kumar, B.A., B.Ed., Dy. E.O. (Publications & Press), T.T.D. Press, Tirupati - 517 507.

ತಿರುಮಲೆ ತಿರುಪತಿ ದೇವಸ್ಥಾನಗಳು

## ಆಂಧ್ರ ಪ್ರದೇಶ ರಾಷ್ಟ್ರದ ನೂತನ ರಾಜ್ಯಪಾಲರಾಗಿ ಪ್ರಮಾಣ ಸ್ವೀಕಾರ ಮಾಡುವ ಹಿಂದಿನ ದಿನ (23-07-2019) ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರನ್ನು, ತಿರುಮಲೆ ಶ್ರೀ ವರಾಹ ಸ್ವಾಮಿಯವರನ್ನು ಮತ್ತು ಶ್ರೀ ವೆಂಕಟೇಶ್ವರ ಸ್ವಾಮಿಯವರ ದರ್ಶನವನ್ನು ಪಡೆದ ಗೌ|| ಶ್ರೀ ಬಿಶ್ವ ಭೂಷಣ್ ಹರಿಚಂದನ್ ರವರು












ತಿ.ತಿ.ದೇವಸ್ಥಾನಗಳ ತಿರುಮಲೆ ಪ್ರತ್ಯೇಕ ಅಧಿಕಾರಿಯಾಗಿ ನೇಮಕಗೊಂಡ ಶ್ರೀ.ಎ.ವಿ. ಧರ್ಮಾರೆಡ್ಡಿ ಯವರು 19-07-2019 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ಶ್ರೀ. ಪಿ. ಬಸಂತ್‌ಕುಮಾರ್, ಐ.ಎ.ಎಸ್., ತಿ.ತಿ.ದೇ. ಸಂಯುಕ್ತ ಕಾರ್ಯ ನಿರ್ವಹಣಾಧಿಕಾರಿ (ತಿರುಪತಿ) ಯವರು ಪ್ರಮಾಣ ಸ್ವೀಕಾರ ಮಾಡಿಸಿದರು.



ತಿ.ತಿ.ದೇವಸ್ಥಾನಗಳ ಶ್ರೀ ವೆಂಕಟೇಶ್ವರ ಭಕ್ತಿ ಚಾನಲ್ ಅಧ್ಯಕ್ಷರಾಗಿ ಮತ್ತು ವ್ಯವಸ್ಥಾಪಕರಾಗಿ ಶ್ರೀ ಪೃಥ್ವಿರಾಜ್ ಬಾಲಿರೆಡ್ಡಿಯವರು 28-07-2019 ರಂದು ಪ್ರಮಾಣ ಸ್ವೀಕಾರ ಮಾಡಿದರು.



SAPTHAGIRI (KANNADA) ILLUSTRATED MONTHLY Published by
Tirumala Tirupati Devasthanams
25-08-2019 Regd. with the Registrar of Newspapers under
"RNI" No.10742, Postal Regd.No.TRP/14 - 2018-2020
Licensed to post without prepayment
No.PMGK/RNP/WPP-04/2018-2020

07-10-2019
ಸೋಮವಾರ
ಹಗಲು: ರಥೋತ್ಸವ